ವೇದಕ್ಕೆ ಒರೆಯ ಕಟ್ಟುವೆ...
ಆಗಮದ ಮೂಗ ಕೊಯಿವೆ

ಬಸವಣ್ಣ ಏಕೆ ಬೇಕು?

ರಂಜಾನ್ ದರ್ಗಾ




If you his (Basava's) followers practice his precepts, you would uplift not just Bharat, but the World.

Mahatma Gandhi

In

the year 1924,

In Belgaum



ರಂಜಾನ್ ದರ್ಗಾ

ಕರ್ನಾಟಕ ಸರ್ಕಾರದ ರಾಷ್ಟ್ರೀಯ ಬಸವ ಪುರಸ್ಕಾರ ಪ್ರಶಸ್ತಿ ವಿಜೇತ ರಂಜಾನ್ ದರ್ಗಾ ಅವರು ಬಂಡಾಯ ಸಾಹಿತ್ಯ ಪರಂಪರೆಯ ಶಕ್ತಿಶಾಲಿ ಕವಿಗಳಲ್ಲಿ ಒಬ್ಬರು. ಸಮಾಜ ವಿಜ್ಞಾನಿಯ ದೃಷ್ಟಿಕೋನವಿರುವ ದರ್ಗಾ ಅವರ ಚಿಂತನೆಗಳ ಕೇಂದ್ರ ಕಾಳಜಿ ಶರಣ ಸಾಹಿತ್ಯ. ಸಮತಾವಾದ ಮತ್ತು ಸೂಫಿ ವಿಚಾರಗಳ ನೆಲೆಯಲ್ಲಿ ವಚನ ಚಳವಳಿಯ ತತ್ವಗಳಿಗೆ ಹೊಸ ಹೊಳಹು ನೀಡುವ ಪ್ರಯತ್ನವನ್ನು ಅವರು ಮಾಡಿದ್ದಾರೆ.

ಬಿಜಾಪುರದಲ್ಲಿ 20.6.1951 ರಂದು ಜನಿಸಿದ ದರ್ಗಾ ಅವರ ಬರಹಗಳಲ್ಲಿ ಬುದ್ಧ, ಪೈಗಂಬರ್, ಬಸವಣ್ಣ, ಮಾರ್ಕ್ಸ್, ವಿವೇಕಾನಂದ ಮತ್ತು ಅಂಬೇಡ್ಕರ್ ಅವರ ಚಿಂತನೆಗಳನ್ನು ಒಟ್ಟೊಟ್ಟಿಗೆ ಕಾಣಬಹುದು. ಪ್ರಜಾವಾಣಿ ಪತ್ರಿಕೆಯಲ್ಲಿ ಸುದ್ದಿ ಸಂಪಾದಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವ ರಂಜಾನ್ ದರ್ಗಾ ಈಗ ಧಾರವಾಡವಾಸಿಯಾಗಿದ್ದಾರೆ.

ಕಾವ್ಯ ಬಂತು ಬೀದಿಗೆ (ಕಾವ್ಯ–1978), ಹೊಕ್ಕುಳಲ್ಲಿ ಹೂವಿದೆ (ಕಾವ್ಯ), ನೆಲ್ಸನ್ ಮಂಡೆಲಾ, ಬಸವಣ್ಣನವರ ದೇವರು, ಬಸವಧರ್ಮದ ವಿಶ್ವಸಂದೇಶ, ಅಮೃತ ಮತ್ತು ವಿಷ, ಬಸವಪ್ರಜ್ಞೆ, ಬಸವಧರ್ಮ ದರ್ಶನ, ನಡೆ ನುಡಿ ಸಿದ್ಧಾಂತ, ಲಿಂಗವ ಪೂಜಿಸಿ ಫಲವೇನಯ್ಯಾ, ಜಾತಿ ವ್ಯವಸ್ಥೆಗೆ ಸವಾಲಾದ ಶರಣರು, ಶರಣರ ಸಮಗ್ರ ಕ್ರಾಂತಿ, ಸೌಹಾರ್ದ ಸೌರಭ, ಬಸವಣ್ಣ ಮತ್ತು ಅಂಬೇಡ್ಕರ್, ಅಮೃತ ಮತ್ತು ವಿಷ, ಮೂರ್ತ ಮತ್ತು ಅಮೂರ್ತ, ಸಾಹಿತ್ಯ ಮತ್ತು ಸಮಾಜ, ಮುಂತಾದವು ಅವರ ಮಹತ್ವದ ಪ್ರಕಟಿತ ಕೃತಿಗಳಾಗಿವೆ.

ಬಸವಣ್ಣ ಏಕೆ ಬೇಕು?

ರಂಜಾನ್ ದರ್ಗಾ

ಲಡಾಯಿ ಪ್ರಕಾಶನ
ಗದಗ

'Basavanna Eke Beku ?'
Collection of articles on Basavanna in kannada

By Ramjan Darga
Siddharoodha Colony
Madihal
Dharwad -580 006

Mobile: 9242470384
E-mail: ramjandarga@gmail.com

Published by
LADAI PRAKASHANA
#21, Prasad Hostel,
Gadag-582101,
Cell:9480286844,
ladaibasu@gmail.com

Pages : 88
Price : Rs. 60
First Edition: 2017
Copies: 1000, Size: 1/8 Demmy
Used Paper : 70 gsm book print
Jacket & Inner layout: Arun Kumar.G

Printed at: ILA Mudrana, Bangalore



To Aditi with love and affection

ಅದಿತಿ ಗೆ

ಪ್ರೀತಿ ಮತ್ತು ಮಮತೆಯಿಂದ

ಪ್ರಕಾಶನದ ಪರಿಚಯ

ಪ್ರಿಯರೆ,

ಲಡಾಯಿ ಪ್ರಕಾಶನ ಸಮಾನತೆಯ ಸಮಾಜದ ಅಕ್ಷರ ಸಂಸ್ಕೃತಿ ಕಟ್ಟುವ ಗೆಳೆಯರಿಗಾಗಿ ಮೈದಾಳಿದ ಸಂಸ್ಥೆ. ಪ್ರಗತಿಪರ ವಿಚಾರಗಳ ಸಾಹಿತ್ಯವನ್ನು ಜನರಿಗೆ ತಲುಪಿಸುವ ಸಂಗತಿಗಾಗಿ ಪ್ರಕಾಶನ ಆರಂಭವಾಗಿದೆ. ವರ್ತಮಾನ ಸಂದರ್ಭದಲ್ಲಿ ಸಮಾನತೆಯ ಸಮಾಜವನ್ನು ಕಟ್ಟುವ ಉದ್ದೇಶದಿಂದ ಜೀವಪರ ಸಂಗಾತಿಗಳು ನಡೆಸುವ ಎಲ್ಲ ಪ್ರಯತ್ನಗಳಿಗೆ ಪೂರಕವಾಗಿ ಜನರ ಆಲೋಚನೆಗಳನ್ನು ರೂಪಿಸಲು ಸಾಧ್ಯವಾಗುವ ಸಾಹಿತ್ಯವನ್ನು ಪ್ರಕಟಿಸುವ ವಿಚಾರ ನಮ್ಮದಾಗಿದೆ. ಇಂಥ ಪ್ರಗತಿಪರ ಸಾಹಿತ್ಯವನ್ನು ಸಾಮಾನ್ಯ ಜನರು ಕೊಳ್ಳಲು ಸಾಧ್ಯವಾಗುವ ಬೆಲೆಯಲ್ಲಿ ಕೊಡುವ ಸಂಕಲ್ಪ ನಮ್ಮದಾಗಿದೆ

ನಾವೀಗ ಸಂಘರ್ಷದ ಬದುಕಿನಲ್ಲಿ ಬಾಳುತ್ತಿದ್ದೇವೆ. ಪ್ರಭುತ್ವ ಪ್ರಾಯೋಜಿತ ಕೋಮುವಾದ, ಜಾಗತೀಕರಣ, ಪ್ರಾದೇಶಿಕತೆ, ಭಯೋತ್ಪಾದನೆಗಳು ನಮ್ಮ ನೆಲದಲ್ಲಿ ಸಮಸ್ಯೆಗಳಾಗಿ ಬೆಳೆದು ನಮ್ಮ ಬುಡವನ್ನೇ ಅಲ್ಲಾಡಿಸುವಷ್ಟು ಶಕ್ತವಾಗಿವೆ.

ಅಕ್ಷರಗಳಿಂದ ಏನೂ ಆಗುವುದಿಲ್ಲ ಎಂದು ಹೇಳುವ ಒಂದು ಅಭಿಪ್ರಾಯವಿದೆ. ಆದರೆ ಅಕ್ಷರಗಳಿಂದ ಏನೆಲ್ಲವನ್ನು ಸಾಧಿಸಬಹುದು ಅನ್ನುವುದು ಅಷ್ಟೇ ಸತ್ಯ. ಅಕ್ಷರ ಸಂಸ್ಕೃತಿಯೇ ಮಾಯವಾಗುತ್ತಿರುವ ಸಂದರ್ಭ ಒಂದು ಕಡೆಯಾದರೆ, ಯಾವುದನ್ನು ಮತ್ತು ಎಂಥದನ್ನು ನಾವು ಓದಬೇಕು, ನಮ್ಮರಿವಿಗೆ ಯಾವುದು ಪೂರಕ, ವರ್ತಮಾನದ ಸಂಘರ್ಷಗಳಿಗೆ ಅಕ್ಷರಗಳು

ಯಾವ ರೀತಿಯ ಉತ್ತರ ಕೊಡಬಲ್ಲವು ಎನ್ನುವುದನ್ನು ಜನತೆಯ ಹತ್ತಿರ ನಾವೇ ಕೊಂಡೊಯ್ಯಬೇಕಾಗಿದೆ. ಇದು ನಮ್ಮೆದುರಿನ ಅನಿವಾರ್ಯತೆಗಳಲ್ಲಿ ಒಂದು. ಲಡಾಯಿ ಪ್ರಗತಿಪರರೆಲ್ಲರ ಪ್ರಕಾಶನ. ಈ ವಿಚಾರಧಾರೆಯ ಲೇಖಕರ ಸಾಹಿತ್ಯವನ್ನು ಜನರಿಗೆ ತಲುಪಿಸುವ ಕಾರ್ಯವನ್ನು ಪ್ರಕಾಶನ ಮಾಡುತ್ತಿದೆ.

'ಖರೀದಿ'ಗಳ ಗೊಡವೆ ಬಿಟ್ಟು ಓದುವ ಜನಗಳ ನಂಬಿ ಪುಸ್ತಕ ಪ್ರಕಾಶನ ಮಾಡಲು ಹೊರಟಿರುವ ನಮ್ಮೊಂದಿಗೆ ಸಹಕರಿಸುವುದೆಂದರೆ ನಮ್ಮ ಪ್ರಕಟಣೆಗಳನ್ನು ಜನರಿಗೆ ತಲುಪಿಸುವ ಕಾರ್ಯಗಳಲ್ಲಿ ನೆರವಾಗುವುದು. ಒಂದು ವಿಶಾಲ ಓದುವ ವಲಯವನ್ನು ಸೃಷ್ಟಿಸಿಕೊಳ್ಳದಿದ್ದರೆ ನಮ್ಮ ವಿಚಾರಗಳು ಮೂರ್ತರೂಪ ಪಡೆಯಲಾರವು. ಈ ಸೂಕ್ಷ್ಮವನ್ನು ಗಮನಿಸಿ ಅಂಥ ಓದುವ ವಲಯವನ್ನು ಸೃಷ್ಟಿಸಿಕೊಳ್ಳಲು ಪ್ರಕಾಶನ ಒಂದು ರೂಪುರೇಷೆಯನ್ನು ಹೊಂದಿದೆ. 500 ರೂ. ಕೊಟ್ಟು ವಾರ್ಷಿಕ ಚಂದಾದಾರರಾದವರಿಗೆ ಆ ವರ್ಷದ 750 ರೂಗಳ ಮುಖಬೆಲೆಯ ಪುಸ್ತಕಗಳನ್ನು ಕೊಡುತ್ತೇವೆ. ನಮ್ಮ ಇತರ ಪುಸ್ತಕಗಳಿಗೆ ಶೇ. 25 ರಿಯಾಯಿತಿಯೂ ಸಿಗುತ್ತದೆ.

ನೀವು ಚಂದಾದಾರರಾಗಬಹುದು. 3000 ರೂ. ವಂತಿಗೆ ನೀಡಿ ಆಜೀವ ಸದಸ್ಯರಾದರೆ ಪ್ರತಿವರ್ಷ ರೂ 300 ಮುಖಬೆಲೆಯ ಪುಸ್ತಕಗಳು ನಿಮಗೆ ತಲುಪುತ್ತವೆ. 5000 ರೂ. ನೀಡಿ ಆಜೀವ ಸದಸ್ಯರಾದರೆ ಪ್ರತಿವರ್ಷ ರೂ 500 ಮುಖಬೆಲೆಯ ಪುಸ್ತಕಗಳು ನಿಮಗೆ ತಲುಪುತ್ತವೆ. 10000 ರೂ. ವಂತಿಗೆ ನೀಡಿ ಆಜೀವ ಸದಸ್ಯರಾದರೆ ಪ್ರತಿವರ್ಷ ರೂ 1000 ಮುಖಬೆಲೆಯ ಪುಸ್ತಕಗಳು ನಿಮಗೆ ತಲುಪುತ್ತವೆ.. 15000 ರೂ ವಂತಿಗೆ ನೀಡಿ ಆಜೀವ. ಸದಸ್ಯರಾದರೆ ಪ್ರತಿವರ್ಷ ರೂ 1500 ಮುಖಬೆಲೆಯ ಪುಸ್ತಕಗಳು ನಿಮಗೆ ತಲುಪುತ್ತವೆ. ಒಂದು ಪುಸ್ತಕದ ಪ್ರಕಟಣಾ ವೆಚ್ಚವನ್ನು ಭರಿಸಿ ಆ ಪುಸ್ತಕ ಸುಲಭವಾಗಿ ಜನಗಳಿಗೆ ತಲುಪಲು ನೆರವಾಗಬಹುದು. ನಿಮ್ಮ ಸಹಕಾರ, ನೆರವು ಮತ್ತು ಪ್ರಕಾಶನದ ಭಾಗವಾಗುವಿಕೆ ನಮ್ಮ ಪ್ರಯತ್ನಗಳ ಬಲವನ್ನು ಹೆಚ್ಚಿಸುತ್ತದೆ. ಬನ್ನಿ, ಕನ್ನಡ ಸಾಹಿತ್ಯವನ್ನು ಪ್ರಗತಿಪರ ಹಾದಿಯಲ್ಲಿ ಮುನ್ನಡೆಸೋಣ.

–ಬಸೂ

ನಿವೇದನೆ

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ.
ಜಲ ಬಿಂದುವಿನ ವ್ಯವಹಾರ ಒಂದೇ,
ಆಸೆಯಾಮಿಷ ರೋಷ ಹರುಷ ವಿಷಯಾದಿಗಳೆಲ್ಲ ಒಂದೇ.
ಏನನೋದಿ ಏನ ಕೇಳಿ ಏನು ಫಲ?
ಕುಲಜನೆಂಬುದಕ್ಕೆ ಆವುದು ದೃಷ್ಟ?
ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮದ್ಭವಂ ।
ಆತ್ಮ ಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ ॥ ಎಂದುದಾಗಿ,
ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ.
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?
ಇದು ಕಾರಣ ಕೂಡಲಸಂಗಮದೇವಾ,
ಲಿಂಗಸ್ಥಲವನರಿದವನೆ ಕುಲಜನು.

–ಬಸವಣ್ಣ

ಮಾನವರ ಹುಟ್ಟು ಮತ್ತು ಪ್ರವೃತ್ತಿಗಳು ಒಂದೇ ಆಗಿವೆ. ಉತ್ತಮ ಕುಲದಲ್ಲಿ ಹುಟ್ಟಿದವರು ಎಂಬುದಕ್ಕೆ ಯಾವ ಸಾಕ್ಷಿಯೂ ಇಲ್ಲ. ಜಾತಿಗಳು ಮೂಲದಲ್ಲಿ ಕಾಯಕಗಳೇ ಇವೆ. ಆದ್ದರಿಂದ ಜಾತಿಗಳು ಸ್ಥಗಿತಗೊಂಡ ವರ್ಗಗಳು. ಮಾನವ, ಕಬ್ಬಿಣದ ಕಾಯಕದ ಮೂಲಕ ಕಮ್ಮಾರನಾದ, ಬಟ್ಟೆ ಒಗೆಯುವ ಮೂಲಕ ಮಡಿವಾಳನಾದ, ಮಗ್ಗದ ಕೆಲಸದಲ್ಲಿ ತೊಡಗಿದ ಕಾರಣ ನೇಕಾರನಾದ, ವೇದವನ್ನು ಓದುವುದನ್ನೇ ಕಾಯಕ ಮಾಡಿಕೊಂಡು ವೈದಿಕನಾದ. ಎಲ್ಲರೂ ಒಂದೇ ತೆರನಾಗಿ

ಜನಿಸಿದ್ದಾರೆ. ಬಾಯಿ, ಭುಜ, ತೊಡೆ, ಪಾದ, ಕರ್ಣ ಮುಂತಾದ ಅಂಗಾಂಗಗಳಿಂದ ಜನಿಸಿದವರು ಯಾರೂ ಇಲ್ಲ ಎಂದು ಬಸವಣ್ಣನವರು ಈ ವಚನದಲ್ಲಿ ಪ್ರತಿಪಾದಿಸಿದ್ದಾರೆ.

ಉಳ್ಳವರು ಮತ್ತು ಬಡವರು ಎಂಬ ವರ್ಗಗಳು ಸತ್ಯ, ಆದರೆ ಕುಲಗೋತ್ರಗಳು ಅಸತ್ಯ. ಜಾತಿಗಳನ್ನು ಅಲ್ಲಗಳೆದ ಬಸವಣ್ಣನವರು ಜಾತಿಗಳ ಮೂಲದ ಕಾಯಕಗಳನ್ನು ಎತ್ತಿ ಹಿಡಿದರು. 'ದೇವಸಹಿತ ಭಕ್ತ ಮನೆಗೆ ಬಂದಡೆ ಕಾಯಕವಾವುದೆಂದು ಬೆಸಗೊಂಡೆನಾದಡೆ ನಿಮ್ಮಾಣೆ! ನಿಮ್ಮ ಪುರಾತರಾಣೆ! ತಲೆದಂಡ! ತಲೆದಂಡ! ಕೂಡಲಸಂಗಮದೇವಾ ಭಕ್ತರಲ್ಲಿ ಕುಲವನರಿಸಿದಡೆ ನಿಮ್ಮ ರಾಣಿವಾಸದಾಣೆ' ಎಂದು ಬಸವಣ್ಣನವರು ಹೇಳುವ ಮೂಲಕ ಲಿಂಗವಂತರಲ್ಲಿ ಕುಲ ಜಾತಿಗಳಿಲ್ಲ, ಆದರೆ ಕಾಯಕಗಳಿವೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಯಾವ ಕಾಯಕವೂ ದೊಡ್ಡದಲ್ಲ, ಯಾವ ಕಾಯಕವೂ ಚಿಕ್ಕದಲ್ಲ. ಆದ್ದರಿಂದ ಲಿಂಗವಂತರು ಮನೆಗೆ ಬಂದಾಗ ಅವರ ಕಾಯಕ ಯಾವುದೆಂದು ಕೇಳುವುದಿಲ್ಲವೆಂದು ಬಸವಣ್ಣನವರು ಹೇಳುತ್ತಾರೆ. ಲಿಂಗವಂತ ಧರ್ಮದಲ್ಲಿ ಸಮಗಾರ, ಡೋಹರ, ಮಾದರ, ಮಡಿವಾಳ, ಅಂಬಿಗ ಮುಂತಾದವು ಕಾಯಕಗಳೇ ಹೊರತು ಜಾತಿಗಳಲ್ಲ. ಹೀಗೆ ಬಸವಣ್ಣನವರು ಜಾತಿಗಳನ್ನು ಅಲ್ಲಗಳೆಯುವ ಮೂಲಕ ಕಾಯಕಜೀವಿಗಳನ್ನು ಒಂದುಗೂಡಿಸಿ ದುಡಿಯುವ ವರ್ಗವಾಗಿಸಿದ್ದಾರೆ.

'ಇಷ್ಟಲಿಂಗದ ಮೂಲಕ ಎಲ್ಲ ಕಾಯಕಜೀವಿಗಳನ್ನು ಒಂದು ಮಾಡಿದ್ದು ಮಧ್ಯಯುಗದ ಮಹಾನ್ ಸಾಧನೆ. ಈ ಸಾಧನೆಯನ್ನು ಭಾರತೀಯ ಸಮಾಜ ಇಂದಿಗೂ ಸಾಧಿಸುವಲ್ಲಿ ವಿಫಲವಾದದ್ದು ರಾಷ್ಟ್ರೀಯ ದುರಂತವಾಗಿದೆ. ಭಾರತೀಯ ಕಾಯಕಜೀವಿಗಳು ವರ್ಗವಾಗಿ ಒಂದಾಗದೆ ಜಾತಿ ಉಪಜಾತಿಗಳ ಗುಂಪುಗಳಲ್ಲೇ ಉಳಿದುಕೊಂಡಿರುವುದರಿಂದ ಭಾರತದೇಶ ಜಾತಿವಾದಿಗಳ, ಕೋಮುವಾದಿಗಳ ಮತ್ತು ಉಗ್ರವಾದಿಗಳ ರಣರಂಗವಾಗುತ್ತಿದೆ. ಫ್ಯಾಸಿಸ್ಟ್ ಶಕ್ತಿಗಳು ಧರ್ಮದ ಹೆಸರಿನಲ್ಲಿ ತಮ್ಮ ವಿಕೃತ ರೂಪವನ್ನು ಪ್ರದರ್ಶಿಸುತ್ತಿವೆ. ಇಂಥ ಅಸಹನೀಯ ಸಂದರ್ಭದಲ್ಲಿ ಬಸವತತ್ತ್ವ ಈ ದೇಶವನ್ನು ಫ್ಯಾಸಿಸ್ಟರಿಂದ ರಕ್ಷಿಸುವ ಸಾಮರ್ಥ್ಯ ಹೊಂದಿದೆ. ಬಸವಣ್ಣನವರಿಗಿಂತ ಮೊದಲು ಇಂಥ ಜಾತಿಗಳನ್ನು ವರ್ಗವಾಗಿಸುವ ಐತಿಹಾಸಿಕ ಕಾರ್ಯವನ್ನು ಯಾರೂ ಮಾಡಿದ್ದಿಲ್ಲ ಎಂಬುದು ಗಮನಾರ್ಹವಾಗಿದೆ.

ಬಸವತತ್ತ್ವಕ್ಕೆ ಮಹಾ ಪರಂಪರೆಯಿದೆ. ಮಹಾಭಾರತದ ಕಾಲದಲ್ಲೇ ಚಾರ್ವಾಕರು ಎಂದು ಕರೆಯಿಸಿಕೊಳ್ಳುವ ಲೋಕಾಯತರು ಶಾಂತಿ, ಸೌಹಾರ್ದ ಮತ್ತು ಸಮಾನತೆಗಾಗಿ ಧ್ವನಿ ಎತ್ತಿದ್ದಾರೆ. ಅವರು ಈ ಭೂಮಿಯ ಬಗ್ಗೆ ಸುಂದರವಾಗಿ ಮಾತನಾಡುತ್ತ ಚಾರ್ವಾಕರೆನಿಸಿದರು. ಈ ಲೋಕಕ್ಕೆ ಪ್ರಿಯರಾದ ಕಾರಣ ಲೋಕಾಯತರು ಎನಿಸಿದರು. ಲೋಕಾಯತರು ಹದ ಮಾಡಿದ ಸಾಮಾಜಿಕ ನ್ಯಾಯದ ಭೂಮಿಯಲ್ಲಿ 2600

ವರ್ಷಗಳಷ್ಟು ಹಿಂದೆಯೆ ಬುದ್ಧ ಮಾನವೀಯತೆಯ ಬೀಜ ಬಿತ್ತಿದ. ಆ ಮೊಳಕೆಯೊಡೆದ ಬೀಜವನ್ನು ಬಸವಣ್ಣ 12ನೇ ಶತಮಾನದಲ್ಲಿ ಹೆಮ್ಮರವಾಗಿ ಬೆಳೆಸಿದರು. ನಂತರ 20ನೇ ಶತಮಾನದಲ್ಲಿ ಅಂಬೇಡ್ಕರರು ಆ ಹೆಮ್ಮರದ ಫಲವನ್ನು ಸಂವಿಧಾನದ ರೂಪದಲ್ಲಿ ಕೊಟ್ಟರು.

ಬುದ್ಧ, ಬಸವ, ಅಂಬೇಡ್ಕರರ ಅವೈದಿಕ ಮಾರ್ಗದರ್ಶನವನ್ನು ಭಾರತ ಕಡೆಗಣಿಸಿದರೆ ಅದು ವಿಕೃತಭಾರತವಾಗಿ ಮಾರ್ಪಡುತ್ತದೆ. ಇನ್ನೂ ಕಾಲ ಮಿಂಚಿಲ್ಲ, ಈ ಮಹಾಪುರಷರು ಹಾಕಿಕೊಟ್ಟ ಮಾರ್ಗದಲ್ಲೇ ಮುಂದುವರಿಯುವುದರ ಮೂಲಕ ಭಾರತೀಯರು ಜಾತಿ ಮತ್ತು ವರ್ಗಗಳಿಲ್ಲದ ನವಸಮಾಜದ ನಿರ್ಮಾಣ ಮಾಡಬೇಕಿದೆ.

12ನೇ ಶತಮಾನದಲ್ಲಿ ಬಸವಣ್ಣನವರು ಬಹಳಷ್ಟು ಮಹತ್ವದ ಕಾರ್ಯಸಾಧನೆ ಮಾಡಿದ್ದಾರೆ. ಕಾಯಕಜೀವಿಗಳು ಜಾತೀಯತೆಯಿಂದ ಹೊರ ಬಂದು ದುಡಿಯುವ ವರ್ಗವಾದಾಗಲೇ ವರ್ಗರಹಿತ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂಬುದು ಅವರ ನಿಲವಾಗಿತ್ತು. ಐರೋಪ್ಯ ಖಂಡದ ಕಾರ್ಲ್ ಮಾರ್ಕ್ಸ್ ಅವರು 19ನೇ ಶತಮಾನದಲ್ಲಿ ಇದೇ ಸತ್ಯವನ್ನು ವೈಜ್ಞಾನಿಕವಾಗಿ ಕಂಡು ಹಿಡಿದರು.

'ಸ್ಟೇಟ್ ವಿಲ್ ವಿದರ್ ಅವೆ' (ಪ್ರಭುತ್ವ ನಾಶವಾಗಿ ಹೋಗುವುದು) ಎಂದು ಕಾರ್ಲ್ ಮಾರ್ಕ್ಸ್ 19ನೇ ಶತಮಾನದಲ್ಲಿ ಹೇಳಿದರು. ಪ್ರಜಾಪ್ರಭುತ್ವದ ಬೇರುಗಳು ಪ್ರಭುತ್ವದ ಬೇರುಗಳಿಗಿಂತ ಆಳವಾಗಿದ್ದಾಗ ಮಾತ್ರ ಇದು ಸಾಧ್ಯ ಎಂದು ಅವರು ಎಚ್ಚರಿಸಿದರು. ನವಕಲ್ಯಾಣ(ಶರಣಸಂಕುಲ)ದಲ್ಲಿ ಕಾಯಕಜೀವಿಗಳ ಪ್ರಜಾಪ್ರಭುತ್ವವನ್ನು ಸೃಷ್ಟಿಸಿದ ಬಸವಣ್ಣನವರು ಅದನ್ನು ಸಬಲಗೊಳಿಸುವಲ್ಲಿ ಮಗ್ನರಾಗಿದ್ದರು. ರಾಜಪ್ರಭುತ್ವವವನ್ನು ನೇರವಾಗಿ ಎದುರಿಸುವ ಸಂದರ್ಭ ಅದಾಗಿರಲಿಲ್ಲ. ಆದರೆ ಶರಣರ ಜಾತಿವಿನಾಶ ಚಳವಳಿಯಿಂದ ಕಲ್ಯಾಣದ ರಾಜಪ್ರಭುತ್ವ ಸಹಜವಾಗಿಯೆ ಶಿಥಿಲಗೊಳ್ಳತೊಡಗಿತು.

12ನೇ ಶತಮಾನದಲ್ಲಿ ಊಳಿಗಮಾನ್ಯ ಪದ್ಧತಿಯ ಉತ್ಪಾದನಾ ವ್ಯವಸ್ಥೆಯಿತ್ತು. ಉತ್ಪಾದನಾ ಸಲಕರಣೆಗಳು ಕಾಯಕಜೀವಿಗಳ ಸೊತ್ತಾಗಿದ್ದವು. ಇಂಥ ಸಂದರ್ಭದಲ್ಲಿ ದುಡಿಯುವ ವರ್ಗವನ್ನು ಜಾತಿವ್ಯವಸ್ಥೆಯಿಂದ ಬಿಡಿಸಿ ವರ್ಗಪ್ರಜ್ಞೆಯನ್ನು ಮೂಡಿಸುವುದು ಬಹಳ ಕಷ್ಟದ ಕೆಲಸವಾಗಿತ್ತು. ಅಲ್ಪಸಂಖ್ಯೆಯಲ್ಲಿದ್ದ ಶೋಷಕವರ್ಗ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ವರ್ಣಗಳಲ್ಲಿ ವಿಂಗಡಣೆಯಾಗಿತ್ತು. ಪಂಚಮರೂ ಸೇರಿದಂತೆ ಬಹುಸಂಖ್ಯೆಯಲ್ಲಿದ್ದ ಶೂದ್ರ ವರ್ಣ ವಿವಿಧ ಜಾತಿಗಳಲ್ಲಿ ವಿಂಗಡಣೆಯಾಗಿತ್ತು. ಇಂಥ ಸಂದರ್ಭದಲ್ಲಿ ಭಕ್ತಿಮಾರ್ಗದ ಮೂಲಕವೇ ಜನರನ್ನು ಒಂದುಗೂಡಿಸಲು ಸಾಧ್ಯ ಎಂಬುದನ್ನು ಬಸವಣ್ಣನವರು ಸಹಜವಾಗಿಯೆ ಅರ್ಥಮಾಡಿಕೊಂಡರು. ಬಸವಣ್ಣನವರ ಪರಿಕಲ್ಪನೆಯ ಭಕ್ತಿಯಲ್ಲಿ ವರ್ಣ, ಜಾತಿ ಮತ್ತು ವರ್ಗಗಳನ್ನು ಶಿಥಿಲಗೊಳಿಸುವ ಸಾಮರ್ಥ್ಯ ಇದೆ. ಆದರೆ ಒಂದು ತಲೆಮಾರಿನಲ್ಲೇ ಇದನ್ನೆಲ್ಲ

ಸಾಧಿಸಲಿಕ್ಕಾಗದು. ಇದೊಂದು ನಿರಂತರ ಪ್ರಕ್ರಿಯೆಯಾಗಿರುವಂಥದ್ದು. ವರ್ಗಪ್ರಜ್ಞೆಯೊಂದಿಗೆ ಕಾಯಕಜೀವಿಗಳು ಒಂದಾದಾಗಲೇ ಇದು ಸಾಧ್ಯ. ಅಂತೆಯೆ ಹಿಂಸೆಯ ಆ ಕಾಲಘಟ್ಟದಲ್ಲಿ ಅಹಿಂಸೆಯ ನೆಲೆಯಲ್ಲಿ ಭಾವನಾತ್ಮಕ ಸಮಾಜವೊಂದರ ನಿರ್ಮಾಣ ಮಾಡುವುದರ ಮೂಲಕ ರಾಜ್ಯಪ್ರಭುತ್ವಕ್ಕೆ ವಿಮುಖವಾಗುವುದು ಅನಿವಾರ್ಯವಾಗಿತ್ತು.

ಸಂತರು, ದಾಸರು, ಅನುಭಾವಿ ಕವಿಗಳು ಮತ್ತು ದಕ್ಷಿಣ ಭಾರತಕ್ಕೆ ಬಂದ ಸೂಫಿಗಳು ಹಾಗೂ ಭಾರತದಲ್ಲಿ ಜನಿಸಿದ ಸೂಫಿಗಳೆಲ್ಲರೂ 12ನೇ ಶತಮಾನದ ನಂತರದವರಾಗಿದ್ದಾರೆ. ಇವರಲ್ಲಿ ಕೆಲವರು ರಾಜಪ್ರಭುತ್ವಕ್ಕೆ ಮಾನವೀಯ ಮಾರ್ಗದರ್ಶನ ಮಾಡಲು ಬಯಸಿದರೆ ಬಹುಪಾಲು ಮಂದಿ ರಾಜಪ್ರಭುತ್ವಕ್ಕೆ ವಿಮುಖರಾದವರೇ ಇದ್ದಾರೆ.

ಸಂತರನ್ನು 'ಮಹಾರಾಜ' ಎಂದು ಕರೆಯಲಾಗುತ್ತಿದೆ. ಭಕ್ತಿಸಾಮ್ರಾಜ್ಯದ ಮಹಾರಾಜರಿವರು. ರಾಜಪ್ರಭುತ್ವಕ್ಕೆ ಅನುಭಾವಿಕ ನೆಲೆಯಲ್ಲಿ ಉತ್ತರನೀಡುತ್ತ ತಮ್ಮದೇ ಆದ ಜೀವನವಿಧಾನದೊಂದಿಗೆ ಅದಕ್ಕೆ ವಿಮುಖವಾಗಿಯೆ ಬಡವರಿಗೆ ಸಾಂತ್ವನದ ನೆಲೆಗಳನ್ನು ಗುರುತಿಸಿದವರು.

ಗಾಳಿಯಲ್ಲಿ ತೇಲುವ ಟೊಳ್ಳುಮಾತುಗಳನ್ನು ರಂಜಕವಾಗಿ ಹೇಳುತ್ತ ಬಡವರನ್ನು ಭ್ರಮಾಲೋಕಕ್ಕೆ ಒಯ್ಯುವ ವರ್ತಮಾನದ ನಡೆದಾಡುವ ದೇವರುಗಳು ಬಂಡವಾಳಶಾಹಿಗಳ ಹಿತಾಸಕ್ತಿಯನ್ನು ಕಾಪಾಡುತ್ತಿರುವುದರಿಂದ ಅವರೆಲ್ಲ ಭಕ್ತಿಪಂಥದವರ ರಾಜಪ್ರಭುತ್ವ ವಿರೋಧಿ ನಿಲವನ್ನು ಅರಿತುಕೊಳ್ಳಲು ಅಸಮರ್ಥರಾಗಿದ್ದಾರೆ.

ಜಾತಿ ಮತ್ತು ವರ್ಗಗಳ ಮೇಲೆ ಅವಲಂಬಿಸಿರುವ ರಾಜ್ಯಶಕ್ತಿಯನ್ನು ಭಕ್ತಿಪಂಥ ಅಹಿಂಸಾತ್ಮಕವಾಗಿ ಎದುರಿಸುತ್ತಲೇ ಬಂದಿದೆ. ಅದರ ಮೂಲ ಸೆಲೆ ಶರಣರ ಚಳವಳಿಯಲ್ಲಿದೆ.

'ಊರ ಮುಂದೆ ಹಾಲ ಹಳ್ಳ ಹರಿಯುತ್ತಿರಲು ... ... ಬಿಜ್ಜಳನ ಭಂಡಾರವೆನಗೇಕಯ್ಯಾ.', 'ಆನೀ ಬಿಜ್ಜಳನಿಗಂಜುವೆನೆ ಅಯ್ಯಾ', 'ಭವಿ ಬಿಜ್ಜಳನ ಗದ್ದುಗೆ ಕೆಳಗೆ ಕುಳ್ಳಿರ್ದು ಓಲೈಸಿಹೆನೆಂದು ನುಡಿವರಯ್ಯಾ ಪ್ರಮಥರು.', 'ಅರಸು ವಿಚಾರ, ಸಿರಿಯು ಶೃಂಗಾರ ಸ್ಥಿರವಲ್ಲ ಮಾನವಾ.', 'ಅರಸರಿಯದ ಬಿಟ್ಟಿ' 'ವ್ಯಾದನೊಂದು ಮೊಲವ ತಂದಡೆ ಸಲುವ ಹಾಗಕ್ಕೆ ಬಿಲಿವರಯ್ಯಾ (ಬೇಡನು ಮೊಲವನ್ನು ತಂದರೆ ಚಲಾವಣೆಯಲ್ಲಿರುವ ನಾಲ್ಕು ಕಾಸಿಗೆ ಖರೀದಿಸುವರು)., ನೆಲನಾಳ್ದನ ಹೆಣನೆಂದಡೆ ಒಂದಡಕೆಗೆ ಕೊಂಬವರಿಲ್ಲ ನೋಡಯ್ಯಾ.', 'ಅರಸು ಪರಿವಾರ ಕೈವಾರ (ಹೊಗಳುಭಟ್ಟರು) ನೋಡಯ್ಯಾ.' 'ಜೋಳವಾಳಿಂಗೆ (ಅನ್ನದ

ಋಣಕ್ಕಾಗಿ) ಬಿಜ್ಜಳನಿಗೆ ಆಳಾದಡೇನು, ವೇಳೆವಾಳಿಂಗೆ (ಸಮರ್ಪಣಾ ಭಾವಕ್ಕೆ) ಕೂಡಿಕೊಂಡಿಪ್ಪ ಕೂಡಲಸಂಗಮದೇವ' ಮುಂತಾದ ವಚನದ ಸಾಲುಗಳು, ಪ್ರಭುತ್ವದ ಬಗ್ಗೆ ಬಸವಣ್ಣನವರಿಗಿದ್ದ ನಿಲವಿನ ದ್ಯೋತಕಗಳಾಗಿವೆ. ಹಳೆ ವ್ಯವಸ್ಥೆಯ ಪ್ರಧಾನಿಯಾಗಿದ್ದುಕೊಂಡೂ ಹೊಸ ವ್ಯವಸ್ಥೆಯ ಹರಿಕಾರರಾಗಿದ್ದು ಬಸವಣ್ಣನವರ ಮಹಾ ಸಾಧನೆಯಾಗಿದೆ. ಇತಿಹಾಸದಲ್ಲಿ ಇಂಥ ಇನ್ನೊಂದು ಉದಾಹರಣೆ ಸಿಗುವುದಿಲ್ಲ.

ಬಸವಣ್ಣನವರು ಬಿಜ್ಜಳ ರಾಜನ ವಿರುದ್ಧವಾಗಿರಲಿಲ್ಲ. ಆದರೆ ಹಿಂಸಾಮಯವಾದ ರಾಜ್ಯಶಕ್ತಿಯ ವಿರುದ್ಧವಾಗಿದ್ದರು. ಬಿಜ್ಜಳನ ಪ್ರಧಾನಿಯಾಗಿದ್ದುಕೊಂಡು ದೈನಂದಿನ ಕಾರ್ಯಗಳನ್ನೆಲ್ಲ ನಿಷ್ಠೆಯಿಂದ ಮಾಡುತ್ತ ಮತ್ತು ಕಾಯಕಜೀವಿಗಳನ್ನು ಹುರಿದುಂಬಿಸುತ್ತ ಪ್ರಾಮಾಣಿಕತೆಯನ್ನೇ ಉಸಿರಾಡಿದರು. ಕಾಯಕಜೀವಿಗಳು ಸ್ವಾವಲಂಬನೆಯ ಬದುಕು ಸಾಗಿಸುವುದರ ಮೂಲಕ ಪ್ರಜಾಶಕ್ತಿಯಾಗಿ ಬೆಳೆಯುವಂತೆ ನೋಡಿಕೊಂಡರು. ರಾಜ್ಯಶಕ್ತಿಯು ಯಾವುದೇ ರಕ್ತಕ್ರಾಂತಿಯಿಲ್ಲದೆ ಕುಸಿಯುವ ಪ್ರಸಂಗ ಬಂದೊದಗಿದೆ ಎಂದು ಮನುವಾದಿ ಪಟ್ಟಭದ್ರ ಹಿತಾಸಕ್ತಿಗಳು ಹಾಹಾಕಾರವೆಬ್ಬಿಸಿದವು. ಪ್ರಜಾಶಕ್ತಿಯ ಮೇಲೆ ದಾಳಿಯಾಗುವಂತೆ ನೋಡಿಕೊಂಡವು. ಶೋಷಣೆಯನ್ನು ಪ್ರತಿಪಾದಿಸುವ ವೈದಿಕಶಕ್ತಿಯನ್ನು ಉಳಿಸಿಕೊಳ್ಳುವುದಕ್ಕಾಗಿ ಮನುವಾದಿಗಳು ಹೀಗೆ ಶರಣರ ಮೇಲೆ ಅನ್ಯಾಯ ಮಾಡಿದರು. ಶರಣರ ಸಾವುನೋವಿಗೆ ಮೂಲ ಕಾರಣವಾದರು. ವೈದಿಕಧರ್ಮಸಿಂಹಾಸನ ಮತ್ತು ಅದಕ್ಕೆ ಪೂರಕವಾಗಿರುವ ರಾಜಸಿಂಹಾಸನದ ಉಳಿವಿಗಾಗಿ ಶ್ರಮಿಸಿದರು. ಪ್ರಜಾಶಕ್ತಿ ಮತ್ತು ರಾಜ್ಯಶಕ್ತಿ ಭಾರಿ ಪ್ರಮಾಣದಲ್ಲಿ ತದ್ವಿರುದ್ಧವಾಗುವಂಥ ಈ ಪ್ರಸಂಗ ಮಾನವ ಇತಿಹಾಸದಲ್ಲಿ ನಡೆದ ಮೊದಲ ಘಟನೆಯಾಗಿದೆ.

ಜಾತಿಭೇದ, ವರ್ಣಭೇದ, ಲಿಂಗಭೇದ ಮತ್ತು ವರ್ಗಭೇದವಿಲ್ಲದ ಸ್ಥಿತಿಯಲ್ಲಿ ಮಾತ್ರ ಪ್ರಜಾಪ್ರಭುತ್ವ ನೆಲೆಗೊಳ್ಳಲು ಸಾಧ್ಯ ಎಂಬುದು ಬಸವಣ್ಣನವರ ದೃಢವಾದ ನಂಬಿಕೆಯಾಗಿತ್ತು ಎನ್ನುವುದಕ್ಕೆ ಅವರ ವಚನಗಳೇ ಸಾಕ್ಷಿಯಾಗಿವೆ. ಅಲ್ಲಿಯ ವರೆಗೆ ಜಗತ್ತಿನಲ್ಲಿ ಕೆಟ್ಟ ರಾಜನ ವಿರುದ್ಧ ಹೋರಾಡುತ್ತ ಒಳ್ಳೆಯ ರಾಜನನ್ನು ತರುವ ಸಂಪ್ರದಾಯವಿತ್ತು. ನಂತರ ಆತನೂ ಅಯೋಗ್ಯನೆಸಿದರೆ ಮತ್ತೆ ಹುಡುಕಾಟ ಪ್ರಾರಂಭವಾಗುತ್ತಿತ್ತು. ಇದು ಹೀಗೇ ನಿರಂತರವಾಗಿ ನಡೆದಿತ್ತು ಹೊರತಾಗಿ ರಾಜ್ಯಪ್ರಭುತ್ವಕ್ಕೆ ಪರ್ಯಾಯವಾಗಿ ಪ್ರಜಾಪ್ರಭುತ್ವವಾದಿ ವ್ಯವಸ್ಥೆಯ ಕನಸನ್ನು ಯಾರೂ ಕಂಡಿರಲಿಲ್ಲ. ಆದ್ದರಿಂದಲೇ ಇಂಥ ಕನಸುಗಾರ ಬಸವಣ್ಣನವರು ನಮಗೆ ಮುಖ್ಯರೆನಿಸುತ್ತಾರೆ.

"ಬಸವಣ್ಣ ಏಕೆ ಬೇಕು?" ಎಂಬುದನ್ನು ಈ ಕಾಲಮಾನದಲ್ಲಿ ನಮ್ಮನ್ನೇ ನಾವು ಪ್ರಶ್ನಿಸಿಕೊಳ್ಳುತ್ತ ಉತ್ತರ ಕಂಡುಕೊಳ್ಳಬೇಕಿದೆ. ಸುಲಿಗೆಕೋರರು ನಂಬಿಸುವ ಪ್ರಜಾಪ್ರಭುತ್ವದ ಜಾಗದಲ್ಲಿ ಜನರ ಪ್ರಜಾಪ್ರಭುತ್ವ ತರಬೇಕಿದೆ. ಅದಕ್ಕಾಗಿ ಮೊದಲಿಗೆ ಬಸವಣ್ಣನವರು ಆರಂಭಿಸಿದ ಜಾತಿವಿನಾಶ ಹೋರಾಟವನ್ನು ಮುಂದುವರಿಸಬೇಕಿದೆ.

12ನೇ ಶತಮಾನದ 211 ವಚನಕಾರರ 14934 ವಚನಗಳು ಸಿಕ್ಕಿವೆ. ಈ ವಚನಕಾರರಲ್ಲಿ 33 ಮಂದಿ ವಚನಕಾರ್ತಿಯರಿದ್ದಾರೆ. 56 ಮಂದಿ ಅಜ್ಞಾತ ವಚನಕಾರರಿದ್ದು 122 ಮಂದಿ ವಚನಕಾರರಿದ್ದಾರೆ. ಈ ವಚನಕಾರರಲ್ಲಿ ಶೇಕಡಾ 90ರಷ್ಟು ಜನ ವಿವಿಧ ಕಾಯಕಜೀವಿಗಳು, ದಲಿತ ಮೂಲದಿಂದ ಬಂದವರು ಮತ್ತು ಮಹಿಳೆಯರು ಇದ್ದಾರೆ. 12ನೇ ಶತಮಾನದ ನಂತರ ಬಂದ ವಚನಕಾರರಲ್ಲಿ ಯಾವುದೇ ಕಾಯಕಜೀವಿಗಳ, ದಲಿತರ ಮತ್ತು ವಚನಕಾರ್ತಿಯರ ವಚನಗಳಿಲ್ಲ! (15ನೇ ಶತಮಾನದ ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆಯ ಮೂರು ಸಾಲಿನ ಒಂದು ವಚನ ಮಾತ್ರ ಇದೆ.)

12ನೇ ಶತಮಾನದ ನಂತರ ದಲಿತ, ಹಿಂದುಳಿದ ಮೊದಲಾದ ವಚನಕಾರರು ಮತ್ತು ವಚನಕಾರ್ತಿಯರು ಎಲ್ಲಿ ಹೋದರು? ಬೇರೆ ವಚನಕಾರರಿಗೆ ಸಿಕ್ಕ ಅವಕಾಶ ಅವರಿಗೇಕೆ ಸಿಗಲಿಲ್ಲ? ಅವರು ಬರೆಯುವ ವಾತಾವರಣವೇಕೆ ಸೃಷ್ಟಿಯಾಗಲಿಲ್ಲ? ಎಂಬುದರ ಬಗ್ಗೆ ಗಂಭೀರವಾಗಿ ಚಿಂತಿಸುವ ಕಾಲ ಇದಾಗಿದೆ.

ಬಸವಣ್ಣನವರ ಕಾಲದಲ್ಲಿ ಇದ್ದ ವಾತಾವರಣ ಸಂಪೂರ್ಣ ಬದಲಾಗಿ ಇಡೀ ಶರಣವ್ಯವಸ್ಥೆ ಮಠಮಾನ್ಯಗಳ ಹಿಡಿತದಲ್ಲಿ ಬಂದಿತು. ಮಹಾಮನೆ ಸಂಸ್ಕೃತಿಯ ಸ್ಥಾನದಲ್ಲಿ ಮಠಸಂಸ್ಕೃತಿ ವಿಜೃಂಭಿಸತೊಡಗಿತು. ಸ್ಥಾವರಲಿಂಗ ಚಿಗುರಿಸುವವರು ಮತ್ತೆ ಮುಂದೆ ಬಂದರು. ಮಹಿಳೆಯರಿಗೆ ಮತ್ತು ಒಟ್ಟಾರೆ ಕಾಯಕಜೀವಿಗಳಿಗೆ ಹಿನ್ನಡೆಯುಂಟಾಯಿತು. ಇದೇ ಸಮಾಜದೊಳಗಿನ ಪುರೋಹಿತಶಾಹಿಗಳು ವಚನಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತಿದ್ದಿದರು. ಅನೇಕ ಪ್ರಕ್ಷಿಪ್ತ ವಚನಗಳನ್ನು ಸೇರಿಸಿದರು. ಹೀಗೆಲ್ಲ ಮಾಡುವುದರ ಮೂಲಕ ಲಿಂಗಾಯತ ಮತ್ತು ವೀರಶೈವ ಎಂದು ಗೊಂದಲ ಸೃಷ್ಟಿಸಿದರು.

ಆ ಗೊಂದಲ ಇಂದಿಗೂ ಮುಂದುವರಿದಿದೆ. ವಚನಗಳ ಪರಿಷ್ಕರಣೆ ಮತ್ತು ಹೆಚ್ಚಿನ ಸಂಶೋಧನೆ ಈ ಕಾಲದ ಕಾರ್ಯವಾಗಬೇಕಿದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರ ಅಷ್ಟೇ ಅಲ್ಲದೆ, ಭಾಷಾವಿಜ್ಞಾನ, ಸಮಾಜವಿಜ್ಞಾನ, ಸಮಾಜಸೇವೆ, ಅರ್ಥವಿಜ್ಞಾನ, ಮನೋವಿಜ್ಞಾನ, ತತ್ತ್ವಜ್ಞಾನ, ಇತಿಹಾಸ ಮುಂತಾದ ವಿಭಾಗಗಳಲ್ಲಿ ಕೂಡ ಶರಣರ ಚಳವಳಿ ಮತ್ತು ವಚನಗಳು ಅಧ್ಯಯನದ ವಿಷಯಗಳಾಗಬೇಕಿದೆ.

ನನ್ನ ಮೊಮ್ಮಗಳು ಅದಿತಿ ಮಗುವಾಗಿದ್ದಾಗಿನಿಂದಲೂ ಬಸವಣ್ಣನವರ ವಿವಿಧ ಭಾವಚಿತ್ರಗಳನ್ನು ನೋಡುತ್ತ ಬೆಳೆದವಳು. ಯಾವುದೇ ಪುಸ್ತಕದಲ್ಲಿ ಯಾವುದೇ ಪ್ರಕಾರದ ಬಸವಣ್ಣನವರ ಚಿತ್ರವಿದ್ದರೂ ತಂದು ತೋರಿಸುತ್ತ 'ಬಸಣ್ಣ' ಎಂದು ಹೇಳುತ್ತಾಳೆ. ಬಸವಣ್ಣನವರ ಜೊತೆ ಮಾತನಾಡುವ ಬಯಕೆಯನ್ನು ನನ್ನ ಬಳಿ ಬಂದಾಗ ವ್ಯಕ್ತಪಡಿಸುತ್ತಲೇ ಇರುತ್ತಾಳೆ. ಅವಳು ಮಾತನಾಡಬೇಕು ಎಂದು ಹಟ

ಮಾಡಿದಾಗಲೆಲ್ಲ ಕಲಬುರಗಿಯ ಸೋಮಣ್ಣ ನಡಕಟ್ಟಿ ಅವರು ಬಸವಣ್ಣನವರಾಗಿ ಮೊಬೈಲ್ ಮೂಲಕ ಮಾತನಾಡುತ್ತಾರೆ. ಧಾರವಾಡಕ್ಕೆ ಬಂದಾಗ ಪ್ರತಿಸಲವೂ 'ಬಸಣ್ಣ' ಅವರನ್ನು ಧಾರವಾಡಕ್ಕೆ ಕರೆಯುತ್ತಿದ್ದಳು. ಈಗ ಅಮೆರಿಕದಿಂದ ಧಾರವಾಡಕ್ಕೆ ಬರುವವಳಿದ್ದಾಳೆ. ಅವಳಿಗಾಗಿ ಬಸವಣ್ಣನವರ ಕುರಿತು ಬರೆದ ಕವನವನ್ನು ಈ ಪುಸ್ತಕದ ಬ್ಲರ್ಬ್‌ಗೆ ಬಳಸಿರುವೆ.

ಈ ಪುಸ್ತಕವನ್ನು ಪ್ರಕಟಿಸುತ್ತಿರುವ ಲಡಾಯಿ ಪ್ರಕಾಶನದ ಬಸೂಗೆ ಕೃತಜ್ಞನಾಗಿದ್ದೇನೆ. ಅವರಿಗೆ ಶರಣುಶರಣಾರ್ಥಿ, ಲಾಲ್ ಸಲಾಂ ಮತ್ತು ಜೈ ಭೀಮ್.

ಧಾರವಾಡ **ರಂಜಾನ್ ದರ್ಗಾ**

23.3.2017

ಕ್ರಾಂತಿಕಾರಿಗಳಾದ ಭಗತ್ ಸಿಂಗ್
ರಾಜಗುರು ಮತ್ತು ಸುಖದೇವ ಅವರು
ಹುತಾತ್ಮರಾದ ದಿನ.

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ,
ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯಿವೆ,
ನೋಡಯ್ಯಾ
ಮಹಾದಾನಿ ಕೂಡಲಸಂಗಮದೇವಾ,
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ
–ಬಸವಣ್ಣನವರು

ಪರಿವಿಡಿ

ಬಸವಣ್ಣ ಏಕೆ ಬೇಕು?

ಬಸವಣ್ಣ ಏಕೆ ಬೇಕು?

ವೇದಪ್ರಣೀತ ಆರ್ಯರು ಭಾರತದ ಮೂಲನಿವಾಸಿಗಳ ಮೇಲೆ ವಿಜಯ ಸಾಧಿಸಿದ ನಂತರ ಅವರನ್ನು ದಸ್ಯುಗಳೆಂದು ಕರೆದರು. ದಸ್ಯುಗಳೆಂದರೆ ಆರ್ಯರ ಸೇವೆ ಮಾಡುವ ದಾಸರು. ಅವರಿಗಾಗಿ ಎಲ್ಲ ತೆರನಾದ ಉತ್ಪಾದನೆ ಮತ್ತು ಸೇವೆಯಲ್ಲಿ ತೊಡಗಿದಂಥವರು. ಈ ಮೂಲನಿವಾಸಿ ದಸ್ಯುಗಳೇ ಶೂದ್ರ ವರ್ಣಕ್ಕೆ ಸೇರಿದವರು. ಹೀಗೆ ಶೇಕಡಾ 90ರಷ್ಟು ದುಡಿಯುವ ಜನರು ಶೂದ್ರರಾಗಿ ಉಳಿದರು. ಜನಿವಾರ ಇಲ್ಲದವರೆಲ್ಲ ಶೂದ್ರರೇ. ವೇದವನೋದುವ ಬ್ರಾಹ್ಮಣರು, ದೇಶ ಆಳುವ ಕ್ಷತ್ರಿಯರು ಮತ್ತು ವಸ್ತುಗಳ ಕೊಡು ಕೊಳ್ಳುವಿಕೆಯಲ್ಲಿ ತೊಡಗಿದ ವೈಶ್ಯರು ಜನಿವಾರದೊಂದಿಗೆ ಉತ್ತಮ ವರ್ಣದವರಾಗಿ ಸವರ್ಣೀಯರೆನಿಸಿದರು. ಇವರೆಲ್ಲ ಸೇರಿ ಉಳಿದ ಬಹುಜನರನ್ನು ದಾಸರನ್ನಾಗಿಸಿ ಶೂದ್ರರೆಂದು ಕರೆದರು. ಈ ಶೂದ್ರರಲ್ಲಿ ತಾರತಮ್ಯದ ವಿರುದ್ಧ ಹೋರಾಡಿದವರನ್ನು ಪಂಚಮರೆಂದು ಕರೆದು, ಊರ ಹೊರಗೆ ಇಟ್ಟು, ಅಸ್ಪೃಶ್ಯರಾಗಿ ಬದುಕುವ ಶಿಕ್ಷೆಯನ್ನು ಕೊಟ್ಟರು. ಹೀಗೆ ಪಂಚಮ ವರ್ಣದ ಉದಯ ನಂತರದಲ್ಲಿ ಆಯಿತು. ಅವರು ಕೊಟ್ಟ ಈ ಶಿಕ್ಷೆ ತಲೆತಲಾಂತರದಿಂದ ಇಂದಿಗೂ ಉಳಿದುಕೊಂಡು ಬಂದಿದೆ.

ಹಿಂದಿನ ಶತಮಾನಗಳ ನಿರಂತರ ಯುದ್ಧಗಳಿಂದಾಗಿ, ಕನ್ನಡ ನಾಡಿನ 12ನೇ ಶತಮಾನ ದಣಿದ ಶತಮಾನವಾಗಿತ್ತು. ಧರ್ಮಗಳು ನಿಷ್ಕ್ರಿಯವಾಗುತ್ತ ಎಲ್ಲೆಡೆ ಹಿಂಸೆ ತಾಂಡವವಾಡುತ್ತಿತ್ತು. ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜ್ಯಶಕ್ತಿಯಿಂದಾಗಿ ನಿರಂತರ ಶೋಷಣೆಗೆ ಒಳಗಾಗಿದ್ದ ಬಹುಪಾಲು ಕಾಯಕಜೀವಿಗಳ ಬದುಕು ದುರ್ಬರವಾಗಿತ್ತು. ಹಿಂಸೆ ಮತ್ತು ಸ್ವಯಂ ಹಿಂಸೆಯನ್ನು ಪ್ರತಿಪಾದಿಸುವ ಧರ್ಮಗಳು ಜನಜೀವನವನ್ನು ಅಸ್ತವ್ಯಸ್ತಗೊಳಿಸಿದ್ದವು. ಅಹಿಂಸೆಯನ್ನು ಪ್ರತಿಪಾದಿಸುವ ಧರ್ಮಗಳು ಹಿಂಸೆಯ ವಿರುದ್ಧ ಧ್ವನಿ ಎತ್ತುವ ಸ್ಥಿತಿಯಲ್ಲಿ ಇರಲಿಲ್ಲ. ಇಂಥ ವಿಷಮ ವಾತಾವರಣದಲ್ಲಿ ಬಸವಣ್ಣನವರ ಜನನವಾಯಿತು.

ಅವರು ಜನಿಸಿದ್ದು ಅಗ್ರಹಾರಗಳ ಅಗ್ರಹಾರವಾಗಿದ್ದ ಬಾಗೇವಾಡಿಯ ಪುರವರಾಧೀಶ ಮಾದರಸ ಮತ್ತು ಮಾದಲಾಂಬಿಕೆಯ ಮಗನಾಗಿ. ಉನ್ನತಕುಲ ಎಂದು ಕರೆಯಿಸಿಕೊಳ್ಳುವ ಬ್ರಾಹ್ಮಣ ಕುಲದಲ್ಲಿ, ಧಾರ್ಮಿಕ ಅಧಿಕಾರ, ವೇದಾಗಮಗಳ ಜ್ಞಾನ ಮತ್ತು ಸಂಪತ್ತು ತುಂಬಿದ್ದ ಮನೆತನದಲ್ಲಿ! ಆದರೆ ಬಸವಣ್ಣನವರಿಗೆ ಇದಾವುದರ ಪರಿವೆ ಇರಲಿಲ್ಲ. ಶೂದ್ರರ ಮತ್ತು ಪಂಚಮರ ಸಾಮಾಜಿಕ ನ್ಯಾಯದ ಪ್ರಶ್ನೆ ಮಾತ್ರ ಅವರನ್ನು ಬಾಧಿಸುತ್ತಿತ್ತು. ಅದಕ್ಕೆ ಅವರು ಉತ್ತರ ಕಂಡುಕೊಳ್ಳಲೇ ಬೇಕಾಗಿತ್ತು. ಅದಕ್ಕಾಗಿ ಅವರು ಬ್ರಾಹ್ಮಣ್ಯವನ್ನು, ಸಂಪತ್ತನ್ನು ಮತ್ತು ನಂತರ ಕಲ್ಯಾಣದ ಪ್ರಧಾನಿ ಪದವಿಯನ್ನೂ ಬಿಟ್ಟುಕೊಡಬೇಕಾಯಿತು. ಶೋಷಣೆಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತ, ಶೂದ್ರರು ಮತ್ತು ಪಂಚಮರು ಎಂದೆಂದಿಗೂ ಆರ್ಥಿಕವಾಗಿ ದುರ್ಬಲರಾಗೇ ಉಳಿಯುವಂಥ ಸ್ಥಿತಿಯನ್ನು ನಿರ್ಮಿಸಿದ ವರ್ಣವ್ಯವಸ್ಥೆಯನ್ನು ಗಟ್ಟಿ ಮಾಡಿದ ಮನುಸ್ಮೃತಿಯ ಕೌರ್ಯದ ವಿರುದ್ಧ ಹೋರಾಡುತ್ತ, ದಯಾಸಂಸ್ಕೃತಿಯನ್ನು ಸಾಮಾಜೀಕರಣಗೊಳಿಸಿ ಬದುಕಿನ ಎಲ್ಲ ಸ್ತರಗಳಲ್ಲಿನ ಶೋಷಣೆಯನ್ನು ನಿರ್ನಾಮಗೊಳಿಸುವುದೇ ಬಸವಣ್ಣನವರ ಗುರಿಯಾಗಿತ್ತು.

ದೇಶದ ಮೊದಲ ಏಕದೇವೋಪಾಸನಾ ಧರ್ಮ:

ಬಹುದೇವೋಪಾಸನೆಯ ಸನಾತನ ಧರ್ಮ, ತೀರ್ಥಂಕರರ ಜೈನಧರ್ಮ, ಅಜ್ಞೇಯವಾದಿ ಬೌದ್ಧಧರ್ಮ ಮತ್ತು ಆದಿವಾಸಿಗಳ ವಿವಿಧ ಸಂಪ್ರದಾಯಗಳು ಭಾರತದಲ್ಲಿ ಸಹಸ್ರಾರು ವರ್ಷಗಳಿಂದ ವಿವಿಧ ಜೀವನ ವಿಧಾನಗಳಿಂದ ಕೂಡಿದ ಸಮಾಜಗಳನ್ನು ಸೃಷ್ಟಿಸಿದ್ದರೂ ಏಕದೇವೋಪಾಸನೆಯ ಧರ್ಮದ ಸ್ಥಾಪನೆಯಾಗಿರಲಿಲ್ಲ. ಲಿಂಗವಂತ ಧರ್ಮ ಎಂದು ಕರೆಯಿಸಿಕೊಳ್ಳುವ ಬಸವಧರ್ಮ ಕನ್ನಡದ ನೆಲದಲ್ಲಿ ಜನ್ಮತಾಳಿದೆ. ದಕ್ಷಿಣ ಭಾರತದಲ್ಲಿ ಜನಿಸಿದ ಮೊದಲ ಧರ್ಮ ಇದಾಗಿದೆ. ದೇಶದ ಮೊದಲ ಏಕದೇವೋಪಾಸನೆಯ ಧರ್ಮವಾಗಿದೆ. ಅದ್ವೈತದ ಪ್ರತಿಪಾದಕರಾದ ಶಂಕರಾಚಾರ್ಯರು, ವಿಶಿಷ್ಟಾದ್ವೈತದ ಪ್ರತಿಪಾದಕರಾದ ರಾಮಾನುಜಾಚಾರ್ಯರು ಮತ್ತು ದ್ವೈತದ ಪ್ರತಿಪಾದಕರಾದ ಮಧ್ವಾಚಾರ್ಯರು ದಕ್ಷಿಣ ಭಾರತದಲ್ಲಿ ಜನಿಸಿ ತ್ರಿಮತಗಳ ಸ್ಥಾಪನೆ ಮಾಡಿದರೆ ಹೊರತು ಹೊಸ ಧರ್ಮ ಸ್ಥಾಪನೆ ಮಾಡಲಿಲ್ಲ. ಈ ಮತಗಳು ಪ್ರಸ್ಥಾನತ್ರಯಗಳೆಂದು ಕರೆಯಲಾಗುವ ಪ್ರಮಾಣ ಗ್ರಂಥಗಳಾದ ಬ್ರಹ್ಮಸೂತ್ರ, ಉಪನಿಷತ್ ಮತ್ತು ಭಗವದ್ಗೀತೆಗಳ ಅಧೀನದಲ್ಲೇ ಇರುವುದರಿಂದ ಇವು ಸ್ವತಂತ್ರ ಧರ್ಮಗಳಾಗುವುದಿಲ್ಲ. ಆದ್ದರಿಂದ ಈ ಮೂವರು ಆಚಾರ್ಯರನ್ನು ಮತಸ್ಥಾಪಕರೆಂದೇ ಕರೆಯಲಾಗುತ್ತಿದೆ.

ಬಸವಣ್ಣನವರ ಕಾಲದಲ್ಲಿ, ದಕ್ಷಿಣ ಭಾರತದಲ್ಲಿ ಯಾವುದೇ ಧರ್ಮ ಹುಟ್ಟಿರಲಿಲ್ಲ. ವೈದಿಕ, ಶೈವ, ಜೈನ, ಬೌದ್ಧಧರ್ಮಗಳು ದಕ್ಷಿಣ ಭಾರತದಲ್ಲಿ ಹಬ್ಬಿದ್ದರೂ ಅವುಗಳ ಉಗಮಸ್ಥಾನ ಉತ್ತರ ಭಾರತವಾಗಿತ್ತು. ದಕ್ಷಿಣ ಭಾರತದ ವಿವಿಧ ಬುಡಕಟ್ಟುಗಳ ಮತ್ತು ವೃತ್ತಿಗುಂಪುಗಳ ಅನೇಕ ಕಾಯಕಜೀವಿಗಳು ಈ ಧರ್ಮಗಳಲ್ಲಿನ ಅವೈದಿಕ ಧರ್ಮಗಳನ್ನು ಸೇರಿದರು. ಇನ್ನುಳಿದವರು ವೈದಿಕರಿಂದ ಶೂದ್ರ ವರ್ಣದವರೆಂದು ಕರೆಯಿಸಿಕೊಂಡರು. ವೈದಿಕರಿಂದ ಕ್ಷುದ್ರ ದೇವತೆಗಳೆಂದು ಕರೆಯಿಸಿಕೊಂಡ ಬುಡಕಟ್ಟು ಮತ್ತು ಜನಪದ ದೈವಗಳ ಆರಾಧಕರು ಇವರಾಗಿದ್ದರು.

ಭಾರತದ ಮೊದಲ ಏಕದೇವೋಪಾಸನೆಯ ಧರ್ಮವಾದ ಲಿಂಗವಂತ ಧರ್ಮದಿಂದಾಗಿ ಕನ್ನಡಕ್ಕೆ ತನ್ನದೇ ಆದ ಮಹತ್ವ ಬಂದಿತು. ಕನ್ನಡವನ್ನು ಧರ್ಮದ, ದರ್ಶನದ, ಶಾಸ್ತ್ರದ, ಕಾಯಕಜೀವಿಗಳ ಸಾಹಿತ್ಯದ ಮತ್ತು ಚಳವಳಿಯ ಭಾಷೆಯಾಗಿ ರೂಪಿಸಿದ ಕೀರ್ತಿ 12ನೇ ಶತಮಾನದ ಶರಣಸಂಕುಲಕ್ಕೆ ಸಲ್ಲುತ್ತದೆ.

ಶರಣಸಂಕುಲ:

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣರಿಂದ ಕೂಡಿದ್ದ ಶರಣಸಂಕುಲವೆಂಬ ಸಮಾಜ ಹೊಸ ಜೀವನವಿಧಾನದಿಂದ ಕೂಡಿತ್ತು. ಉಳ್ಳವರ ಮತ್ತು ಬಡವರ ಎರಡು ಬದುಕಿನ ಕ್ರಮಗಳನ್ನು ಗುರುತಿಸಿದ ಬಸವಣ್ಣನವರು ಬಡವರ ಉದ್ಧಾರಕ್ಕಾಗಿ ಪಟ್ಟ ಶ್ರಮ ಅನನ್ಯವಾಗಿದೆ. ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದಗಳಿಂದ ಕೂಡಿದ್ದ ಸಮಾಜದಿಂದ ಜನಸಮುದಾಯವನ್ನು ಎತ್ತಿ ಸರ್ವಭೇದಗಳನ್ನು ನಿರಾಕರಿಸುವ ಶರಣ ಸಂಕುಲವೆಂಬ ವಿಶಿಷ್ಟ ಸಮಾಜವನ್ನು ಬಸವಾದಿ ಶರಣರು ರೂಪಿಸಿದರು. ಬಸವಧರ್ಮದಲ್ಲಿ ಸಂಕುಲವು ವಿಶಿಷ್ಟವಾದ ಪಾರಿಭಾಷಿಕ ಪದವಾಗಿದೆ. ಸಂಕುಲದಲ್ಲಿ ಕುಲಭೇದವಿರುವುದಿಲ್ಲ. ಸರ್ವಸಮತ್ವವೇ ಸಂಕುಲದ ಜೀವಾಳವಾಗಿದೆ. ಬಡವ–ಶ್ರೀಮಂತ, ಹೆಣ್ಣು–ಗಂಡು ಮುಂತಾದ ಭೇದಗಳಿಂದ ಶರಣ ಸಂಕುಲ ಮುಕ್ತವಾಗಿತ್ತು. ಎಲ್ಲ ಕಾಯಕಜೀವಿಗಳು ಸಮಾನ ಗೌರವವನ್ನು ಹೊಂದಿದ್ದರು. ಶರಣ ಸಂಕುಲದಲ್ಲಿ 'ಒಕ್ಕಮಿಕ್ಕ' ಮತ್ತು 'ಶಿವನ ಸೊಮ್ಮು' ಪದಗಳು ಬಹಳ ಮುಖ್ಯವಾಗಿವೆ. ಶರಣರು ವೈಯಕ್ತಿಕವಾಗಿ 'ಇಂದಿಂಗೆ ನಾಳಿಂಗೆ' ಕೂಡಿಸಿ ಇಡುತ್ತಿರಲಿಲ್ಲ. ತಾವು ದುಡಿದು ಗಳಿಸಿದ್ದನ್ನು ಶಿವನ ಪ್ರಸಾದ ಎಂದು ಭಾವಿಸುತ್ತಿದ್ದರು. ದಾಸೋಹಂಭಾವದಿಂದ ಶಿವನಿಧಿಗೆ ಅರ್ಪಿಸಿ ಉಳಿದದ್ದರಲ್ಲಿ ಉಪಜೀವನ ಸಾಗಿಸುತ್ತಿದ್ದರು. ಹೀಗೆ ಶರಣಸಂಕುಲಕ್ಕೆ ಕೊಟ್ಟು ಉಳಿದದ್ದೇ 'ಒಕ್ಕಮಿಕ್ಕ' ವಸ್ತು. ಶರಣರದು ಬಾಹ್ಯದಲ್ಲಿ ಬಡವರ ಉಪಜೀವನವಾಗಿತ್ತು. ಆದರೆ ಆಂತರ್ಯದಲ್ಲಿ ಅವರು ಘನಮನ ಸಂಪನ್ನರಾಗಿದ್ದರು. ಅವರೊಳಗಿನ ಶ್ರೀಮಂತಿಕೆಯನ್ನು ಮೀರುವ ಸಾಮರ್ಥ್ಯ ಈ ಭೌತಿಕ ಜಗತ್ತಿನ ಶ್ರೀಮಂತರಿಗೆ ಇರಲಿಲ್ಲ.

ಸಾಮಾಜಿಕ ನಿಧಿ:

ಶಿವನಿಧಿಯು ಸಾಮಾಜಿಕ ನಿಧಿಯಾಗಿದೆ. ಶರಣಸಂಕುಲದಲ್ಲಿ ಯಾರೂ ಆರ್ಥಿಕ ಸಮಸ್ಯೆಯಿಂದ ಬಳಲಬಾರದು ಎಂಬ ಉದ್ದೇಶದಿಂದ ಬಸವಣ್ಣನವರು ಶಿವನಿಧಿಯನ್ನು ಸ್ಥಾಪಿಸಿದ್ದರು.

ಮಹಾನ್ ಅರ್ಥಶಾಸ್ತ್ರಜ್ಞರೂ ಆಗಿದ್ದ ಬಸವಣ್ಣನವರು ಕಾಯಕ ಪ್ರಜ್ಞೆಯ ಮೂಲಕ ಯೋಗ್ಯ ಉತ್ಪಾದನೆಯ ಮಹತ್ವ ತಿಳಿಸಿದರು. ಕಾಯಕದಿಂದ ಬಂದದ್ದು ದೇವರ ಪ್ರಸಾದ ಎಂದು ಸಾರಿದರು. ಪ್ರಸಾದವು ಸದ್ಬಳಕೆಯ ಪ್ರತೀಕವಾಗಿದೆ. ದೇವರ ಪ್ರತೀಕವಾದ ಸಕಲಜೀವಾತ್ಮರ (ಜಂಗಮ) ಸೇವೆಗೆ ದಾಸೋಹ ಎಂದು ಕರೆದರು. ದಾಸೋಹವು ಸರಿಯಾದ ಸಾಮಾಜಿಕ ವಿತರಣೆಯನ್ನು ಸೂಚಿಸುತ್ತದೆ. ಯೋಗ್ಯ ಉತ್ಪಾದನೆ, ಯೋಗ್ಯ ಬಳಕೆ ಮತ್ತು ಯೋಗ್ಯ ಸಾಮಾಜಿಕ ವಿತರಣಾ ವ್ಯವಸ್ಥೆ ಇರುವ ದೇಶದಲ್ಲಿ ಹಿಂಸೆ ತಾಂಡವವಾಡುವುದಿಲ್ಲ. ಜನತೆ ಸರ್ವ ವಿಧದಿಂದ ಸಮಾನತೆಯನ್ನು ಅನುಭವಿಸುತ್ತಾರೆ. ಬಸಣ್ಣನವರ ವಚನಗಳು ಸಾಹಿತ್ಯ, ಸಮಾಜ, ಧರ್ಮ, ದರ್ಶನ, ರಾಜನೀತಿ, ಅರ್ಥಶಾಸ್ತ್ರ, ಆಡಳಿತ, ಮನೋವಿಜ್ಞಾನ, ಸಮೂಹ ಪ್ರಜ್ಞೆ, ಚಳವಳಿ ಮುಂತಾದ ವಿಷಯಗಳನ್ನು ಒಳಗೊಂಡಿರುತ್ತವೆ.

ತನು–ಮನ–ಧನ, ಕಾಯಕ–ಪ್ರಸಾದ–ದಾಸೋಹ, ಉತ್ಪಾದನೆ–ಬಳಕೆ–ವಿತರಣೆ, ಗುರು–ಲಿಂಗ–ಜಂಗಮ ಮತ್ತು ಅರಿವು–ಸಂಸ್ಕಾರ–ಆಚಾರ ಎಂಬುವು ಆಂತರಿಕ ಸಂಬಂಧವನ್ನು ಹೊಂದಿವೆ. ತನು–ಕಾಯಕ–ಉತ್ಪಾದನೆ–ಗುರು–ಅರಿವು, ಮನ–ಪ್ರಸಾದ–ಬಳಕೆ–ಲಿಂಗ–ಸಂಸ್ಕಾರ ಮತ್ತು ಧನ–ದಾಸೋಹ–ವಿತರಣೆ–ಜಂಗಮ–ಆಚಾರ ಜೊತೆ ಜೊತೆಯಾಗಿ ಸಾಗುತ್ತವೆ. ತನುವಿಗೆ ಕಾಯಕದ ಸಂಬಂಧ ಬಂದಾಗ ಅದರ ಉತ್ಪಾದನೆಯಿಂದ ಬರುವ ಅರಿವು ಗುರುವಾಗುವುದು. ಮನವು ಪ್ರಸಾದ ಪ್ರಜ್ಞೆಯಿಂದಾಗಿ ಎಲ್ಲವನ್ನು ಸದ್ಬಳಕೆ ಮಾಡುತ್ತ ಸರ್ವಸಮತ್ವದ ಲಿಂಗತತ್ತ ದಿಂದ ಕೂಡಿದ ಸಂಸ್ಕಾರ ಹೊಂದುವುದು. ಧನವು ದಾಸೋಹಂಭಾವದಿಂದಾಗಿ ಯೋಗ್ಯ ವಿತರಣೆಯುಂಟಾಗಿ ಜಂಗಮ (ಸಮಾಜ)ದ ಏಳ್ಗೆಯ ಆಚರಣೆಯಾಗುವುದು.

ಹೀಗೆ ಜಾತಿ, ಕುಲ, ಮತ, ಧರ್ಮ, ವರ್ಗ ಮತ್ತು ಲಿಂಗಭೇದವಿಲ್ಲದೆ 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂದು ಎಲ್ಲರನ್ನು ಒಳಗೊಳ್ಳುವ ಶರಣಸಂಕುಲದ ನಿರ್ಮಾಣವಾದುದು ಹೇಗೆ? ಒಬ್ಬನೇ ನಿರಾಕಾರ ದೇವರು, ಸಕಲ ಜೀವಾತ್ಮರನ್ನೊಳಗೊಂಡ ಒಂದೇ ಸಾಕಾರ ಜಗತ್ತು ಹಾಗೂ ಮಾನವಕುಲವೊಂದೇ ಎಂದು ಸಾರುತ್ತ 'ಇವನಾರವ, ಇವನಾರವ, ಇವನಾರವ' ಎಂದು ಬೇರ್ಪಡಿಸುವವರ ಸ್ಥಗಿತಗೊಂಡ ಧರ್ಮವನ್ನು ಎದುರಿಸುತ್ತ, ಎಲ್ಲರನ್ನು ಒಳಗೊಳ್ಳುವ ಜೀವನ ವಿಧಾನವೊಂದರ ಮೂಲಕ ಕಾಯಕ ಜೀವಿಗಳ ಚಳವಳಿಯ ಧರ್ಮ ಸ್ಥಾಪನೆ ಮಾಡಿದ್ದು ಹೇಗೆ? ಎಂಬುದನ್ನು ಅರಿಯುವುದು ಈ ಕಾಲಘಟ್ಟದಲ್ಲಿ ಅತ್ಯವಶ್ಯವಾಗಿದೆ.

ಕಾಯಕಜೀವಿಗಳ ಸಂಘಟನೆ:

ಜಗತ್ತಿನಲ್ಲಿ ಕಾಯಕಜೀವಿಗಳ ಸಂಘಟನೆ ಮಾಡಿದವರಲ್ಲಿ ಬಸವಣ್ಣನವರು ಮೊದಲಿಗರು. ಅಲ್ಲಿಯ ವರೆಗೆ ಜಗತ್ತಿನ ಯಾವುದೇ ಮೂಲೆಯಲ್ಲಿ ಕಾಯಕಜೀವಿಗಳ ಸಂಘಟನೆಯಾಗಿರಲಿಲ್ಲ. 'ಜಗತ್ತಿನ ಇತಿಹಾಸವು ವರ್ಗಹೋರಾಟಗಳ ಇತಿಹಾಸವೇ ಆಗಿದೆ' ಎಂದು 19ನೇ ಶತಮಾನದಲ್ಲಿ ಕಾರ್ಲ್ ಮಾರ್ಕ್ಸ್ ಹೇಳಿದರು. ಕಾಯಕಜೀವಿಗಳು ತಮ್ಮ ಅಸ್ತಿತ್ವಕ್ಕಾಗಿ ಸದಾ ಹೋರಾಡುತ್ತ ಬಂದಿದ್ದಾರೆ ಎಂಬುದನ್ನು 12ನೇ ಶತಮಾನದಲ್ಲೇ ಕಂಡುಕೊಂಡ ಬಸವಣ್ಣನವರು. ಯಾವ ಆರ್ಥಿಕ ಶಕ್ತಿಯೂ ಇಲ್ಲದ ಕಾಯಕಜೀವಿಗಳ ಆತ್ಮಸ್ಥೈರ್ಯದ ಮೇಲೆ ಹೊಸ ಸಮಾನತೆಯ ಸಿದ್ಧಾಂತವನ್ನು ರೂಪಿಸಿದರು. ಅಲ್ಲಿಯ ವರೆಗೆ ಭಾರತೀಯ ಸಮಾಜೋಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಈ ಕಾಯಕಜೀವಿಗಳಿಗೆ ಯಾವುದೇ ಸ್ಥಾನವಿರಲಿಲ್ಲ. ಸಾಮಾಜಿಕ ಮನೋವಿಜ್ಞಾನಿ ಡಾ. ಬಿ. ಕೃಷ್ಣಮೂರ್ತಿ ಅವರು ಹೇಳುವಂತೆ 'ಸಮಯವಿಲ್ಲ ನನಗೆ ನನ್ನ ಅರಿಯಲು. ಸದಾ ಸ್ವತಂತ್ರ ನಾ ದಣಿಗಳಿಗಾಗಿ ದುಡಿಯಲು' ಎಂಬುದು ಅವರ ಜೀವನ ವಿಧಾನವಾಗಿತ್ತು. ಆದರೆ ಆಂತರ್ಯದಲ್ಲಿ ಸಂಘರ್ಷದ ಕಿಡಿ ಸಿಡಿಯುತ್ತಲೇ ಇತ್ತು. ನಿರಂತರ ಶೋಷಣೆಯ ವಿರುದ್ಧ ಕಾಯಕಜೀವಿಗಳು ಒಂದಾಗುವುದು ಐತಿಹಾಸಿಕ ಅನಿವಾರ್ಯತೆಯಾಗಿತ್ತೆಂಬುದು ಮಹಾನುಭಾವಿ ಬಸವಣ್ಣನವರಿಗೆ ಅರಿವಾಗದೆ ಇರಲಿಲ್ಲ. ಬಸವಣ್ಣನವರು ಈ ಅರಿವನ್ನು ಪಡೆದ ಬಗೆ ಅನುಪಮವಾಗಿದೆ.

ದುಡಿಯುವ ಜನರ ಮೊದಲ ಸಿದ್ಧಾಂತ:

ಭಾರತದ ಇತಿಹಾಸದಲ್ಲಿ ಶೂದ್ರರ ಮತ್ತು ಅತಿಶೂದ್ರರಾದ ಪಂಚಮರ ಅನುಭವಕ್ಕೆ ಯಾವುದೇ ಬೆಲೆ ಇರಲಿಲ್ಲ. ವೇದ, ಶಾಸ್ತ್ರ, ಪುರಾಣಗಳು ಸವರ್ಣೀಯರ ಜೀವನವಿಧಾನಕ್ಕೆ ಧಕ್ಕೆ ತರದಂಥ ಸಂಸ್ಕಾರಗಳನ್ನೇ ಪ್ರತಿಪಾದಿಸುತ್ತವೆ. ಅವು ಮೇಲ್ನೋಟಕ್ಕೆ ಬಹಳ ಉದಾತ್ತವಾಗಿ ಕಂಡರೂ ಆಂತರ್ಯದಲ್ಲಿ ಕಾಯಕಜೀವಿಗಳ ಶೋಷಣೆಗೆ ಪೂರಕವಾಗಿಯೆ ಇವೆ. ಅಂತೆಯ ಬಸವಣ್ಣನವರು 'ಏನಯ್ಯಾ ವಿಪ್ರರು ನುಡಿದಂತೆ ನಡೆಯರು, ಇದೆಂತಯ್ಯಾ? ತಮಗೊಂದು ಬಟ್ಟೆ (ದಾರಿ) ಶಾಸ್ತ್ರಕ್ಕೊಂದು ಬಟ್ಟೆ!' ಎಂದು ನುಡಿದಿದ್ದಾರೆ. 'ನುಡಿ ಲೇಸು ನಡೆ ಅಧಮವಾದಲ್ಲಿ ಬಿಡಿಸಲಾಗದ ಹೊಲೆ' ಎಂದು ಮಾದಾರ ಚೆನ್ನಯ್ಯನವರು ತಿಳಿಸಿದ್ದಾರೆ. ಬಸವಣ್ಣನವರು ಸಮಾಜದಲ್ಲಿ ರಕ್ತಗತವಾಗಿದ್ದ ತಾರತಮ್ಯಕ್ಕೆ ಕಾರಣವಾದ ವೈದಿಕ ವ್ಯವಸ್ಥೆಯನ್ನು ಕಟುವಾಗಿ ವಿರೋಧಿಸುತ್ತ 'ವಿಪ್ರರು ಕೀಳು ನೋಡಾ ಜಗವೆಲ್ಲ ಅರಿಯಲು' ಎಂದು ಬಸವಣ್ಣನವರು ಸಿಡಿಮಿಡಿಗೊಂಡಿದ್ದಾರೆ.

ಶೋಷಣೆಯಿಲ್ಲದ ಸಿದ್ಧಾಂತವನ್ನು ರೂಪಿಸುವುದಕ್ಕಾಗಿ ಶೋಷಿತರ ಬದುಕನ್ನು ಅರಿಯಲು ಎಲ್ಲ ಕಾಯಕಜೀವಿಗಳ ಅನುಭವವನ್ನು ತಮ್ಮದಾಗಿಸಿಕೊಳ್ಳುವುದರ

ಮೂಲಕ ಬಸವಣ್ಣನವರು ಮಹಾನುಭಾವಿಗಳಾದರು. ಶ್ರಮಜೀವಿಗಳ ಅನುಭವದಿಂದ ಸೃಷ್ಟಿಯಾದ ಅನುಭಾವವೇ ಬಸವಾದ್ವೈತವೆಂಬ ಸಿದ್ಧಾಂತ. ಈ ಅನುಭಾವವೇ ಶರಣರ ಅಧ್ಯಾತ್ಮ, ತತ್ತ್ವಜ್ಞಾನ ಮತ್ತು ದರ್ಶನ. ವೈದಿಕರ ಅಧ್ಯಾತ್ಮ ಕಾಯಕಜೀವಿಗಳ ಶ್ರಮಸಿದ್ಧಾಂತದಿಂದ ಬಂದುದಲ್ಲ. ಆದರೆ ಶರಣರ ಅನುಭಾವ ಜನಸಮುದಾಯದ ಕಾಯಕಗಳ ಮೂಲಕ ದಕ್ಕಿದ ಅನುಭವದಿಂದ ರೂಪುಗೊಂಡದ್ದಾಗಿದೆ. ಹೀಗೆ ಬಸವಣ್ಣನವರು ದುಡಿಯುವ ಜನರ ಅನುಭವದ ಆಧಾರದ ಮೇಲೆ ಹೊಸ ಜಗತ್ತಿನ ಸಿದ್ಧಾಂತವನ್ನು ರೂಪಿಸಿದರು. ಹೀಗೆ ಬಸವಾದ್ವೈತವು ವಿಶ್ವದ ದುಡಿಯುವ ಜನರ ಮೊದಲ ಸಿದ್ಧಾಂತವಾಗಿದೆ. ವಸ್ತು ಮತ್ತು ಚೈತನ್ಯವನ್ನು ಬೇರ್ಪಡಿಸಲಿಕ್ಕಾಗದು. ಚೈತನ್ಯವಿಲ್ಲದೆ ವಸ್ತುವಿಲ್ಲ. ಒಂದು ದಿನ ವಸ್ತು ತನ್ನ ರೂಪವನ್ನು ಕಳೆದುಕೊಂಡು ಮತ್ತೆ ನಿರಾಕಾರವಾದ ಚೈತನ್ಯವಾಗುವುದು. ಇಡೀ ಜಗತ್ತು ಚೈತನ್ಯಮಯವಾದ ವಸ್ತುವಾಗಿದೆ. ಈ ವಸ್ತುವೇ ಸಕಲಜೀವರಾಶಿಯ ಅಸ್ತಿತ್ವಕ್ಕೆ ಕಾರಣವಾಗಿದೆ. ಚರಾಚರವೆಲ್ಲ ಜೀವಜಾಲದಲ್ಲಿರುವುದರಿಂದ ಯಾವುದೂ ಮೇಲಲ್ಲ, ಯಾವುದೂ ಕೀಳಲ್ಲ. ಮೇಲು ಕೀಳು ಎಂಬುವು ಮಾನವ ನಿರ್ಮಿತ. ಬಲಿಷ್ಠರ ಶೋಷಣೆಯ ಬುದ್ಧಿಯಿಂದಾಗಿ ಇವನಾರವ ಇವನಾರವ ಎಂಬ ತಾರತಮ್ಯ ಭಾವ ಮೂಡಿದೆ. ಇದನ್ನು ಅಳಿಸಿ ಹಾಕಿ ಇವ ನಮ್ಮವ, ಇವ ನಮ್ಮವ ಎಂಬ ಏಕೋಭಾವ ಮೂಡಿಸುತ್ತ ಸತ್ಯದ ದರ್ಶನ ಮಾಡಿಸುವುದೇ ಬಸವಾದ್ವೈತದ ಉದ್ದೇಶವಾಗಿದೆ.

ಸಂಸತ್ತಿನ ಮೂಲ ಅನುಭವ ಮಂಟಪ:

ಬಸವಣ್ಣನವರು ಸಂಸತ್ತಿನ ಪರಿಕಲ್ಪನೆಯನ್ನು ಮೂಡಿಸಿದ ಮಹಾಜ್ಞಾನಿ. ಮಹಿಳೆಯರೂ ಸೇರಿದಂತೆ ದಲಿತ ಮೊದಲಾದ ವಿವಿಧ ಸಮಾಜಗಳ ಹಿನ್ನೆಲೆಯಿಂದ ಬಂದ ನಾಯಕರಾದ 770 ಅಮರಗಣಂಗಳ ಮೂಲಕ ಅನುಭವಮಂಟಪ ಎಂಬ ಸಮಾಜೋ ಧಾರ್ಮಿಕ ಸಂಸತ್ತಿನ ಮೂಲಕ ವಿಶ್ವದಲ್ಲಿ ಮೊದಲ ಬಾರಿಗೆ ಸಮೂಹ ನಾಯಕತ್ವದ ಕಲ್ಪನೆ ಮೂಡಿಸಿದರು. ದಲಿತರು ಮತ್ತು ಮಹಿಳೆಯರು ಸೇರಿದಂತೆ ಎಲ್ಲ ಕಾಯಕಜೀವಿಗಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ಅರಿವು ಮೂಡಿಸಿದರು. ಜಗತ್ತಿನ ಯಾವ ದೇಶಗಳಲ್ಲೂ ಸಂವಿಧಾನದ ಕನಸು ಬೀಳದ ಸಂದರ್ಭದಲ್ಲಿ ಆಧುನಿಕ ಸಂವಿಧಾನಗಳಿಗೆ ಬೀಜಸ್ವರೂಪವಾದಂಥ ಅಂಶಗಳನ್ನು ವಚನಗಳಲ್ಲಿ ಸೃಷ್ಟಿಸಿದರು. ಅನುಭವ ಮಂಟಪದ ಜೊತೆಯಲ್ಲೇ ಒಳಜಗತ್ತಿಗೆ ಸಂಬಂಧಿಸಿದ ಅರಿವಿನ ಮನೆ ಮತ್ತು ಹೊರ ಜಗತ್ತಿಗೆ ಸಂಬಂಧಿಸಿದ ಮಹಾಮನೆಗಳ ಸ್ಥಾಪನೆ ಮಾಡಿದರು. ಅರಿವಿನ ಮನೆ ಇಷ್ಟಲಿಂಗಯೋಗಕ್ಕೆ ಸಂಬಂಧಿಸಿದ್ದರೆ ಮಹಾಮನೆ ಸಮಾಜವೆಂಬ ಜಂಗಮಲಿಂಗದ ಯೋಗಕ್ಷೇಮಕ್ಕೆ ಸಂಬಂಧಿಸಿತ್ತು.

ಸಮೂಹ ನಾಯಕತ್ವ:

ಕಾಯಕಜೀವಿಗಳನ್ನು ಸಂಘಟಿಸುವುದರ ಮೂಲಕ ಬಸವಣ್ಣನವರು ದುಡಿಯುವ ವರ್ಗದ ಮೊದಲ ನಾಯಕರಾದರು. ಆದರೆ ಅವರು ತಮ್ಮ ನಾಯಕತ್ವವನ್ನು ಸಮೂಹ ನಾಯಕತ್ವವಾಗಿ ಪರಿವರ್ತಿಸಿದರು. ರಾಜರುಗಳಿಂದ ತುಂಬಿದ್ದ ಜಗತ್ತಿನಲ್ಲಿ ಸಮೂಹ ನಾಯಕತ್ವದ ಪ್ರಶ್ನೆಯೆ ಇರಲಿಲ್ಲ. ರಾಜ ಹೇಳಿದ್ದೇ ಅಂತಿಮವಾಗಿತ್ತು. ಆದರೆ ಬಸವಣ್ಣನವರು ವಿಶ್ವದಲ್ಲಿ ಮೊದಲ ಬಾರಿಗೆ ಸಮೂಹ ನಾಯಕತ್ವದ ಪರಿಕಲ್ಪನೆಯನ್ನು ಸಾಕಾರಗೊಳಿಸಿದರು. ಅಲ್ಲಿಯ ವರೆಗೆ ಜಗತ್ತಿನ ಯಾವ ದಾರ್ಶನಿಕನಿಗೂ ಸಮೂಹ ನಾಯಕತ್ವದ ಕಲ್ಪನೆ ಮೂಡಿರಲಿಲ್ಲ. ಅನುಭವ ಮಂಟಪದ 770 ಅಮರಗಣಂಗಳೇ ಆ ಸಮೂಹ ನಾಯಕರು. ಇಲ್ಲಿನ ಬಹುಪಾಲು ನಾಯಕರೆಲ್ಲ ವಿವಿಧ ಸಾಮಾಜಿಕ ಸ್ತರಗಳಿಂದ ಬಂದ ಕಾಯಕಜೀವಿಗಳಾದ ಶರಣ ಶರಣೆಯರಾಗಿದ್ದರು. ಕೆಲವರು ಮೇಲಿನ ವರ್ಣಗಳವರು ಶರಣಸಂಕುಲದ ಸರ್ವಸಮತ್ವವನ್ನು ಒಪ್ಪಿಕೊಂಡು ಶರಣ ಶರಣೆಯರಾಗಿದ್ದರು. ಇವರೆಲ್ಲ ಅನುಭವ ಮಂಟಪವೆಂಬ ಸಮಾಜೋಧಾರ್ಮಿಕ ಸಂಸತ್ತಿನ ಸದಸ್ಯರಾಗಿದ್ದರು. ನಟುವರ ಜನಾಂಗದಿಂದ ಬಂದ ಮಹಾಜ್ಞಾನಿ ಅಲ್ಲಮಪ್ರಭುಗಳು ಈ ಸಂಸತ್ತಿನ ಸಭಾಧ್ಯಕ್ಷರಾಗಿದ್ದರು. ಹೀಗೆ ಜಗತ್ತಿನಲ್ಲಿ ಮೊದಲಬಾರಿಗೆ ಸಂಸತ್ತಿನ ಪರಿಕಲ್ಪನೆ ಮೂಡಿತು.

ಅನುಭವ ಮಂಟಪದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವಿತ್ತು. ಬದುಕಿನ ಎಲ್ಲ ಆಗುಹೋಗುಗಳ ಚರ್ಚೆಯಾಗುತ್ತಿತ್ತು. ಶರಣರ ವಚನಗಳು ಅನುಭವ ಮಂಟಪದ ಮೂಸೆಯಲ್ಲಿ ಹಾಯ್ದು ಹೊರಬರುತ್ತಿದ್ದವು. ಅಂದರೆ 770 ಅಮರಗಣಂಗಳ ಒಪ್ಪಿಗೆ ಪಡೆದು ಮಸೂದೆಗಳು ಕಾಯ್ದೆಗಳಾಗುವ ಹಾಗೆ ವಚನಗಳು ಹೊರಬರುತ್ತಿದ್ದವು. ಈ ಕಾರಣದಿಂದಲೇ ವಚನಗಳು 'ವಚನ ಸಂವಿಧಾನ' ಎಂದು ಕರೆಯಿಸಿಕೊಂಡವು.

ಚಳವಳಿಗಳ ಜನಕ:

ಚಳವಳಿಯ ಪ್ರಜ್ಞೆ ಇಲ್ಲದೆ ಶರಣ ಸಂಕುಲವನ್ನಾಗಲಿ, ಅನುಭವ ಮಂಟಪವನ್ನಾಗಲಿ ಸೃಷ್ಟಿಸುವುದು ಸಾಧ್ಯವಿಲ್ಲ. ಯುದ್ಧಗಳ ಜಗತ್ತಿನಲ್ಲಿ ಶರಣರ ಸಹಾಯದೊಂದಿಗೆ ಚಳವಳಿಯನ್ನು ಮೊದಲಿಗೆ ರೂಪಿಸಿದವರು ಬಸವಣ್ಣನವರು. ಹಿಂಸೆ ಮತ್ತು ಯುದ್ಧಕ್ಕೆ ವಿರುದ್ಧವಾಗಿರುವ ಚಳವಳಿಗಳು ಶೋಷಣೆಯಿಲ್ಲದ ಬದುಕಿನ ಪರವಾಗಿರುತ್ತವೆ. ರಾಜ್ಯಶಕ್ತಿಯ ಕ್ರೌರ್ಯದ ವಿರುದ್ಧ ಹೋರಾಡುತ್ತ ವಿಜಯ ಸಾಧಿಸುವಲ್ಲಿ ಚಳವಳಿಗಳು ಜನಸಾಮಾನ್ಯರ ಬಹು ಪರಿಣಾಮಕಾರಿ ಅಸ್ತ್ರಗಳಾಗಿವೆ. ವಚನ ಚಳವಳಿ ವಿಶ್ವದ ಮೊದಲ ಚಳವಳಿಯಾಗಿದೆ. ಈ ಚಳವಳಿಯ ಪ್ರಜ್ಞೆಯಿಂದಾಗಿಯೆ ಶರಣರು ಹೊಸ ಮಾನವೀಯ ವ್ಯವಸ್ಥೆ ರೂಪಿಸುವಲ್ಲಿ ತಲ್ಲೀನರಾದರು. ದಯೆಯ ಮೂಲಕ ಯುದ್ಧಗಳಿಲ್ಲದ ಜಗತ್ತಿನ ಕನಸುಗಾರರಾದರು. ವಚನ ಚಳವಳಿ ಎಂಬ ಈ

ಸರ್ವೋದಯ ಚಳವಳಿಯಲ್ಲಿ ಬಸವಣ್ಣನವರ ಇಡೀ ಕುಟುಂಬದ ಜೊತೆ ಅಕ್ಕನಾಗಮ್ಮ ಮತ್ತು ಸೋದರಳಿಯ ಚನ್ನಬಸವಣ್ಣನವರೂ ಪಾಲ್ಗೊಂಡಿದ್ದರು.

ತುಳಿತಕ್ಕೊಳಗಾದವರಿಗೆ ಶಿಕ್ಷಣ:

ಬಸವಣ್ಣನವರು ವಯಸ್ಕರ, ಮಹಿಳೆಯರ, ದಲಿತರ, ಹಿಂದುಳಿದವರ ಮತ್ತು ಒಟ್ಟಾರೆ ಕಾಯಕಜೀವಿಗಳ ಶಿಕ್ಷಣದ ಹರಿಕಾರರಾಗಿದ್ದಾರೆ. ಕಾಯಕಜೀವಿಗಳ ಶಿಕ್ಷಣ ಸಂಘಟನೆ ಮತ್ತು ಹೋರಾಟ ವಚನ ಚಳವಳಿಯ ಪ್ರಮುಖ ಅಂಶಗಳಾಗಿವೆ. ಬಸವಣ್ಣನವರು ಜನಸಮುದಾಯ ಸಂಘಟಿತರಾಗುವಂಥ ಶಿಕ್ಷಣ ನೀಡಿದರು ಮತ್ತು ಹೋರಾಟಕ್ಕೆ ಪೂರಕವಾದ ಶರಣಸಂಕುಲದಂಥ ಸಂಘಟನೆ ಮಾಡಿದರು. ಮೊದಲ ಬಾರಿಗೆ ಅಕ್ಷರ ಕಲಿತ ಕಾಯಕಜೀವಿಗಳು ಉತ್ಕೃಷ್ಟ ವಚನ ಸಾಹಿತ್ಯ ರಚನೆ ಮಾಡಿದರು. ಅವರು ತಮ್ಮ ಕಾಯಕದ ಅನುಭವವನ್ನು ಅನುಭಾವದ ಮಟ್ಟಕ್ಕೇರಿಸಿದರು. 'ಹದ ಮಣ್ಣಲ್ಲದೆ ಮಡಕೆಯಾಗಲಾರದು' ಎಂದು ಕುಂಬಾರ ಗುಂಡಯ್ಯನವರ ಪುಣ್ಯಸ್ತ್ರೀ ಕೇತಲದೇವಿ ಹೇಳುತ್ತಾಳೆ. ಮಡಕೆ ಮಾಡಲು ಮಣ್ಣನ್ನು ಸೋಸಬೇಕು. ನೀರಲ್ಲಿ ಕಲಿಸಿಟ್ಟು ತುಳಿದು ತುಳಿದು ಹದ ಮಾಡಬೇಕು. ಈ ಕೆಲಸದ ಅನುಭವದ ಮೂಲಕ ಕೇತಲದೇವಿ ಅನುಭಾವದ ಮಾತುಗಳನ್ನು ಸೂಚಿಸುತ್ತಾಳೆ. ಪ್ರಕೃತಿದತ್ತವಾದ ಮನುಷ್ಯ ಸಂಸ್ಕಾರದ ಮೂಲಕ ಹದಗೊಂಡಾಗ ಅನುಭಾವ ತುಂಬಿದ 'ಘಟ'ವಾಗುತ್ತಾನೆ. ಹೀಗೆ ಕಾಯಕಜೀವಿಗಳು ತಮ್ಮ ಕಾಯಕದ ಅನುಭವವನ್ನು ಅನುಭಾವದ ಮಟ್ಟಕ್ಕೇರಿಸಿ ವಚನ ರಚನೆ ಮಾಡಿದರು. ಅನುಭವದ ಮೂಲಕ ಮಾತ್ರ ಅನುಭಾವದ ಕಡೆಗೆ ಹೋಗಲು ಸಾಧ್ಯ ಎಂಬುದನ್ನು ಸಾಬೀತುಪಡಿಸಿದರು. ವೈಯಕ್ತಿಕ ಕಾಯಕದ ಅನುಭವದ ಮೂಲಕ ಸಾಮೂಹಿಕ ಅನುಭಾವದ ಎತ್ತರಕ್ಕೆ ಒಯ್ಯುವ ವಿಶಿಷ್ಟವಾದ ವಚನ ಸಾಹಿತ್ಯ ಪ್ರಕಾರವನ್ನು ಬಸವಣ್ಣನವರು ಸಾಮಾಜೀಕರಣಗೊಳಿಸಿದರು. ಮಹಿಳೆಯರು, ದಲಿತರು, ಹಿಂದುಳಿದವರು ಮತ್ತು ಎಲ್ಲ ಕಾಯಕಜೀವಿಗಳು ವಿಶ್ವದಲ್ಲಿ ಮೊದಲಬಾರಿಗೆ ಒಂದಾಗಿ ತಮ್ಮ ಸ್ವಂತಿಕೆಯೊಂದಿಗೆ ಸೃಷ್ಟಿಸಿದ ವಚನ ಸಾಹಿತ್ಯ ಜಗತ್ತಿನ ದುಡಿಯುವ ವರ್ಗದ ಮೊದಲ ಸಾಹಿತ್ಯವಾಗಿದೆ.

ಮಾನವಹಕ್ಕುಗಳ ಪ್ರತಿಪಾದಕ:

1948 ಡಿಸೆಂಬರ್ 10ರಂದು ವಿಶ್ವಸಂಸ್ಥೆ ಘೋಷಿಸಿದ ಮಾನವಹಕ್ಕುಗಳಲ್ಲಿನ ಎಲ್ಲ 30 ಅಂಶಗಳು ಬಸವಣ್ಣನವರ ವಚನಗಳಲ್ಲಿವೆ. ಬಸವಣ್ಣನವರು 12ನೇ ಶತಮಾನದಲ್ಲೇ ಮಾನವಹಕ್ಕುಗಳ ಪ್ರತಿಪಾದನೆ ಮಾಡುವುದರ ಮೂಲಕ ಸರ್ವೋದಯದ ಪರಿಕಲ್ಪನೆಯನ್ನು ಕೊಟ್ಟಿದ್ದಾರೆ. ಬಸವಧರ್ಮದಲ್ಲಿ ಇಷ್ಟಲಿಂಗ ಧರಿಸಿದ ದಾಸೀಪುತ್ರರು, ವೇಶ್ಯಾಪುತ್ರರು ಮತ್ತು ರಾಜಪುತ್ರರು ಉಳಿದವರ ಹಾಗೆ

ಸಮಾನ ಸ್ಥಾನಮಾನ ಮತ್ತು ಮರ್ಯಾದೆಗೆ ಯೋಗ್ಯರಾಗುತ್ತಾರೆ. ವಿಶ್ವಸಂಸ್ಥೆಯ ಮಾನವಹಕ್ಕುಗಳ ಪ್ರಕಾರ ದಾಂಪತ್ಯದಿಂದ ಜನಿಸಿದ ಹಕ್ಕು ಮತ್ತು ಅನೈತಿಕ ಸಂಬಂಧದಿಂದ ಜನಿಸಿದ ಮಗುವಿನ ಹಕ್ಕಿನಲ್ಲಿ ವ್ಯತ್ಯಾಸವಿಲ್ಲ. ಹೀಗೆ ಮಾನವಹಕ್ಕುಗಳ ಎಲ್ಲ ಅಂಶಗಳೂ ಬಸವಣ್ಣನವರ ವಚನಗಳಲ್ಲಿವೆ.

ಸಾಮಾಜಿಕ ನ್ಯಾಯದ ಪರುಷಕಟ್ಟೆ:

ಶರಣಸಂಕುಲದೊಳಗೆ ವಿಶ್ವದ ಮೊದಲ ಸಾಮಾಜಿಕನಿಧಿಗೆ ಚಾಲನೆ ನೀಡಿದ ಕಲ್ಯಾಣದ ಪ್ರಧಾನಿ ಬಸವಣ್ಣನವರು ಕಲ್ಯಾಣದ ಪ್ರಜೆಗಳ ಅಹವಾಲುಗಳನ್ನು ಆಲಿಸಲು ಸಾಮಾಜಿಕ ನ್ಯಾಯದ ಪರುಷಕಟ್ಟೆಯನ್ನು ಸ್ಥಾಪಿಸಿದರು. ಜನರು ಬಸವಣ್ಣನವರನ್ನು ಮುಟ್ಟಿದ್ದೆಲ್ಲ ಚಿನ್ನವಾಗಿಸುವ ಪರುಷಮಣಿ ಎಂದೇ ಭಾವಿಸಿದರು. ಅವರು ಅಹವಾಲು ಕೇಳುವುದಕ್ಕಾಗಿ ಕೂಡುವ ಧರ್ಮದರ್ಶನ ಕಟ್ಟೆಗೆ ಪರುಷಕಟ್ಟೆ ಎಂದು ಕರೆದರು. ಜನರ ಆಶಯಗಳಿಗೆ ಧ್ವನಿಯಾಗಿದ್ದ ಬಸವಣ್ಣನವರು ರಾಜ ಬಿಜ್ಜಳನಿಗೆ ಜನರ ಕಷ್ಟಕಾರ್ಪಣ್ಯಗಳನ್ನು ವಿವರಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಯೋಜನೆಗಳಿಗೆ ಚಾಲನೆ ನೀಡುತ್ತಿದ್ದರು.

ಇಷ್ಟಲಿಂಗದ ಜನಕ:

'ಬಸವಣ್ಣನ ಉದರದಲ್ಲಿ ಹುಟ್ಟಿತ್ತು ಲಿಂಗ' ಎಂದು ಚೆನ್ನಬಸವಣ್ಣನವರು ಹೇಳಿದ್ದಾರೆ. ಬಸವಣ್ಣನವರೇ ಇಷ್ಟಲಿಂಗದ ಜನಕರು ಎಂಬುದನ್ನು ಅಲ್ಲಮಪ್ರಭು, ಸಿದ್ಧರಾಮ, ಅಕ್ಕಮಹಾದೇವಿ ಮುಂತಾದವರು ಸೂಚಿಸಿದ್ದಾರೆ. ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದವನ್ನು ಕಳೆದು ಸಮರತಿ, ಸಮಕಳೆ ಮತ್ತು ಸಮಸುಖದ ಅರಿವು ಮೂಡಿಸಲಿಕ್ಕಾಗಿಯೆ ಇರುವಂಥದ್ದು ಎಂಬುದನ್ನು ಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ. **'ಲಿಂಗವ ಪೂಜಿಸಿ ಫಲವೇನಯ್ಯಾ ಸಮರತಿ, ಸಮಕಳೆ, ಸಮಸುಖವನರಿಯದನ್ನಕ್ಕ'** ಎಂದು ಬಸವಣ್ಣನವರು ಪಶ್ನಿಸಿದ್ದಾರೆ.

ರಕ್ತಸಂಬಂಧವನ್ನು 'ನಂಟುಭಕ್ತಿ ನಾಯಕ ನರಕ' ಎಂದು ಅಲ್ಲಗಳೆದು ಭಕ್ತಿಸಂಬಂಧದ ಮೂಲಕ ಸರ್ವ ಜಾತಿಮತಗಳ ಜನರನ್ನು ಅಕ್ಕ, ಅಣ್ಣ, ಅಪ್ಪ, ಅವ್ವ, ಅಮ್ಮ, ತಾಯಿ, ತಂದೆ, ಬೊಪ್ಪ, ಅಜ್ಜ, ಮುತ್ತಜ್ಜ, ಮುತ್ತಾತ, ಅಯ್ಯ, ಮುತ್ತಯ್ಯ ಮುಂತಾದ ರಕ್ತಸಂಬಂಧದ ಶಬ್ದ ಮತ್ತು ಪದಗಳಿಗೆ ಭಕ್ತಿಸಂಬಂಧದ ಅರ್ಥ ಕೊಟ್ಟು ಇಡೀ ಮಾನವ ಸಮಾಜವನ್ನೇ ಮಹಾಮನೆಯ ಪರಿಕಲ್ಪನೆಯಲ್ಲಿ ನೋಡಿದ್ದಾರೆ. ಕಲ್ಯಾಣದ ಪ್ರಧಾನಿಯಾಗಿದ್ದರೂ ಕಾಯಕಜೀವಿಗಳ ಜೊತೆ ದಾಸೋಹದ ಪಂಕ್ತಿಯಲ್ಲಿ ಪ್ರಸಾದ ಸ್ವೀಕರಿಸುತ್ತ ಅವರ ಜೊತೆ ಬದುಕಿದ್ದಾರೆ.

ಕಾಯಕ, ಪ್ರಸಾದ ಮತ್ತು ದಾಸೋಹ ಪ್ರಜ್ಞೆಯೊಂದಿಗೆ ಸಮೂಹ ಬದುಕಿಗೆ ನಾಂದಿ ಹಾಡಿದ್ದಾರೆ. ಬಿಜ್ಜಳನ ಹಳೆಯ ರಾಜ್ಯವ್ಯವಸ್ಥೆಯ ಪ್ರಧಾನಿಯಾಗಿದ್ದರೂ ನವಸಮಾಜದ ನಿರ್ಮಾಣಕ್ಕಾಗಿ ಕಾಯಕಜೀವಿಗಳ ನಾಯಕತ್ವ ವಹಿಸಿಕೊಂಡು ಅದ್ವಿತೀಯ ಮುತ್ಸದ್ದಿ ಎನಿಸಿಕೊಂಡಿದ್ದಾರೆ. ಪ್ರಧಾನಿ ಸಮೇತ ಎಲ್ಲ ಪರಸೇವಕರು ಮತ್ತು ಕಾಯಕಜೀವಿಗಳು ಸರಿಸಮಾನರು ಎಂದು ಘೋಷಿಸಿದವರೇ ಬಸವಣ್ಣನವರು.

ಸ್ವರ್ಗ ನರಕಗಳಿಲ್ಲದ ಧರ್ಮ:

ಬಸವಧರ್ಮವು ಮೂಲತಃ ಮಾನವ ವಿಮೋಚನೆಯ ಚಳವಳಿಯಾಗಿ ರೂಪುಗೊಂಡು ಲಿಂಗವಂತ ಧರ್ಮವಾಯಿತು. ವಚನಧರ್ಮ, ಕಾಯಕಜೀವಿಗಳ ಧರ್ಮ, ಶರಣಧರ್ಮ, ಲಿಂಗಾಯತ ಧರ್ಮ ಮುಂತಾದ ಹೆಸರುಗಳಿಂದ ಈ ಜೀವನವಿಧಾನವನ್ನು ಕರೆಯಲಾಗಿದೆ. ಬಸವಧರ್ಮದಲ್ಲಿ ಸ್ವರ್ಗ, ನರಕ, ಪುಣ್ಯ, ಪಾಪ, ಪುನರ್ಜನ್ಮ ಮೋಕ್ಷ ಮತ್ತು ಇವೆಲ್ಲವುಗಳ ತಾಯಿಬೇರಾದ ಕರ್ಮಸಿದ್ಧಾಂತಗಳಿಲ್ಲ. ದಯವೇ ಈ ಧರ್ಮದ ಮೂಲವಾಗಿದೆ. ಈ ಧರ್ಮದಲ್ಲಿ ದೇವರು ದಯೆಯ ರೂಪದಲ್ಲಿದ್ದಾನೆ. ದಯೆಯ ಮೂರ್ತಿ ಮಾಡಲಿಕ್ಕಾಗದು, ದಯೆಗೆ ಗುಡಿ ಕಟ್ಟಲಿಕ್ಕಾಗದು. ದಯೆ ಎಂಬ ದೇವರಿಗೆ ನಮ್ಮ ದೇಹವೇ ದೇವಾಲಯವಾಗಿದೆ. ಜೀವಕಾರುಣ್ಯದಿಂದ ಕೂಡಿದ ಸಂವೇದನಾಶೀಲ ಮನುಷ್ಯರು ಮಾತ್ರ ತಮ್ಮ ದಯಾಭಾವದಲ್ಲಿ ಈ ದೇವರನ್ನು ಕಾಣಬಲ್ಲರು.

ಈ ಧರ್ಮದಲ್ಲಿ ಆಚಾರವೇ ಸ್ವರ್ಗವಾಗಿದೆ. ಅನಾಚಾರವೇ ನರಕವಾಗಿದೆ. ಜೀವಕಾರುಣ್ಯದಿಂದ ಮಾಡುವ ಕ್ರಿಯೆಗಳು ಪುಣ್ಯವನ್ನೇ ಕೊಡುತ್ತವೆ. ಜೀವಕಾರುಣ್ಯಕ್ಕೆ ವಿರುದ್ಧವಾದ ಕ್ರಿಯೆಗಳು ಪಾಪವನ್ನೇ ಕೊಡುತ್ತವೆ. ಅವೆಲ್ಲವುಗಳನ್ನು ನಾವು ಜೀವಿತಾವಧಿಯಲ್ಲೇ ಅನುಭವಿಸುತ್ತೇವೆ. ಅದಕ್ಕಾಗಿ ಪ್ರತ್ಯೇಕ ಸ್ವರ್ಗ ನರಕಗಳಿಲ್ಲ. 'ಕೈಲಾಸವೆಂಬುದೇನೋ ಪೃಥ್ವಿಯ ಮೇಲೊಂದು ಮೊರಡಿ' ಎಂದು ಬಸವಣ್ಣನವರು ಹೇಳಿದ್ದಾರೆ. ಹೀಗೆ ಕೈಲಾಸವನ್ನು ಬರಡುಭೂಮಿ ಎಂದು ತಿರಸ್ಕರಿಸಿದ್ದಾರೆ.

ಈ ಇಷ್ಟಲಿಂಗ ತತ್ತ್ವ ಅಥವಾ ವಚನತತ್ತ್ವದ ಅರಿವೇ ಪುನರ್ಜನ್ಮವನ್ನು ಕೊಡುವಂಥದ್ದು. ಸತ್ತು ಹುಟ್ಟುವ ಪುನರ್ಜನ್ಮ ಲಿಂಗವಂತ ಧರ್ಮದಲ್ಲಿ ಇಲ್ಲ. ನಮ್ಮೊಳಗಿನ ದೇವರ ಜೊತೆಗೆ ಇರುವುದೇ 'ಲಿಂಗೈಕ್ಯ ಸ್ಥಿತಿ'. ಅದುವೇ ಮೋಕ್ಷ. ಆದ್ದರಿಂದ ಈ ಧರ್ಮದಲ್ಲಿ ಸತ್ತ ಮೇಲಿನ ಮೋಕ್ಷಕ್ಕೆ ಸ್ಥಾನವಿಲ್ಲ. ಲಿಂಗೈಕ್ಯ ಸ್ಥಿತಿಯನ್ನು ತಲುಪಿದ ಮೇಲೆ ಪುನರ್ಜನ್ಮದ ಪ್ರಶ್ನೆಯೆ ಇಲ್ಲ. ಆದ್ದರಿಂದ ಶರಣರು ಸತ್ತ ಮೇಲಿನ ಪುನರ್ಜನ್ಮವನ್ನು ಅಲ್ಲಗಳೆದಿದ್ದಾರೆ.

ಈ ಧರ್ಮದಲ್ಲಿ ಇರುವುದು ಕಾಯಕ ಸಿದ್ಧಾಂತ. ಎಲ್ಲ ಅನಿಷ್ಟಗಳ ತಾಯಿಯಾದ ಕರ್ಮಸಿದ್ಧಾಂತಕ್ಕೆ ಇಲ್ಲಿ ಯಾವ ಬೆಲೆಯೂ ಇಲ್ಲ. 'ಕೂಡಲಸಂಗಮದೇವರ ಮನಮುಟ್ಟಿ

ಪೂಜಿಸಿ ಕರ್ಮ ಹರಿಯದೊಡಾ ಪೂಜೆ ಅದೇತಕೊ' ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ಹೀಗೆ ಸಂಕಷ್ಟಕ್ಕೊಳಗಾದ ಜನರ ಮಧ್ಯದಿಂದಲೇ ಎಲ್ಲರನ್ನೂ ಒಳಗೊಳ್ಳುವ ಹೊಸ ಜೀವನವಿಧಾನವನ್ನು ಬಸವಣ್ಣನವರು ಸೃಷ್ಟಿಸಿದ್ದಾರೆ.

ದೇವರು ದಯೆಯ ರೂಪದಲಿ ನಮ್ಮೊಳಗೇ ಇರುವುದರಿಂದ ಬಸವಧರ್ಮದಲ್ಲಿ ಮಂದಿರ, ಮೂರ್ತಿ ಮತ್ತು ಮೂರ್ತಿಪೂಜೆ ಇಲ್ಲ. ಮಠೀಯ ವ್ಯವಸ್ಥೆ ಇಲ್ಲ. ಸ್ವಾಮಿಗಳಿಲ್ಲ.

ಪರ್ಯಾಯ ವ್ಯವಸ್ಥೆ:

ಬಸವಣ್ಣನವರು ವೈದಿಕ ವ್ಯವಸ್ಥೆಯ ಎಲ್ಲವನ್ನೂ ತಿರಸ್ಕರಿಸಿದರು. ಅದಕ್ಕೆ ಪರ್ಯಾಯವಾಗಿ ಹೊಸ ಮಾನವೀಯ ವ್ಯವಸ್ಥೆಯನ್ನು ಜಾರಿಗೊಳಿಸಿದರು. ಬಹುದೇವೋಪಾಸನೆಗೆ ಪರ್ಯಾಯವಾಗಿ ಏಕದೇವೋಪಾಸನೆ, ಸ್ಥಾವರಲಿಂಗಕ್ಕೆ ಪರ್ಯಾಯವಾಗಿ ಇಷ್ಟಲಿಂಗ, ಮಂದಿರಕ್ಕೆ ಪರ್ಯಾಯವಾಗಿ ಅನುಭವ ಮಂಟಪ, ಮಠಕ್ಕೆ ಪರ್ಯಾಯವಾಗಿ ಮಹಾಮನೆ, ಸ್ವಾಮಿಗೆ ಪರ್ಯಾಯವಾಗಿ ತತ್ತ್ವಜಂಗಮ, ಕರ್ಮಸಿದ್ಧಾಂತಕ್ಕೆ ಪರ್ಯಾಯವಾಗಿ ಕಾಯಕಸಿದ್ಧಾಂತ. ಜಾತಿಭೇದ ಸಮಾಜಕ್ಕೆ ಪರ್ಯಾಯವಾಗಿ ಜಾತಿಸಂಕರ ಸಮಾಜ ಮುಂತಾದವು ಬಸವಣ್ಣನವರ ಪರ್ಯಾಯ ವ್ಯವಸ್ಥೆಯ ಅಂಶಗಳಾಗಿವೆ.

ಮೂಢನಂಬಿಕೆಗೆ ವಿರೋಧ:

ಕರ್ಮಸಿದ್ಧಾಂತವು ಎಲ್ಲ ಅನಿಷ್ಟಗಳ ತಾಯಿಬೇರಾಗಿದೆ. ವರ್ಣ-ಜಾತಿ, ಮೇಲು-ಕೀಳು, ಕಷ್ಟ-ಸುಖ, ಸುದೈವ-ದುರ್ದೈವ, ಹೆಣ್ಣು-ಗಂಡು ಹೀಗೆ ಎಲ್ಲದರ ನಿರ್ಧಾರ ಮಾಡುವುದು ಕರ್ಮಸಿದ್ಧಾಂತವೇ ಆಗಿದೆ. ನಮ್ಮ ಬದುಕಿನ ಆಗುಹೋಗುಗಳಿಗೆಲ್ಲ ಅದೇ ಕಾರಣವಾಗಿದೆ ಎಂಬ ಭ್ರಮೆಯನ್ನು ಸಹಸ್ರಾರು ವರ್ಷಗಳಿಂದ ಮಾನವರ ಮನೋಭೂಮಿಕೆಯಲ್ಲಿ ಬಿತ್ತಲಾಗಿದೆ.

ಜನಸಮುದಾಯವನ್ನು ದುರ್ಬಲಗೊಳಿಸುವ ಪಂಚಾಂಗ, ಶನಿಕಾಟ ಮತ್ತು ಮೂಢನಂಬಿಕೆಗಳನ್ನು ಬಸವಾದಿ ಶರಣರು ಪ್ರಬಲವಾಗಿ ವಿರೋಧಿಸಿದರು.

"ಇಪ್ಪತ್ತು ನಾಲ್ಕು ತಿಥಿಯಿಂದ ವೆಗ್ಗಳ.
ಗ್ರಹಣ ಸಂಕ್ರಾಂತಿಯಿಂದ ವೆಗ್ಗಳ,
ಏಕಾದಶಿ ವ್ಯತೀಪಾತದಿಂದ ವೆಗ್ಗಳ,
ಸೂಕ್ಷ್ಮ ಶಿವಪಥವನರಿದಂಗೆ
ಹೋಮ ನೇಮ ಜಪ ತಪದಿಂದ ವೆಗ್ಗಳ
ಕೂಡಲಸಂಗಮದೇವಾ ನಿಮ್ಮ ಮಾಣದೆ ನೆನೆವಂಗೆ."

ಸದಾ ಕೂಡಲಸಂಗಮದೇವರನ್ನು ನೆನೆಯುವುದು ತಿಥಿ, ಗ್ರಹಣ, ಸಂಕ್ರಾಂತಿ, ಏಕಾದಶಿ, ಸೂರ್ಯ-ಚಂದ್ರ ಯೋಗ, ಹೋಮ, ನೇಮ, ಜಪ ಮತ್ತು ತಪಕ್ಕಿಂತ ಶ್ರೇಷ್ಠವಾದುದು ಎಂದು ಬಸವಣ್ಣನವರು ತಿಳಿಸಿದ್ದಾರೆ.

ಪರಿಸರವಾದಿ:

'ಜೀವಜಾಲದಲ್ಲಿದೆ ಚರಾಚರವೆಲ್ಲ' ಎಂದು ಬಸವಣ್ಣನವರು ತಿಳಿಸಿದ್ದಾರೆ.

"ಮರ ಗಿಡು ಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತರಿತರಿದು
ಪ್ರಾಣವ ಕೊಂದುಂಡು, ಶರೀರ ಹೊರೆವ ದೋಷಕ್ಕೆ
ಇನ್ನಾವುದು ವಿಧಿಯಯ್ಯಾ?
ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ
ಜೀವಜಾಲದಲ್ಲಿದೆ ಚರಾಚರವೆಲ್ಲ.
ಅದು ಕಾರಣ,
ಕೂಡಲಸಂಗನ ಶರಣರು ಲಿಂಗಕ್ಕರ್ಪಿಸಿ ಪ್ರಸಾದವ ಕೊಂಡು
ನಿರ್ದೋಷಿಗಳಾಗಿ ಬದುಕಿದರು."

ಎಂದು ಬಸವಣ್ಣನವರು ಹೇಳುವ ಮೂಲಕ ಸಸ್ಯಗಳಿಗೂ ಜೀವವಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಸಸ್ಯಾಹಾರ ಸೇವನೆ ಕೂಡ ಹಿಂಸೆಯನ್ನು ಅಂಟಿಸಿಕೊಂಡೇ ಇದೆ. ಅಂತೆಯೆ ಶರಣರು ತಮ್ಮ ಆಹಾರವನ್ನು ಲಿಂಗಕ್ಕರ್ಪಿಸಿ ಪ್ರಸಾದವ ಕೊಂಡು ನಿರ್ದೋಷಿಗಳಾಗಿ ಬದುಕಿದರು.

ಅರ್ಥವಿಜ್ಞಾನಿ, ಸಮಾಜವಿಜ್ಞಾನಿ, ಮನೋವಿಜ್ಞಾನಿ, ಭಾಷಾವಿಜ್ಞಾನಿ, ತತ್ತ್ವಜ್ಞಾನಿ, ಮಹಾನ್ ಆಡಳಿತಗಾರ ಮತ್ತು ಸಮಗ್ರ ಕ್ರಾಂತಿಯ ಜನಕರಾದ ಬಸವಣ್ಣನವರು ಆತ್ಮವಿಶ್ವಾಸ ಮತ್ತು ಆತ್ಮಗೌರವದ ಪ್ರತಿಪಾದಕರಾಗಿದ್ದರು. ದಂಡರೂಪಿ ಸುಲಿಗೆಯ ಪ್ರಾಯಶ್ಚಿತ್ತವನ್ನು ಅಲ್ಲಗಳೆದು ಮನ ಪರಿವರ್ತನೆಯ ಪಶ್ಚಾತ್ತಾಪದ ದಾರಿ ತೋರಿಸಿದರು.

ಅರಿವಿನ ಮೂಲಕ ಆತ್ಮವು ಸಕಲ ಜೀವಾತ್ಮರ ಜೊತೆ ಸಂಪರ್ಕ ಹೊಂದುವಂತೆ ಮಾಡುವುದರ ಮೂಲಕ ಒಳ ಮತ್ತು ಹೊರ ಜಗತ್ತಿನ ಮಧ್ಯೆ ಸಂಬಂಧ ಕಲ್ಪಿಸಿದರು. ಒಳಗಿನ ಸ್ವಾಂತಂತ್ರ್ಯದ ಅರಿವು ಮತ್ತು ಹೊರಗಿನ ಕರ್ತವ್ಯಪ್ರಜ್ಞೆಯನ್ನು ಮೂಡಿಸಿದರು. ಕೆಳವರ್ಗೀಕರಣಕ್ಕೆ ಮತ್ತು ಕೆಳಜಾತೀಕರಣಕ್ಕೆ ಒಳಗಾಗುವುದರ ಮೂಲಕ ವ್ಯಕ್ತಿತ್ವ ವಿಕಸನಕ್ಕೆ ಮಾರ್ಗಸೂಚಿಯಾದರು.

ರಾಜಪ್ರಭುತ್ವ ಅಳಿದು ಪ್ರಜಾಪ್ರಭುತ್ವ ಉದಯವಾಗುವುದರ ಕನಸು ಕಂಡರು. ಯುಗದ ಉತ್ಸಾಹವಾಗಿ ಜನಸಮುದಾಯದ ಏಳ್ಗೆಗಾಗಿ ಅಹರ್ನಿಶಿ ದುಡಿದರು.

ನ್ಯಾಯನಿಷ್ಠುರಿ:

'ನ್ಯಾಯನಿಷ್ಠುರಿ; ದಾಕ್ಷಿಣ್ಯಪರ ನಾನಲ್ಲ.

ಲೋಕವಿರೋಧಿ; ಶರಣನಾರಿಗಂಜುವನಲ್ಲ.

ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ.'

ಬಾಗಿದ ಶಿರ ಮುಗಿದ ಕೈಯೊಂದಿಗೆ ಸದುವಿನಯದಿಂದ ಬದುಕಿದ ಬಸವಣ್ಣನವರು ಸಾಂಪ್ರದಾಯಕವಾಗಿ ಬಂದ ಸುಲಿಗೆ ವ್ಯವಸ್ಥೆಯನ್ನು ವಿರೋಧಿಸುವಲ್ಲಿ ಯಾವುದೇ ದಾಕ್ಷಿಣ್ಯವನ್ನು ತೋರಿಸುತ್ತಿರಲಿಲ್ಲ. ನ್ಯಾಯನಿಷ್ಠುರಿಯಾದ ಶರಣ ಯಾರಿಗೂ ಅಂಜುವುದಿಲ್ಲ ಎಂದು ಶರಣರ ವ್ಯಕ್ತಿತ್ವದ ವ್ಯಾಖ್ಯಾನ ಮಾಡಿದ್ದಾರೆ.

ಈ ಧೈರ್ಯ ಸುಮ್ಮನೆ ಬಂದುದಲ್ಲ. ಎಲ್ಲರನ್ನೂ ಒಳಗೊಳ್ಳುವ 'ಕೂಡಲಸಂಗಮ ದೇವ' ಎಂಬ ಸಿದ್ಧಾಂತ ಅವರ ಮುಂದೆ ಇತ್ತು. ಆ ಸಿದ್ಧಾಂತದ ಮಹಾತೇಜದಲ್ಲಿ ಅವರಿದ್ದರು. ಅಂದರೆ ಸಮತ್ವದ ಸೈದ್ಧಾಂತಿಕ ನಿಲವು ಅವರನ್ನು ಎಲ್ಲ ಅನಿಷ್ಟಗಳನ್ನು ಎದುರಿಸುವ ವೀರಪುರುಷನನ್ನಾಗಿಸಿತ್ತು.

ಅಹಂಕಾರ ಮರ್ದನ:

ಜೀವಕಾರುಣ್ಯ ತತ್ತ್ವದೊಂದಿಗೆ ಬಸವಣ್ಣನವರು ಅಹಂಕಾರ ಮರ್ದನ ಮಾಡಿದರು. ಅಹಂಕಾರವು ಎಲ್ಲ ಭೌತಿಕ ಅನಿಷ್ಟಗಳ ಮತ್ತು ಮನೋರೋಗಗಳ ಮೂಲವಾಗಿದೆ. ಜೀವ ಮತ್ತು ಜಗತ್ತಿನ ಅವಿರತ ಸಂಬಂಧವನ್ನು ತೋರಿಸುವ ಮೂಲಕ ದಯಾಭಾವದೊಂದಿಗೆ ಸಹನಶಕ್ತಿಯನ್ನು ಹೆಚ್ಚಿಸುತ್ತ ಮಾನವರನ್ನು ಅಹಂಕಾರ ಭಾವದಿಂದ ಮುಕ್ತಗೊಳಿಸಿ ಅವರೆಲ್ಲ ತಮ್ಮೊಳಗಿನ ದೇವರಿಗೆ ಶರಣಾಗುವಂಥ ಸಿದ್ಧಾಂತವನ್ನು ರೂಪಿಸಿದರು. ಇಡೀ ಮಾನವ ಕುಲ ಒಂದಾಗಿ ಸಕಲಜೀವಾತ್ಮರಿಗೆ ಲೇಸ ಬಯಸುವ ಹಾಗೆ ಬದುಕುವ ಕಲೆಯನ್ನು ಕಲಿಸಿದರು.

ವ್ಯಕ್ತಿತ್ವ ವಿಕಸನ: ಮಾನವರನ್ನು ವಿಚಾರವಾದಕ್ಕೆಳೆದು ಅವರ ವ್ಯಕ್ತಿತ್ವ ವಿಕಸನಗೊಳಿಸುವದೇ ಬಸವಣ್ಣನವರ ಗುರಿಯಾಗಿತ್ತು. ವೈದಿಕ ವ್ಯವಸ್ಥೆ ನಿರ್ಮಿಸಿದ ಜಾತಿ, ವರ್ಣಗಳ ಕಟ್ಟಳೆಗಳನ್ನು ತೆಗೆದುಹಾಕಿ ಅವರಿಗೆ ಕಾಯಕಜೀವಿಗಳಿಗೆ ಜಾತಿ ಮತ್ತು ಅಸ್ಪೃಶ್ಯತೆಯ ಮೂಲಕ ಹಾಕಿದ್ದ ನಿಗೂಢ ಆರ್ಥಿಕ ದಿಗ್ಬಂಧನವನ್ನು ಕಿತ್ತೆಸೆದು ಮಾನವರ ವ್ಯಕ್ತಿತ್ವ ವಿಕಸನಕ್ಕೆ ದಾರಿ ಮಾಡಿಕೊಟ್ಟವರು ಬಸವಣ್ಣನವರು. ಮನುವಾದಿ ಧರ್ಮದಲ್ಲಿ ಕಟ್ಟಕಡೆಯ ಜಾತಿಗೆ ಸೇರಿದ ಮಾದಾರ ಚೆನ್ನಯ್ಯನವರು ಬಸವಧರ್ಮದಲ್ಲಿ ತಮ್ಮ ಸತ್ಯಶುದ್ಧ ಕಾಯಕ ಮತ್ತು ದಾಸೋಹಂಭಾವದಿಂದಾಗಿ ದೇವರಿಗಿಂತಲೂ ಹೆಚ್ಚಿನ ವ್ಯಕ್ತಿತ್ವ ವಿಕಸನ ಹೊಂದುತ್ತಾರೆ. 'ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ ನಿಮ್ಮಿಂದಧಿಕ ನೋಡಾ ಕೂಡಲಸಂಗಮದೇವ' ಎಂದು ಬಸವಣ್ಣನವರು ಮನದುಂಬಿ ಹೇಳಿದ್ದಾರೆ.

ಇಷ್ಟಲಿಂಗದ ಮಹತ್ವ:

ಭಾರತೀಯ ಸಮಾಜೋ ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಇತಿಹಾಸದಲ್ಲಿ ಇಷ್ಟಲಿಂಗದ ಪಾತ್ರ ಅನನ್ಯವಾಗಿದೆ. ಸಮಾಜದ ವಿವಿಧ ಸ್ತರಗಳಿಂದ ಬಂದ ಕಾಯಕಜೀವಿಗಳು ವಿವಿಧ ಸ್ಥಾವರಲಿಂಗಗಳಿಗೆ ಅಂಟಿಕೊಂಡಿದ್ದರು. ಶೂದ್ರರು ಮತ್ತು ಪಂಚಮರಾದ ಅವರಿಗೆ ಆ ದೇವಾಲಯಗಳಲ್ಲಿ ಪ್ರವೇಶವಿರಲಿಲ್ಲ. ಅವರೆಲ್ಲ ಅಲ್ಲಿ ಬಿಟ್ಟಿಕೂಲಿಗಳಾಗಿ ದುಡಿಯಬೇಕಾಗಿತ್ತು. ರೈತಾಪಿ ಜನರು ಆಹಾರಧಾನ್ಯಗಳನ್ನು ಕೊಡಬೇಕಿತ್ತು. ಗಾಣಿಗರು ಎಣ್ಣೆ ಕೊಡಬೇಕಿತ್ತು. ಹೀಗೆ ಸುಲಿಗೆ ನಿರಂತರವಾಗಿ ನಡೆದಿತ್ತು. ಕಾಯಕಜೀವಿಗಳು ಸವರ್ಣೀಯರ ಸುಖಕ್ಕಾಗಿ ಜೀವ ತೇಯಬೇಕಿತ್ತು. ಇಂಥ ಪ್ರಸಂಗದಲ್ಲಿ ಕಾಯಕಜೀವಿಗಳನ್ನು ಮಂದಿರಗಳಿಂದ ಹೊರ ತರುವುದು ಅವಶ್ಯವಾಗಿತ್ತು. ಅದಕ್ಕಾಗಿ ಬಸವಣ್ಣನವರಿಗೆ ಅರಿವಿನ ಕುರುಹು ಆದ ಹೊಸ ದೇವಸಂಕೇತದ ಸೃಷ್ಟಿಯ ಅವಶ್ಯಕತೆಯಾಯಿತು. ಇಂಥ ಐತಿಹಾಸಿಕ ತಿರುವಿನ ಸಂದರ್ಭದಲ್ಲಿ ಇಷ್ಟಲಿಂಗದ ಸೃಷ್ಟಿಯಾಯಿತು. ಮೂರ್ತಿ ಮಂದಿರಗಳ ಹಂಗಿಲ್ಲದ ಏಕದೇವೋಪಾಸನೆಗಾಗಿ ಈ ಇಷ್ಟಲಿಂಗ ಹೇಳಿ ಮಾಡಿಸಿದಂತಿದೆ. ಕಾಯಕಜೀವಿಗಳು ಈ ಇಷ್ಟಲಿಂಗವನ್ನು ತಾವು ಹಿಂದೆ ಆರಾಧಿಸುತ್ತಿದ್ದ ದೇವರ ಹೆಸರಿನಲ್ಲೇ ಕಟ್ಟಿಕೊಂಡರು. ಹಾಗೆ ಕಟ್ಟಿಕೊಳ್ಳುವಾಗ ಬಸವಣ್ಣನವರ 'ದೇವನೊಬ್ಬ ನಾಮ ಹಲವು' ಎಂಬ ಎಚ್ಚರ ಅವರಿಗಿತ್ತು. ಇದೊಂದೇ ಲಿಂಗಾಯತರ ಪೂಜಾರ್ಹ ವಸ್ತು. ಈ ಇಷ್ಟಲಿಂಗ ಅನೇಕ ರೀತಿಯಲ್ಲಿ ಮಹತ್ವಪೂರ್ಣವಾಗಿದೆ. ಕಾಯಕಜೀವಿಗಳು ಇಷ್ಟಲಿಂಗ ಪೂಜೆ ಮಾಡಿಕೊಳ್ಳುವುದರ ಮೂಲಕ ತಮ್ಮೊಳಗಿನ ಅಂತಃಶಕ್ತಿಯೆಂಬ ಮಹಾಘನದೊಡನೆ ಒಂದಾಗುವ ಕ್ರಮ ಗೊತ್ತಾಯಿತು. ಇಂಥ ಶಕ್ತಿಯನ್ನು ಪಡೆದ ಅವರು ಸ್ವತಂತ್ರಧೀರರಾದರು. ತಾವು ಏಕಾತ್ಮ. ತಮ್ಮೊಳಗಿರುವಾತ ಪರಮಾತ್ಮ. ತಮ್ಮ ಮುಂದೆ ಇರುವುದು ಸಕಲಜೀವಾತ್ಮರಿಂದ ಕೂಡಿದ ಲೋಕಾತ್ಮ. ಏಕಾತ್ಮವು ತನ್ನ ಮುಂದಿರುವ ಲೋಕಾತ್ಮದ ಜೊತೆ ಒಂದಾದಾಗ ಮಾತ್ರ ತನ್ನೊಳಗಿನ ಪರಮಾತ್ಮನ ಜೊತೆ ಕೂಡಲು ಸಾಧ್ಯ. ಅಂದರೆ ಮಾನವರು ಸಕಲಜೀವಾತ್ಮರೊಂದಿಗೆ ತನುಮನಧನದೊಂದಿಗೆ ಒಂದಾದಾಗ ಮಾತ್ರ ತಮ್ಮೊಳಗಿನ ದೇವರ ಜೊತೆ ಒಂದಾಗಬಲ್ಲರು. ಇದುವೆ ಲಿಂಗಾಂಗಸಾಮರಸ್ಯ.

ವಿಮೋಚನೆಯ ಮಾರ್ಗ:

ಬಸವಣ್ಣನವರು ಆಂತರಿಕ ಶಕ್ತಿ ಮತ್ತು ಶುಚಿತ್ವಕ್ಕಾಗಿ ಇಷ್ಟಲಿಂಗದ ಅರಿವು ಕೊಟ್ಟರೆ. ಲೋಕದಲ್ಲಿ ಸರ್ವರೀತಿಯ ಸಮಾನತೆ ಸಾಧಿಸುವುದಕ್ಕಾಗಿ ಸಮಾಜವೆಂಬ ಜಂಗಮಲಿಂಗದ ಪ್ರಜ್ಞೆ ಕೊಟ್ಟರು. ಲಿಂಗವಂತರು ಕಾಯಕದ ಜವಾಬ್ದಾರಿ, ಪ್ರಸಾದ ಪ್ರಜ್ಞೆ ಮತ್ತು ದಾಸೋಹ ಭಾವದೊಂದಿಗೆ ಬದುಕುವುದೇ ಜಂಗಮಲಿಂಗಪೂಜೆ.

ಹೀಗೆ ಬದುಕುವುದರಿಂದ ಯಾರೂ ಉಪವಾಸದಿಂದ ನರಳುವುದಿಲ್ಲ. ಜಾತಿಯಿಂದಾಗಿ ಕಡೆಗಣನೆಗೆ ಒಳಗಾಗುವುದಿಲ್ಲ. ಬಡವ-ಬಲ್ಲಿದ ಎಂಬ ಭೇದ ಇರುವುದಿಲ್ಲ.

ಇಷ್ಟಲಿಂಗದಿಂದಾಗಿ ಕಾಯಕಜೀವಿಗಳಿಗೆ ಮಂದಿರಗಳಲ್ಲಿ ಆಗುವ ಅವಮಾನ ತಪ್ಪಿತು. ಮಂದಿರಗಳಲ್ಲಿ ಬಿಟ್ಟಿಕೂಲಿ ಮಾಡುವುದು ತಪ್ಪಿತು. ರೈತಾಪಿ ಜನರು ಆಹಾರ ಧಾನ್ಯಗಳನ್ನು ಬಿಟ್ಟಿಯಾಗಿ ಕೊಡುವುದು ತಪ್ಪಿತು. ಗಾಣಿಗರು ಎಣ್ಣೆ ಕೊಡುವುದನ್ನು ನಿಲ್ಲಿಸಿದರು. ದೇವರಿಗೆ ಹರಕೆ ಹೊರುವುದರ ಮೂಲಕ ಜೀವನವಿಡಿ ಉಳಿಸಿದ್ದನ್ನು ಕಳೆದುಕೊಳ್ಳುವುದು ನಿಂತಿತು. ಇಷ್ಟಲಿಂಗ ಪೂಜೆಗೆ ಯಾವುದೇ ಖರ್ಚು ಇಲ್ಲದ ಕಾರಣ ದೇವರ ಹೆಸರಿನಲ್ಲಿ ಪೂಜಾರಿಗಳು, ಮಾಂತ್ರಿಕರು, ಭವಿಷ್ಯಗಾರರು ಮತ್ತು ಇತರೆ ಮೂಢ ನಂಬಿಕೆ ಹಬ್ಬಿಸುವವರು ಮೋಸ ಮಾಡುವುದು ನಿಂತಿತು. ಹೀಗಾಗಿ ಕಾಯಕಜೀವಿಗಳ ಆರ್ಥಿಕ ಪರಿಸ್ಥಿತಿಯಲ್ಲಿ ಗಮನಾರ್ಹ ಸುಧಾರಣೆಯಾಯಿತು. 'ಕಲ್ಯಾಣದಲ್ಲಿ ಕೊಡುವವರುಂಟು ಬೇಡುವವರಿಲ್ಲ' ಎಂಬ ಹೊಸ ವಾತಾವರಣದ ಸೃಷ್ಟಿಯಾಯಿತು. ಇಷ್ಟಲಿಂಗವು ಆತ್ಮಗೌರವದ ಪ್ರತೀಕವಾಯಿತು. ಹೀಗೆ ಇಷ್ಟಲಿಂಗವು ಮಾನಸಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಕಾಯಕಜೀವಿಗಳನ್ನು ವಿಮೋಚನೆಗೊಳಿಸಿ ಹೊಸ ಜೀವನವಿಧಾನಕ್ಕೆ ನಾಂದಿಹಾಡಿತು.

* * *

ಬಸವ ಶಾಸನ

ಅರಿವಿಗೆ ಗುರುವಾದ ಮಹಾನುಭಾವಿ ಬಸವಣ್ಣನವರ ಅನುಯಾಯಿಗಳು ಕಾಲದ ಕರೆಗೆ ಓಗೊಟ್ಟು ಬಸವಾದಿ ಶರಣರ ಜೀವನವಿಧಾನವನ್ನೊಳಗೊಂಡ ವಚನ ಸಂದೇಶಗಳನ್ನು ಇಂದಿನ ಪಕ್ಷುಬ್ಧ ಜಗತ್ತಿಗೆ ತಲುಪಿಸಬೇಕಿದೆ. ಆ ಮೂಲಕ, ಸಕಲ ಚರಾಚರಗಳ ರಕ್ಷಣೆ ಮಾಡುವತ್ತ ಎಲ್ಲ ದೇಶಗಳ ಜನಸಮುದಾಯಗಳು ಧಾವಿಸುವ ಹಾಗೆ ಮಾಡುವುದು ನಮ್ಮ ಮುಂದಿರುವ ಪರಮ ಗುರಿಯಾಗಬೇಕಿದೆ.

ನಮ್ಮ ಶರಣರು ಬಸವ ಶಾಸನದ (ಶಾಂತಿ-ಸಮಾನತೆ-ನಮ್ರತೆ) ಮಾರ್ಗದರ್ಶನದಲ್ಲಿ

ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಸಮಾನತೆಯ ತಳಹದಿಯ ಮೇಲೆ ಕಲ್ಯಾಣದಲ್ಲಿ ಶರಣಸಂಕುಲವೆಂಬ ವೈಚಾರಿಕತೆಯಿಂದ ತುಂಬಿದ ಮಾನವೀಯ ಸಮಾಜವನ್ನು ಕಟ್ಟಿದರು. ಶಾಂತಿ, ಸಮಾನತೆ ಮತ್ತು ನಮ್ರತೆಯ ತಳಹದಿಯ ಮೇಲೆ ರಚನೆಗೊಂಡ ಶರಣಸಂಕುಲವು ವಿಶ್ವದಲ್ಲೇ ಅನನ್ಯವಾದ ಸಮಾಜವಾಗಿತ್ತು. ಶರಣರ ವಚನಗಳ ಒಟ್ಟು ಸಾರವೇ ಶಾಂತಿ, ಸಮಾನತೆ ಮತ್ತು ನಮ್ರತೆ ಆಗಿದೆ. ಈ ಮೂರು ಅಂಶಗಳನ್ನು ಒಳಗೊಂಡಿದ್ದೇ 'ಬಸವ ಶಾಸನ' ಎಂಬುದನ್ನು ನಾವು ಮನಗಾಣಬೇಕಿದೆ.

18ನೇ ಶತಮಾನದಲ್ಲಿ ನಡೆದ ಫ್ರೆಂಚ್ ಕ್ರಾಂತಿಯ 'ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವ' ಘೋಷಣೆಯಲ್ಲಿ ಮುಖ್ಯವಾಗಿ ಮೇಲ್ವರ್ಗದ ಪುರುಷರ ಹಕ್ಕುಗಳಿಗೆ ಆದ್ಯತೆ ನೀಡಲಾಗಿತ್ತು. ಮಹಿಳೆಯರು ಮತ್ತು ಕಾಯಕಜೀವಿಗಳ ಸಮಸ್ಯೆಗಳ ನಿವಾರಣೆಯ ವಿಚಾರ ಅಲ್ಲಿ ಪ್ರಮುಖವಾಗಲಿಲ್ಲ. ಆದರೆ 'ಶಾಂತಿ ಸಮಾನತೆ ನಮ್ರತೆ'ಯ ಸಾರವನ್ನು ಒಳಗೊಂಡ ಬಸವಾದಿ ಶರಣರ ವಚನಗಳಲ್ಲಿ ಮಹಿಳೆಯರು, ದಲಿತ, ಹಿಂದುಳಿದ ಮುಂತಾದ ಕಾಯಕಜೀವಿಗಳಿಗೆ ಹೆಚ್ಚಿನ ಮಹತ್ವವನ್ನು ಕೊಡಲಾಗಿದೆ. ಫ್ರೆಂಚ್ ಕ್ರಾಂತಿಗಿಂತ ಆರು ಶತಮಾನಗಳ ಮೊದಲೇ 'ಬಸವ ಶಾಸನ' ವಚನಸಂವಿಧಾನದ ಮೂಲಕ ಹೊರಹೊಮ್ಮಿದ್ದು ಅಭೂತಪೂರ್ವವಾಗಿದೆ. ಶಾಂತಿ ಶಬ್ದದ 'ಶಾ', ಸಮಾನತೆ ಶಬ್ದದ 'ಸ' ಮತ್ತು ನಮ್ರತೆ ಶಬ್ದದ 'ನ' ಅಕ್ಷರಗಳನ್ನು ಸೇರಿಸಿ 'ಶಾಸನ' ಎಂದು ಕರೆಯಲಾಗಿದೆ.

ವಿಶ್ವಗುರು ಬಸವಣ್ಣ:

ಬಸವಣ್ಣನವರು ತಮ್ಮನ್ನು ಎಂದೂ ವಿಶ್ವಗುರು ಎಂದು ಕರೆಯಿಸಿಕೊಂಡಿಲ್ಲ. 'ಎನಗಿಂತ ಕಿರಿಯರಿಲ್ಲ' ಎಂದು ಹೇಳಿದ್ದಾರೆ. ಅವರ ಸಮಕಾಲೀನ ಶರಣರು ಮತ್ತು ಅವರ ಅನುಯಾಯಿಗಳು ಅವರನ್ನು ವಿಶ್ವಗುರು ಎಂದೇ ಮಾನ್ಯ ಮಾಡಿದ್ದಾರೆ. ಭಕ್ತಿಭಂಡಾರಿ, ಮಹಾನುಭಾವಿ ಮತ್ತು ಜಗಜ್ಯೋತಿ ಎಂದೂ ಅವರನ್ನು ಅನುಯಾಯಿಗಳು ಕರೆಯುತ್ತಾರೆ.

ಬಾಲ್ಯಾವಸ್ಥೆಯಲ್ಲೇ ಸುಲಿಗೆಕೋರರ ಮರ್ಮವನ್ನೂ ಮತ್ತು ಸುಲಿಗೆಗೆ ಒಳಗಾದ ಬಡಪಾಯಿಗಳ ದುರಂತ ಸ್ಥಿತಿಯನ್ನೂ ಬಸವಣ್ಣನವರು ಅರ್ಥ ಮಾಡಿಕೊಂಡರು. ಮನುವಾದಿ ಸಮಾಜದಲ್ಲಿ ಶಾಂತಿ ಮತ್ತು ಸಮಾನತೆ ಮೇಲ್ವರ್ಗದವರ ಪಾಲಾಗಿದ್ದವು. ನಮ್ರತೆ ಮಾತ್ರ ಕೆಳವರ್ಗದವರಿಗೆ ಬಳುವಳಿಯಾಗಿ ಬಂದಿತ್ತು. ಮೇಲ್ವರ್ಗದವರ 'ಶಾಂತಿ' ಕೆಳವರ್ಗದವರನ್ನು ಅಶಾಂತರನ್ನಾಗಿಸಿತ್ತು. ಶ್ರೀಮಂತರ 'ಸಮಾನತೆ' ಬಡವರನ್ನು ಅಸಮಾನರನ್ನಾಗಿಸಿತ್ತು. ಅಶಾಂತಿ ಮತ್ತು ಅಸಮಾನತೆಯಿಂದ ಬಳಲುತ್ತಿದ್ದ ಬಡವರಿಗೆ ನಮ್ರತೆಯ ಪಾಠ ಕಲಿಸುವ ಮಠ-ಮಂದಿರಗಳು, ಧರ್ಮಗ್ರಂಥಗಳು, ಪುರಾಣ ಪ್ರವಚನಗಳು, ಕರ್ಮಸಿದ್ಧಾಂತಗಳು ಮತ್ತು ಮನುಸ್ಮೃತಿಯಂಥ ಸುಲಿಗೆಯ ಅಸ್ತ್ರಗಳು ನಮ್ಮ ದೇಶದಲ್ಲಿ ಹೇರಳವಾಗಿದ್ದವು.

ಶಾಂತಿ-ಸಮಾನತೆ-ನಮ್ರತೆ ಒಂದು ಸಮಾಜದ ಪ್ರತಿಯೊಬ್ಬರ ಜೀವನದ ಅವಿಭಾಜ್ಯ ಅಂಗವಾಗಬೇಕು ಎಂಬುದೇ ಬಸವಣ್ಣನವರ ಆಶಯವಾಗಿತ್ತು. 'ಶರಣು ಶರಣಾರ್ಥಿ' ಎಂಬ ಅಹಂಕಾರ ನಿರಸನ ಮಂತ್ರದೊಂದಿಗೆ ಈ ಮೂರನ್ನೂ ಮಾನವಕುಲದ ಸೊತ್ತನ್ನಾಗಿಸುವ ಮಹಾನ್ ಗುರಿಯನ್ನು ಬಸವಣ್ಣನವರು ಹೊಂದಿದ್ದರು.

ಎರಡು ಪ್ರಕಾರದ ಚಿಂತನೆ:

ಎರಡು ಪ್ರಕಾರದ ಚಿಂತನೆಗಳಿಂದ ಇದು ಸಾಧ್ಯವಾಗುವಂಥದ್ದಾಗಿತ್ತು. ಮೊದಲನೆಯದಾಗಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವ ವೈದಿಕಧರ್ಮ ಮತ್ತು ಧರ್ಮಗ್ರಂಥಗಳನ್ನು ತಿರಸ್ಕರಿಸುವುದು. ಎರಡನೆಯದಾಗಿ ಅವುಗಳಿಂದಾಗಿ ರಸಾತಳಕ್ಕಿಳಿದಿದ್ದ ದಲಿತರು, ಮಹಿಳೆಯರು, ಹಿಂದುಳಿದವರು ಮತ್ತು ಒಟ್ಟಾರೆ ಕಾಯಕಜೀವಿ ಬಡವರ ಬದುಕನ್ನು ಮೇಲೆತ್ತುವುದು. ಈ ಎರಡೂ ಪ್ರಕ್ರಿಯೆಗಳನ್ನು ಏಕಕಾಲಕ್ಕೆ ಜಾರಿಗೊಳಿಸಿದಾಗ ಮಾತ್ರ ಶೋಷಣೆ ಮತ್ತು ಅಪಮಾನಕ್ಕೊಳಗಾದವರನ್ನು ವಿಮೋಚನೆಗೊಳಿಸಲು ಸಾಧ್ಯವಾಗುವುದೆಂಬುದನ್ನು ಬಸವಣ್ಣನವರು ಬಹುಬೇಗ ಅರ್ಥ ಮಾಡಿಕೊಂಡು ಸಾಮಾಜಿಕ ಭೇದಭಾವಗಳ ವಿರುದ್ಧ ನಿರಂತರ ಕ್ರಿಯಾಶೀಲರಾದರು.

ಮಾದರಸ ಮಾದಲಾಂಬಿಕೆಯ ಮಗನಾಗಿ ಬಾಗೇವಾಡಿ ಅಗ್ರಹಾರದಲ್ಲಿ 12ನೇ ಶತಮಾನದಲ್ಲಿ ಜನಿಸಿದ ಬಸವಣ್ಣನವರದು ಶೈವಾಗಮ ಪ್ರಣೀತ ಸ್ಥಾವರಲಿಂಗ ಪೂಜಕರಾದ ಆಗಮಿಕ ಶುದ್ಧಶೈವ ಬ್ರಾಹ್ಮಣರ ಮನೆತನ. ನಮ್ಮ ನಾಡಿನ 12ನೇ

ಶತಮಾನವು ಯುದ್ಧಗಳಿಂದ ದಣಿದಿತ್ತು. ಧಾರ್ಮಿಕ ಕಂದಾಚಾರಗಳಿಂದಾಗಿ ದಾರಿ ಕಾಣದ ಸ್ಥಿತಿಯಲ್ಲಿತ್ತು. ಇಂಥ ವಿಷಮ ಪರಿಸ್ಥಿತಿಯಲ್ಲಿ ಬಸವಣ್ಣನವರು ವೈದಿಕ ವ್ಯವಸ್ಥೆಯನ್ನು ಎದುರಿಸುತ್ತ ದಲಿತರು, ಮಹಿಳೆಯರು, ಹಿಂದುಳಿದವರು ಮತ್ತು ಇತರ ಕಾಯಕಜೀವಿಗಳಲ್ಲಿ ಆತ್ಮವಿಶ್ವಾಸ ತುಂಬಿದರು. ಶೋಷಣೆಯ ತಾಣವಾಗಿದ್ದ ದೇಗುಲಗಳ ಸಂಸ್ಕೃತಿಯನ್ನು ತಿರಸ್ಕರಿಸಿ 'ದೇಹವೇ ದೇಗುಲ' ಸಂಸ್ಕೃತಿಯನ್ನು ಜಾರಿಗೊಳಿಸಿದರು. ಕರ್ಮಸಿದ್ಧಾಂತ ಸೃಷ್ಟಿಸಿದ ಮೂಢ ನಂಬಿಕೆಗಳನ್ನು ಅಲ್ಲಗಳೆದರು. ರಾಹುಕಾಲ, ಗುಳಿಕಕಾಲ, ಯಮಗಂಡಕಾಲ, ನಕ್ಷತ್ರ, ವಾರ, ತಿಥಿ ಮತ್ತು ಸುಮುಹೂರ್ತದ ಕುರಿತು ಭ್ರಮೆಗಳನ್ನು ಸೃಷ್ಟಿಸುವ ಪಂಚಾಂಗಗಳನ್ನು ಅಲ್ಲಗಳೆದರು. ತಾರಾಬಲದಿಂದ ಮಾನವನ ಉದ್ಧಾರವಾಗುವುದಿಲ್ಲ. ದೈಹಿಕ ಮತ್ತು ಮನೋಬಲದಿಂದ ಮಾತ್ರ ಉದ್ಧಾರವಾಗಲು ಸಾಧ್ಯ ಎಂಬುದನ್ನು ಕಾಯಕ ಸಿದ್ಧಾಂತದ ಮೂಲಕ ತೋರಿಸಿಕೊಟ್ಟರು. ಕಾಯ ಮತ್ತು ಕಾಯಕಗಳಲ್ಲಿ ಕೈಲಾಸ ಕಾಣುವ ಹಾಗೆ ಮಾಡಿದರು. ದಲಿತರು ಮತ್ತು ಮಹಿಳೆಯರು ಮೊದಲುಮಾಡಿ ಕಾಯಕಜೀವಿಗಳಿಗೆ ಇಷ್ಟಲಿಂಗ ದೀಕ್ಷೆ ಕೊಟ್ಟು ಲಿಂಗವಂತರನ್ನಾಗಿಸಿದರು. ಆ ಮೂಲಕ ಜಾತಿಗಳನ್ನು ನಿರ್ನಾಮ ಮಾಡಿ ಮೇಲು ಕೀಳಿನ ಭ್ರಮೆಯನ್ನು ಅಳಿಸಿಹಾಕಿದರು. ದೇವಾಲಯಗಳಿಂದ ಆಗುತ್ತಿದ್ದ ಶೋಷಣೆಯನ್ನು ತಪ್ಪಿಸಿದರು. (2015ನೇ ಆಗಸ್ಟ್ 11ರಂದು ದೈನಿಕ್‌ಭಾಸ್ಕರ್‌ಡಾಟ್‌ಕಾಮ್, ನಾಲ್ಕು ಪ್ರಮುಖ ಮಂದಿರಗಳಾದ ತಿರುಪತಿ ತಿರುಮಲ, ಕಾಶಿ ವಿಶ್ವನಾಥ, ಶಿರಡಿ ಸಾಯಿಬಾಬಾ ಮತ್ತು ಸಿದ್ಧಿವಿನಾಯಕ ಮಂದಿರಗಳ 9 ಸಾವಿರ ಪುಟಗಳಷ್ಟು ಬೃಹತ್ತಾದ ಲೆಕ್ಕಪರಿಶೋಧನಾ ವರದಿಗಳನ್ನು ಅಧ್ಯಯನ ಮಾಡುವ ಮೂಲಕ ದೇಶವೇ ಬೆಚ್ಚಿಬೀಳುವಂತ ಸತ್ಯವನ್ನು ಹೊರಹಾಕಿತು. ಈ ನಾಲ್ಕೂ ಮಂದಿರಗಳ ಒಟ್ಟು ಆಸ್ತಿ ಒಂದು ಲಕ್ಷ ಮೂವತ್ತೆರಡು ಸಾವಿರ ಕೋಟಿಗಳಷ್ಟಿದೆ. ಭಾರತದ ಯಾವ ಬಂಡವಾಳಶಾಹಿಯೂ ಇಷ್ಟೊಂದು ಆಸ್ತಿವಂತನಾಗಿಲ್ಲ! ಈ ಮಂದಿರಗಳಲ್ಲಿ ಪ್ರತಿದಿನ ಸರಾಸರಿ 5 ಲಕ್ಷ ಭಕ್ತರು 8 ಕೋಟಿ ರೂಪಾಯಿಗಳಷ್ಟು ಹಣವನ್ನು ದಾನ ರೂಪದಲ್ಲಿ ಕೊಡುತ್ತಾರೆ! ಇದರಲ್ಲಿ ಶೇಕಡಾ 40ರಷ್ಟು ಪಾಲು ಪೂಜಾರಿ ಮತ್ತು ಇತರ ಸಿಬಂದಿವರ್ಗದವರದ್ದಾಗಿದೆ! 'ದಯೆಯೆ ಧರ್ಮದ ಮೂಲ' ಎಂಬುದನ್ನು ಮರೆತ ಈ ಭಕ್ತರು, ಬಡವರಿಗೆ ಸಹಾಯ ಮಾಡುವ ಪ್ರಜ್ಞೆಯನ್ನು ಕಳೆದುಕೊಂಡು ಈ ಮಂದಿರಗಳಿಗೆ ತಂದು ಹಣವನ್ನು ಸುರಿಯುತ್ತಾರೆ. ಆ ಮೂಲಕ ಅರ್ಚಕರನ್ನು ಕೋಟ್ಯಧೀಶರನ್ನಾಗಿ ಮಾಡುತ್ತಾರೆ!) ಮಂದಿರಗಳಿಲ್ಲದ, ಮೂಲದಲ್ಲಿ ಯಾವುದೇ ಪುಣ್ಯಕ್ಷೇತ್ರಗಳಿಲ್ಲದ ಮತ್ತು ಭಕ್ತನಂಗಳವೇ ಪುಣ್ಯಕ್ಷೇತ್ರ ಎಂದು ಸಾರಿದ ಜಗತ್ತಿನ ಏಕೈಕ ಧರ್ಮವೆಂದರೆ ಲಿಂಗಾಯತ ಧರ್ಮ. ಬಸವಣ್ಣನವರು ಅನುಭವ ಮಂಟಪದ ಮೂಲಕ ಸಾಮಾಜಿಕ ಚಳವಳಿಯಾಗಿ ಈ ಧರ್ಮವನ್ನು ರೂಪಿಸಿದರು.

ಮಂದಿರಗಳು ಶೋಷಣೆಯ ಕೇಂದ್ರಗಳಾಗಿದ್ದನ್ನು ಮೊದಲಿಗೆ ಕಂಡುಹಿಡಿದವರೇ ಬಸವಣ್ಣನವರು. ಆದ್ದರಿಂದಲೇ ಅವರು ಮಠ ಮಂದಿರಗಳ ನಿರಾಕರಣೆ ಮಾಡಿದರು.

ಮೂರ್ತಿಪೂಜೆಯನ್ನು ಅಲ್ಲಗಳೆದರು. ಮಹಾನುಭಾವಿ ಬಸವಣ್ಣನವರು ಸಮಾಜ ವಿಜ್ಞಾನಿ, ಸಾಮಾಜಿಕ ಮನೋವಿಜ್ಞಾನಿ ಮತ್ತು ಆಡಳಿತ ತಜ್ಞರಾಗಿದ್ದಂತೆ ಅದ್ವಿತೀಯ ಅರ್ಥಶಾಸ್ತ್ರಜ್ಞರೂ ಆಗಿದ್ದರು. ಅಂತೆಯೆ ದೇಹವನ್ನೇ ದೇವಾಲಯವಾಗಿಸಿ, ನಮ್ಮೊಳಗೇ ದೇವರಿದ್ದಾನೆ ಎಂಬುದನ್ನು ನಮ್ಮ ಅರಿವಿಗೆ ತಂದು ಖರ್ಚಿಲ್ಲದ ಮತ್ತು ಮಧ್ಯವರ್ತಿಗಳೂ ಇಲ್ಲದ ಇಷ್ಟಲಿಂಗಯೋಗ ಎಂಬ ಪೂಜಾವಿಧಾನವನ್ನು ಹೇಳಿಕೊಟ್ಟರು. ಕಾಯಕಜೀವಿಗಳ ಅನುಭವಕ್ಕೆ ಮಹತ್ವ ಕೊಡುತ್ತ ಅನುಭಾವ ದರ್ಶನವನ್ನು ಸೃಷ್ಟಿಸಿದರು. ಅದುವೆ ಬಸವಾದ್ವೈತ ಎಂಬುದನ್ನು ನಾವು ಅರಿಯಬೇಕಿದೆ.

ಬಸವಾದಿ ಶರಣರು ವಚನಗಳ ಮೂಲಕ ಹೊಸಜಗತ್ತಿನ ಅರಿವು ಮೂಡಿಸಿದರು. ಆಶ್ಚರ್ಯವೆಂದರೆ ಅವರು ವೈದಿಕದ ಯಾವ ಸಾಹಿತ್ಯವನ್ನೂ ತಮ್ಮ ನಿರ್ಣಾಯಕ ಮಾತುಗಳಿಗೆ ಪೂರಕವಾಗಿ ಬಳಸಲಿಲ್ಲ. ವೇದ, ಆಗಮ, ಸ್ಮೃತಿ, ಭಗವದ್ಗೀತೆ, ರಾಮಾಯಣ, ಮಹಾಭಾರತ, ಭಾಗವತ, ಪುರಾಣ ಮುಂತಾದವುಗಳನ್ನು ಉದ್ಧರಿಸದೆ ಹೊಸ ನಡೆ ನುಡಿ ಸಿದ್ಧಾಂತದ ಮೇಲೆ ವಚನ ರಚನೆ ಮಾಡಿದ್ದು ಮಹತ್ವಪೂರ್ಣವಾಗಿದೆ. ಅಂತೆಯೆ 12ನೇ ಶತಮಾನದಲ್ಲಿ ಲಕ್ಷದ ಮೇಲೆ ತೊಂಬತ್ತಾರು ಸಾವಿರದಷ್ಟು ಜನ ಈ ಸಕಲಜೀವಾತ್ಮರ ಏಕತೆಯ ಬಸವಾದ್ವೈತಕ್ಕೆ ಮಾರುಹೋಗಿ ಜಾತಿವ್ಯವಸ್ಥೆಯನ್ನೇ ನಿರ್ನಾಮ ಮಾಡುತ್ತ ಶರಣಸಂಕುಲ ಸ್ಥಾಪಿಸಿದರು.

ಆದರೆ ಇಂದು ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮವು ಆರಾಧ್ಯ, ಜಂಗಮ, ಆದಿ ಬಣಜಿಗ, ಬಣಜಿಗ, ದೀಕ್ಷಾ, ಪಂಚಮಸಾಲಿ, ಸಾದರ, ನೊಳಂಬ, ಕುಡು ಒಕ್ಕಲಿಗ, ಕುರುಹಿನಶೆಟ್ಟಿ, ಶೀಲವಂತ, ಶಿವಸಿಂಪಿ, ಗಾಣಿಗ, ನೀಲಗಾರ, ನೇಕಾರ, ಗೌಡ ಲಿಂಗಾಯತ, ರಡ್ಡಿ ಲಿಂಗಾಯತ, ಮಾಳಿ, ಬಣಗಾರ ಮುಂತಾದ ಪಂಗಡಗಳನ್ನು ಹೊಂದಿದ್ದು ಆ ಮೂಲಕ ಇಡೀ ಲಿಂಗಾಯತ ಧರ್ಮವೇ ಹಿಂದೂ ಧರ್ಮದ ಒಂದು ಜಾತಿಯಾಗಿ ಮಾರ್ಪಟ್ಟಿದೆ. ಬಹುತೇಕ ಲಿಂಗಾಯತರು ತಾವು ಹಿಂದೂ ಲಿಂಗಾಯತರು ಎಂದೇ ಭಾವಿಸಿದ್ದಾರೆ. ಲಿಂಗಾಯತರಲ್ಲಿ ಜಾತಿವ್ಯವಸ್ಥೆ ನುಸುಳಿದ್ದರಿಂದ, ಅವರು ಹಿಂದೂ ಧರ್ಮದ ಬಹುಪಾಲು ಆಚರಣೆಗಳನ್ನು ಪಾಲಿಸುತ್ತಿರುವುದರಿಂದ ಹಾಗೂ ಲಿಂಗಾಯತ ಮತ್ತು ವೀರಶೈವದೊಂದಿಗೆ ಗುರು ವಿರಕ್ತರ ಮಠೀಯ ವ್ಯವಸ್ಥೆ ಚಾಲ್ತಿಯಲ್ಲಿರುವುದರಿಂದ ಸ್ವಾಭಾವಿಕವಾಗಿಯೆ ಕೇಂದ್ರ ಸರ್ಕಾರದ ತಜ್ಞರು ಲಿಂಗಾಯತ, ವೀರಶೈವ ಮತ್ತು ವೀರಶೈವ ಲಿಂಗಾಯತ ಎಂದು ಹೇಳಿಕೊಳ್ಳುವವರನ್ನು ಹಿಂದೂ ಧರ್ಮದ ಭಾಗವಾಗಿಸುತ್ತಾರೆ. ಜನಗಣತಿಯಲ್ಲಿ ಈ ಎಲ್ಲರೂ ಲಿಂಗಾಯತ ಎಂದು ಬರೆಸಿದಾಗ ಮಾತ್ರ ಇದು ಸ್ವತಂತ್ರ ಧರ್ಮ ಆಗಲು ಸಾಧ್ಯ. ವೀರಶೈವ ಪದ ಬಳಕೆ ಇವರನ್ನು ಹಿಂದೂಧರ್ಮದ ಭಾಗವಾಗಿಸುತ್ತದೆ.

ಲಿಂಗಾಯತ ಮತ್ತು ವೀರಶೈವ ಗೊಂದಲದಿಂದಾಗಿ, ಲಿಂಗಾಯತವು ಸ್ವತಂತ್ರ ಧರ್ಮವಾಗಿ ಅಲ್ಪಸಂಖ್ಯಾತ ಧರ್ಮಗಳ ಸಾಲಿನಲ್ಲಿ ಸೇರುವುದು ಇಲ್ಲಿಯವರೆಗೂ

ಕನಸಿನ ಮಾತಾಗಿದೆ. ಲಿಂಗಾಯತರಲ್ಲಿ ಬಹುಪಾಲು ಜನ ಬಡವರಾಗಿದ್ದಾರೆ. ಅವರಲ್ಲಿ ಹೆಚ್ಚಿನವರು ಕೃಷಿಯನ್ನು ಅವಲಂಬಿಸಿದ್ದಾರೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ರೈತಾಪಿ ಜನರು ಸದಾ ಶೋಷಣೆಗೆ ಒಳಗಾಗುತ್ತಲೇ ಇರುತ್ತಾರೆ. ಇಂದು ಅವರ ದುಸ್ಥಿತಿ ಆತ್ಮಹತ್ಯೆ ಮಾಡಿಕೊಳ್ಳುವಷ್ಟರ ಮಟ್ಟಿಗೆ ಉಲ್ಬಣಗೊಂಡಿದೆ. ಹೀಗೆ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಬಹುಪಾಲು ಜನರು ಲಿಂಗಾಯತರೇ ಆಗಿದ್ದಾರೆ.

'ಎನ್ನ ಹಾನಿ ವೃದ್ಧಿ ನಿಮ್ಮದಯ್ಯಾ, ಎನ್ನ ಮಾನ ಅಪಮಾನ ನಿಮ್ಮದಯ್ಯಾ' ಎಂದು ಬಸವಣ್ಣನವರು ಹೇಳಿದ್ದು ಈ ಅಮಾಯಕರಿಗೆ ತಲುಪಲೇ ಇಲ್ಲ. ಸಾಲ ಮಾಡಿ ಬಿತ್ತಿ ಬೆಳೆಯುತ್ತಾರೆ. ಆದರೆ ಪ್ರಕೃತಿ ವಿಕೋಪ ಮುಂತಾದ ಕಾರಣಗಳಿಂದಾಗಿ ಬೆಳೆ ನಾಶವಾದಾಗ, ಸಾಲ ತೀರಿಸಲಿಕ್ಕಾಗದೆ ಅಪಮಾನಕ್ಕೀಡಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇಂಥ ವಿಷಮ ಪರಿಸ್ಥಿತಿಯಲ್ಲಿ ಲಿಂಗಾಯತ ಧರ್ಮ ಸ್ವತಂತ್ರ ಧರ್ಮವಾದರೆ ಲಿಂಗಾಯತರು ಕಾನೂನುಬದ್ಧವಾಗಿ ಅಲ್ಪಸಂಖ್ಯಾತರಾಗುತ್ತಾರೆ.

ಇದರಿಂದ ಎರಡು ಲಾಭಗಳಿವೆ. ಮೊದಲನೆಯ ಲಾಭವೆಂದರೆ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಅಸ್ತಿತ್ವ ಬರುವುದರಿಂದ ವಿಶ್ವಗುರು ಬಸವಣ್ಣನವರು ಲಿಂಗಾಯತ ಧರ್ಮದ ಮೂಲಪುರಷರು, ಲಿಂಗಾಯತರು ಏಕದೇವೋಪಾಸಕರು, ಬಸವಾದಿ ಶರಣರ ವಚನಗಳೇ ಲಿಂಗಾಯತರ ಧರ್ಮಗ್ರಂಥ ಮತ್ತು 'ಅನುಭಾವ'ವೇ ಲಿಂಗಾಯತ ಧರ್ಮದ ದರ್ಶನ ಎಂಬುದು ಲೋಕದ ಗಮನಕ್ಕೆ ಬರುವುದು. ಆಗ 12ನೇ ಶತಮಾನದ ಬಸವಾದಿ ಶರಣರು ಅನುಭವಿಸಿದ ಹಿಂಸೆ, ಮಾಡಿದ ತ್ಯಾಗ ಮತ್ತು ಬಲಿದಾನಗಳು ಲೋಕದ ಪ್ರಜ್ಞಾವಂತರ ಗಮನ ಸೆಳೆಯುವವು.

ಎರಡನೆಯ ಲಾಭವೆಂದರೆ ಸರ್ಕಾರಗಳಿಂದ ಅಲ್ಪಸಂಖ್ಯಾತರಿಗೆ ಸಿಗಬೇಕಾದ ಸೌಲಭ್ಯಗಳು ಲಿಂಗಾಯತರಿಗೆ ನ್ಯಾಯಬದ್ಧವಾಗಿ ಸಿಗುವವು. ಇದರಿಂದ ವಿವಿಧ ರಾಜ್ಯಗಳಲ್ಲಿ ಹರಿದು ಹಂಚಿ ಹೋಗಿರುವ ಲಿಂಗಾಯತರು ಒಂದುಗೂಡುವ ಅವಕಾಶ ಕೂಡ ಲಭಿಸುವುದು.

ಬಸವಣ್ಣನವರು ಜಾತಿ ಇಲ್ಲದ ಧರ್ಮ ಸ್ಥಾಪನೆ ಮಾಡಿದ್ದರಿಂದ ಮೂಢನಂಬಿಕೆ ಮತ್ತು ಶೋಷಣೆಯನ್ನು ಮುಂದುವರಿಸುವ ಮಂದಿರ ಮತ್ತು ಮಠಗಳ ವ್ಯವಸ್ಥೆ ಕೊನೆಗೊಂಡಿತು. ಹಿಂದುಳಿದ ವರ್ಗದ ಹೆಣ್ಣುಮಕ್ಕಳು ದೇವಸ್ಥಾನಗಳಲ್ಲಿ ದೇವದಾಸಿಯರಾಗಿ ಶ್ರೀಮಂತರ ಮತ್ತು ಪುರೋಹಿತಶಾಹಿಗಳ ಲೈಂಗಿಕ ಶೋಷಣೆಗೆ ಒಳಗಾಗುವುದು ತಪ್ಪಿತು. ಬಡವರು ದೇವಸ್ಥಾನಗಳಲ್ಲಿ ಬಿಟ್ಟಿಕೂಲಿ ಮಾಡುವುದು ತಪ್ಪಿತು. ರೈತರು ದೇವಾಲಯಗಳಿಗೆ ಉಚಿತವಾಗಿ ಆಹಾರಧಾನ್ಯ ಒದಗಿಸುವುದು ಮತ್ತು ಗಾಣಿಗರು ಪ್ರತಿಫಲವಿಲ್ಲದೆ ಎಣ್ಣೆ ಕೊಡುವುದು ತಪ್ಪಿತು. ಇದೆಲ್ಲವನ್ನು ಮೊದಲೇ ಅರಿತಿದ್ದ ಬಸವಣ್ಣನವರು ದೇವಾಲಯಗಳ ನಿರಾಕರಣೆ ಮಾಡಿ ಶೋಷಣೆಗೆ ಒಳಗಾಗುವ ಜನರನ್ನು ವಿಮೋಚನೆಗೊಳಿಸಿದರು. ಪರ್ಯಾಯ ವ್ಯವಸ್ಥೆಯೊಂದಿಗೆ

ಸರ್ವಜಾತಿಗಳ ಕಾಯಕಜೀವಿಗಳನ್ನು ಒಗ್ಗೂಡಿಸಿ ದುಡಿಯುವ ವರ್ಗದ ನಿರ್ಮಾಣ ಮಾಡಿದರು. ಬಿಜ್ಜಳನ ಕಲ್ಯಾಣದೊಳಗೊಂದು ಶರಣಸಂಕುಲವೆಂಬ ನವಕಲ್ಯಾಣದ ಉದಯವಾಯಿತು.

ಜನರು ಸ್ಥಾವರಲಿಂಗದಿಂದ ಇಷ್ಟಲಿಂಗದೆಡೆಗೆ ಬಂದಾಗ, ಕಾಯಕವು ಕರ್ಮವನ್ನು ಹೊಡೆದೋಡಿಸಿತು. ಹೊಸ ಜೀವನವಿಧಾನವು ಜಾತಿಗಳನ್ನು ನಿರ್ನಾಮ ಮಾಡಿತು. ದಾಸೋಹವು ಆರ್ಥಿಕ ಸಮಾನತೆಯನ್ನು ಸಾಧಿಸಿತು. ಶರಣೆಂಬುದು ನಮ್ರತೆಯ ಪಾಠ ಕಲಿಸುವ ಮೂಲಕ ಮಾನವಘನತೆಯನ್ನು ಎತ್ತಿಹಿಡಿಯಿತು. ಅಸಮಾನತೆ ಮತ್ತು ಅಹಂಕಾರ ಅಳಿದು ಶರಣಸಂಕುಲದಲ್ಲಿ ಶಾಂತಿ ನೆಲೆಸಿತು.

ಶರಣಸಂಕುಲದ ನವಮಾನವರು ಐಹಿಕವಾಗಿ ಬಡತನವನ್ನು ಸ್ವೀಕರಿಸುತ್ತ ಸಾತ್ವಿಕವಾಗಿ ಶ್ರೀಮಂತರಾಗಿ ಬದುಕಿದರು. ಇಲ್ಲಿ ಬಡವರು ಬಡತನಕ್ಕೆ ಅಂಜಲಿಲ್ಲ. ಆದರೆ ಶ್ರೀಮಂತರು ಶ್ರೀಮಂತಿಕೆಗೆ ಹೇಸಿಕೊಂಡರು. ಪ್ರತಿಯೊಬ್ಬರು ತಮ್ಮಲ್ಲಿನ ಹೆಚ್ಚಿನದೆಲ್ಲವನ್ನೂ ಶರಣಸಂಕುಲದ ಸದಸ್ಯರೆಲ್ಲರ ಅವಶ್ಯಕತೆಯನ್ನು ಪೂರೈಸುವ ಶಿವನಿಧಿಗೆ ಅರ್ಪಿಸಿದರು. ಹೀಗಾಗಿ ಐಹಿಕ ಆಸೆಗಳನ್ನು ಮೀರಿದ ಸತ್ಯಶುದ್ಧ ಕಾಯಕದ ಬಡವರಿಂದ ಹಾಗೂ ಬಡತನವನ್ನು ಸ್ವೀಕರಿಸಿದವರಿಂದ ಕೂಡಿದ ಸರ್ವೋದಯದ ಸಮಾಜವೊಂದರ ನಿರ್ಮಾಣವಾಯಿತು. ಅನುಭವ ಮತ್ತು ಅನುಭಾವದ ಮೂಲಕ ಸೃಷ್ಟಿಯಾದ ಸಂಸ್ಕೃತಿ, ಸಂಸ್ಕಾರ, ವೈಚಾರಿಕತೆ ಮತ್ತು ಸಮಾನತೆ ಶರಣ ಸಮಾಜದ ಆಧಾರಸ್ತಂಭಗಳಾದವು. ಊರ ಮುಂದೆ ಹಾಲಹಳ್ಳ ಹರಿಯುವ ಹಾಗೆ ಈ ಶರಣಸಂಕುಲದ ಉದಯವಾಯಿತು. ಇಂಥ ಸುಭಿಕ್ಷೆಯ ಸಮಾಜವನ್ನು ಕಟ್ಟಿದ ಕೀರ್ತಿ ನಮ್ಮ ಶರಣರಿಗೆ ಸಲ್ಲುತ್ತದೆ.

ಪರ್ಯಾಯ ಧರ್ಮ:

ಆದರೆ ಈ ಸಮಾಜ ನಿರ್ಮಾಣದ ನೀಲನಕ್ಷೆಯ ರಚನೆ ಅಸಾಧಾರಣವಾದುದಾಗಿತ್ತು. ಸಕಲ ವೇದಶಾಸ್ತ್ರ ಪುರಾಣ ಪಾರಂಗತರಾದ ಬಸವಣ್ಣನವರು 'ಇವನಾರವ ಇವನಾರವ ಇವನಾರವ' ಎಂದು ಪ್ರಶ್ನಿಸುವ ವೈದಿಕ ಧರ್ಮಕ್ಕೆ ಪರ್ಯಾಯವಾದ 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂದು ಸಾರುವ ಲಿಂಗಾಯತ ಧರ್ಮದ ಸ್ಥಾಪನೆ ಮಾಡಿದರು. ಭಾರತದ ಚರಿತ್ರೆಯಲ್ಲೇ ಏಕದೇವೋಪಾಸನೆಯ ಮೊದಲ ಧರ್ಮ ಇದಾಗಿದೆ.

12ನೇ ಶತಮಾನದ ವರೆಗೂ ನಮ್ಮ ದೇಶದಲ್ಲಿ ಏಕದೇವೋಪಾಸನೆಯ ಧರ್ಮ ಸ್ಥಾಪನೆಯಾಗಿರಲಿಲ್ಲ. 33 ಕೋಟಿ ದೇವತೆಗಳುಳ್ಳ ವೈದಿಕ ಧರ್ಮ ಭಾರಿ ಪ್ರಚಾರದಲ್ಲಿತ್ತು. ಶಿವ, ಪಾರ್ವತಿ, ಗಣಪತಿ, ಷಣ್ಮುಖ, ವೀರಭದ್ರ ಮುಂತಾದ ದೇವ ದೇವತೆಗಳಿಂದ ಕೂಡಿದ ಶೈವಧರ್ಮ, ತೀರ್ಥಂಕರರ ಜೈನಧರ್ಮ ಮತ್ತು ಅಜ್ಞೇಯವಾದಿ

ಬೌದ್ಧಧರ್ಮಗಳು ದೇಶದ ಎಲ್ಲೆಡೆ ವ್ಯಾಪಿಸಿದ್ದವು. ಇಡೀ ದಕ್ಷಿಣ ಭಾರತದಲ್ಲಿ ಲಿಂಗಾಯತ ಧರ್ಮವೊಂದನ್ನು ಬಿಟ್ಟರೆ ಇಲ್ಲಿಯವರೆಗೂ ಇನ್ನಾವ ಧರ್ಮವೂ ಹುಟ್ಟಿಲ್ಲ ಎಂಬುದು ಕೂಡ ವಿಶೇಷವಾಗಿದೆ. ಹೀಗೆ ಲಿಂಗಾಯತ ಧರ್ಮವು ಏಕದೇವೋಪಾಸನೆಯ ವಿಚಾರದಲ್ಲಿ ಭಾರತದ ಮೊದಲ ಧರ್ಮವಾಗಿದ್ದು, ದಕ್ಷಿಣ ಭಾರತದಲ್ಲಿ ಹುಟ್ಟಿದ ಮೊದಲ ಧರ್ಮವಾಗಿದೆ.

ಧರ್ಮ ಮತ್ತು ಚಳವಳಿಯ ಭಾಷೆ:

ಲಿಂಗಾಯತ ಧರ್ಮದಿಂದಾಗಿ ಕನ್ನಡವು ಧರ್ಮದ ಭಾಷೆಯಾಗಿದೆ. ಜಗತ್ತಿನಲ್ಲಿ ಕೆಲವೇ ಧರ್ಮದ ಭಾಷೆಗಳಿವೆ. ಯಹೂದಿಗಳ 'ಹಳೆ ಒಡಂಬಡಿಕೆ' ಮತ್ತು ಕ್ರೈಸ್ತರ ಮೂಲ ಬೈಬಲ್ ಹಿಬ್ರೂ ಭಾಷೆಯಲ್ಲಿವೆ. ಪಾರ್ಸಿಗಳ 'ಜೆಂದಾ ಅವೆಸ್ತಾ' ಪಾರ್ಸಿ ಭಾಷೆಯಲ್ಲಿದೆ. ವೈದಿಕರ ಭಗವದ್ಗೀತೆ ಸಂಸ್ಕೃತ ಭಾಷೆಯಲ್ಲಿದೆ. ಮಹಾಪುರಾಣ ಪ್ರಾಕೃತದಲ್ಲಿರುವುದರಿಂದ ಜೈನರ ಧರ್ಮಭಾಷೆ ಪ್ರಾಕೃತವಾಗಿದೆ. ಬೌದ್ಧರ 'ಧಮ್ಮಪದ' ಪಾಲಿ ಭಾಷೆಯಲ್ಲಿದೆ. ಮುಸ್ಲಿಮರ ಧರ್ಮಗ್ರಂಥ ಕುರಾನ್ ಅರಬಿ ಭಾಷೆಯಲ್ಲಿದೆ. ಸಿಖ್ಖರ ಧರ್ಮಗ್ರಂಥವಾದ 'ಗುರುಗ್ರಂಥಸಾಹಿಬ್' ಗುರುಮುಖಿ ಭಾಷೆಯಲ್ಲಿದೆ. 12ನೇ ಶತಮಾನದ ವಚನಗಳೇ ಲಿಂಗಾಯತರ ಧರ್ಮಗ್ರಂಥವಾಗಿರುವುದರಿಂದ ಕನ್ನಡವು ವಿಶ್ವದ ಕೆಲವೇ ಧರ್ಮದ ಭಾಷೆಗಳಲ್ಲಿ ಒಂದಾಗಿ ಕಂಗೊಳಿಸುತ್ತಿದೆ.

ಶರಣರಿಂದಾಗಿ ಕನ್ನಡವು ಧರ್ಮದ, ಅನುಭಾವ ದರ್ಶನದ, ವಚನ ಚಳವಳಿಯ ಮತ್ತು ಸಮಾನತೆಯನ್ನು ಸಾರುವ ಭಾಷೆಯಾಯಿತು. ಸಂಸ್ಕೃತ ಭಾಷಾ ಸಾಮ್ರಾಜ್ಯವಾದಕ್ಕೆ ಕನ್ನಡ ಬಹುದೊಡ್ಡ ಸವಾಲಾಯಿತು. ಇಲ್ಲಿನ ಜೈನ ಕವಿಗಳು ಮತ್ತು ಲಾಕ್ಷಣಿಕರು ನೆಲದ ಭಾಷೆಯಾದ ಕನ್ನಡದಲ್ಲಿ ಬರೆಯುವ ಮೂಲಕ ಭಾಷಾ ಚಳವಳಿಯನ್ನು ಆರಂಭಿಸಿದರು. ಹೊಸತನವನ್ನು ಹೇಳಲು ಪ್ರಯತ್ನಿಸಿದರೂ ರಾಮಾಯಣ, ಮಹಾಭಾರತಗಳಿಂದ ಹೊರ ಬರಲಿಕ್ಕಾಗಲಿಲ್ಲ. ಆದರೆ ಶರಣರು ವಚನಚಳವಳಿಯ ಮೂಲಕ ಧಾರ್ಮಿಕ, ದಾರ್ಶನಿಕ, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ವೈಚಾರಿಕ, ಸಾಹಿತ್ಯಕ ಮತ್ತು ಭಾಷಿಕ ಕ್ಷೇತ್ರಗಳಲ್ಲಿ ಕ್ರಾಂತಿಯನ್ನೇ ಮಾಡಿದರು.

ಪುರಾತನ ವರ್ಣಭೇದ ನೀತಿ:

ಪ್ರತಿಯೊಂದು ಧರ್ಮ ಮಾನವನ ಉದ್ಧಾರಕ್ಕಾಗಿಯೇ ಹುಟ್ಟಿದೆ. ಆದರೆ ಸ್ವಾರ್ಥಿಗಳು ಶೋಷಣೆಯ ಉದ್ದೇಶದಿಂದ ಧರ್ಮವನ್ನು ತಮ್ಮ ಮೂಗಿನ ನೇರಕ್ಕೆ ಅರ್ಥೈಸುತ್ತ ಮನುಷ್ಯರಲ್ಲಿ ಭೇದಭಾವ ಸೃಷ್ಟಿಸುವುದನ್ನು ಬಸವಣ್ಣನವರು ಬಹಳ ಬೇಗನೆ ಅರ್ಥಮಾಡಿಕೊಂಡರು. ಮನುಷ್ಯನ ಸ್ವಾರ್ಥದಿಂದಾಗಿ ಲಿಂಗಭೇದ, ವರ್ಗಭೇದ, ವರ್ಣಭೇದ ಮತ್ತು ಜಾತಿಭೇದಗಳು ಹುಟ್ಟಿಕೊಂಡವು. ಈ ಭೇದಗಳಿಂದಾಗಿ ಶೋಷಕರ ಮತ್ತು ಶೋಷಣೆಗೆ ಒಳಗಾದವರ ವರ್ಗಗಳು ಜನ್ಮತಾಳಿದವು.

ಭಾರತದಲ್ಲಿ ಇವುಗಳನ್ನು ಮನುಸ್ಮೃತಿಯ ಮೂಲಕ ವ್ಯವಸ್ಥಿತವಾಗಿ ಗಟ್ಟಿಗೊಳಿಸಲಾಯಿತು. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರೆಂಬ ಸವರ್ಣೀಯ ವರ್ಣಗಳ ಜೊತೆಗೆ ಈ ವರ್ಣಗಳವರ ಸೇವೆಯಲ್ಲಿ ತೊಡಗುವ ಶೂದ್ರ ವರ್ಣವನ್ನೂ ಸೃಷ್ಟಿಸಲಾಯಿತು. ಈ ಶೂದ್ರ ವರ್ಣದವರು ಭಾರತದ ಮೂಲನಿವಾಸಿಗಳೆಂಬುದು ಗಮನಾರ್ಹವಾಗಿದೆ. ಮೇಲಿನ ಮೂರು ವರ್ಣಗಳ ಸವರ್ಣೀಯರಿಗೆ ಇರುವಂತೆ ಈ ಶೂದ್ರರಿಗೆ ಜನಿವಾರ ಇರುವುದಿಲ್ಲ. ಐಹಿಕ ವಸ್ತುಗಳನ್ನು ಉತ್ಪಾದಿಸದ ಸವರ್ಣೀಯರಿಗೆ ಜನಿವಾರವಿದೆ. ಆದರೆ ಉತ್ಪಾದನೆ ಮತ್ತು ಸೇವೆಯಲ್ಲಿ ತೊಡಗಿದ ಶೂದ್ರರಿಗೆ ಮತ್ತು ಪಂಚಮರಿಗೆ ಜನಿವಾರ ಇಲ್ಲ! ಇದನ್ನರಿತೇ ಬಸವಣ್ಣನವರು ಜನಿವಾರಕ್ಕೆ ನೇಣು ಎಂದು ಕರೆದಿದ್ದಾರೆ.

ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುತ್ತಿದ್ದ ಜನರಿಗೆ ಶಿಕ್ಷೆ ಕೊಡುವ ರೂಪದಲ್ಲಿ ಅಸ್ಪೃಶ್ಯರನ್ನಾಗಿಸಿ ಊರ ಹೊರಗೆ ಇರುವಂತೆ ಮಾಡಲಾಯಿತು. ಅದೇ ಒಂದು ಜನಾಂಗವಾದಾಗ ಅವರನ್ನು ಪಂಚಮರೆಂದು ಕರೆಯಲಾಯಿತು.

ಈ ಅತಿಶೂದ್ರರನ್ನು ಶೂದ್ರರಿಂದ ಬೇರ್ಪಡಿಸುವ ಮೂಲಕ ಮತ್ತು ಇವರೆಲ್ಲರಲ್ಲಿ ಜಾತಿ ವಿಜಾತಿಗಳನ್ನು ಸೃಷ್ಟಿಸುವ ಮೂಲಕ ಇವರ ಶಕ್ತಿಯನ್ನು ಕುಂದಿಸಲಾಯಿತು. ಇವರೆಲ್ಲ ದುಡಿಯುವುದಕ್ಕೆ ಮಾತ್ರ ಬದುಕುತ್ತಿರುವಂಥ ಮನುವಾದಿ ಸಮಾಜವನ್ನು ನಿರ್ಮಿಸಲಾಯಿತು. ಈ ಕಾಯಕಜೀವಿಗಳು ಓದು ಬರೆಹದಿಂದ ವಂಚಿತರಾದರು. ಅದರಲ್ಲೂ ಪಂಚಮರ ಬದುಕು ಹೇಳತೀರದಷ್ಟು ನೋವಿನಿಂದ ಕೂಡಿತ್ತು. ಅವರು ಚಿನ್ನಾಭರಣಗಳನ್ನು ತೊಡುವಂತಿಲ್ಲ, ಹೊಸ ಬಟ್ಟೆಗಳನ್ನು ಉಡುವಂತಿಲ್ಲ. ಅಷ್ಟೇ ಅಲ್ಲ ತಾಜಾ ಆಹಾರವನ್ನೂ ಸೇವಿಸುವಂತಿಲ್ಲ! ಅವರು ಮೃತ ಆಹಾರ (ತಂಗಳು) ಸೇವಿಸುವುದರಿಂದಲೇ ಅವರನ್ನು ಮಹಾರ್ ಎಂದೂ ಕರೆಯಲಾಯಿತು. ಮಹಾರ್ ಎಂದರೆ ಮೃತ ಆಹಾರ ಸೇವಿಸುವವನು.

ಶೂದ್ರರು ಮತ್ತು ಅತಿಶೂದ್ರರನ್ನು ಮನುವಾದಿಗಳು ಎಲ್ಲ ರೀತಿಯಿಂದಲೂ ಹದ್ದುಬಸ್ತಿನಲ್ಲಿಟ್ಟರು. ಅವರು ಎಂದೆಂದಿಗೂ ವಿದ್ಯಾವಂತರಾಗದಂತೆ ನೋಡಿಕೊಂಡರು. ಏಕೆಂದರೆ ವಿದ್ಯೆಯು ನ್ಯಾಯ ಅನ್ಯಾಯಗಳ ಪರಿಜ್ಞಾನವನ್ನು ಕೊಡುವಂಥದ್ದು. ಶಿಕ್ಷಣವು ತುಳಿತಕ್ಕೊಳಗಾದವರನ್ನು ಸಂಘಟಿಸಿದ ನಂತರ ಚಳವಳಿಯ ರೂಪ ತಾಳಿದಾಗ ಭೇದ ಸಂಸ್ಕೃತಿಯ ಸುಳ್ಳಿನ ಸಾಮ್ರಾಜ್ಯ ಕುಸಿಯುತ್ತದೆ ಎಂಬ ಸತ್ಯ ಮನುವಾದಿಗಳಿಗೆ ಗೊತ್ತಿತ್ತು. ಆದ್ದರಿಂದ ಸಾವಿರಾರು ವರ್ಷಗಳಿಂದ ಶೂದ್ರರು ಮತ್ತು ಪಂಚಮರನ್ನು ಅಕ್ಷರವಂಚಿತರನ್ನಾಗಿಸುತ್ತ ಈ ಸುಲಿಗೆಯ ವ್ಯವಸ್ಥೆಯನ್ನು ರಕ್ಷಿಸಿಕೊಂಡು ಬಂದರು. ವೈದಿಕರ ವರ್ಣಭೇದ ನೀತಿಯು ವಿಶ್ವದಲ್ಲೇ ಅತಿಪುರಾತನವಾದುದು.

ಲೋಕಾಯತರಿಂದ ಲಿಂಗಾಯತರ ತನಕ:

ಲೋಕಾಯತರಿಂದ 12ನೇ ಶತಮಾನದ ಲಿಂಗಾಯತರ ವರೆಗೆ ಭಾರತದಲ್ಲಿ ನಿರಂತರವಾಗಿ ವೈದಿಕ ವಿರೋಧಿ ಚಿಂತನೆಗಳು ನಡೆದಿವೆ. ಈ ಕ್ರೂರ ವ್ಯವಸ್ಥೆಯ ಮರ್ಮವನ್ನು ಮೊದಲಿಗೆ ಅರಿತವರೆಂದರೆ ಲೋಕಾಯತರು ಎಂದು ಕರೆಯಿಸಿಕೊಳ್ಳುವ ಚಾರ್ವಾಕರು. ಅವರು ಈ ಭೇದಸಂಸ್ಕೃತಿಯ ವಿರುದ್ಧ ಸೈದ್ಧಾಂತಿಕವಾಗಿ ಹೋರಾಡಿದರು. ಆದರೆ ಮನುವಾದಿ ವೈದಿಕರು ಒಟ್ಟಾಗಿ ಚಾರ್ವಾಕರನ್ನು ನಿರ್ನಾಮ ಮಾಡಿ ಅವರ ವೈಚಾರಿಕ ಸಾಹಿತ್ಯವನ್ನು ಸುಟ್ಟುಹಾಕಿದರು! ನಂತರ ಬಂದ ಜೈನರು ಕೂಡ ಭೇದಸಂಸ್ಕೃತಿಯನ್ನು ವಿರೋಧಿಸಿದರು. ಆದರೆ ಕಠಿಣ ವ್ರತಗಳಿಂದಾಗಿ ಅವರ ಜನಸಂಖ್ಯೆ ಕಡಿಮೆ ಇದ್ದುದರಿಂದ ಬಹಳ ಬೇಗನೆ ಅವರೆಲ್ಲ ಶಕ್ತಿಗುಂದಿದ ಕಾರಣ ವೈದಿಕರನ್ನು ಎದುರಿಸದೆ ಹೋದರು. ನಂತರ ಬಂದ ಗೌತಮಬುದ್ಧ ವೈದಿಕ ವ್ಯವಸ್ಥೆಯನ್ನು ಪ್ರಶ್ನಿಸುವಂಥ ಚಿಂತನೆ ಮಾಡಿದ. ಅದುವೇ 'ಬೌದ್ಧಧರ್ಮ' ಎಂದು ಪ್ರಸಿದ್ಧವಾಯಿತು. ಮನುವಾದಿಗಳು ಬೌದ್ಧರ ಮೇಲೆ ದಾಳಿ ನಡೆಸಿದರು. ಅವರ ಹತ್ಯೆ ಮಾಡಿ ಅವರ ಸಾಹಿತ್ಯವನ್ನೂ ಸುಟ್ಟರು. ಹೀಗಾಗಿ ಬೌದ್ಧಧರ್ಮ ಭಾರತ ದೇಶದ ಹೊರಗೆ ಹೋಗಿ ಬೆಳೆಯುವಂಥ ಪರಿಸ್ಥಿತಿ ಉಂಟಾಯಿತು.

ಇವರೆಲ್ಲರ ನಂತರ 12ನೇ ಶತಮಾನದಲ್ಲಿ ಮನುವಾದಿ ವೈದಿಕಶಕ್ತಿಗಳನ್ನು ನೇರವಾಗಿ ಎದುರಿಸಿದವರೆಂದರೆ ಬಸವಣ್ಣನವರು. ಅವರು ವಿವಿಧ ಜಾತಿ ಮತ್ತು ಉಪಜಾತಿಗಳಲ್ಲಿ ಚೆದರಿಹೋಗಿದ್ದ ದುಡಿಯುವ ವರ್ಗದ ಜನಸಮುದಾಯಗಳನ್ನು ಒಂದುಗೂಡಿಸಿದರು. ವೈದಿಕರು ವರ್ಣ ಮತ್ತು ಜಾತಿಗಳ ಗುಂಪುಗಳನ್ನು ಮಾಡಿದ್ದರು. ಆದರೆ ಬಸವಣ್ಣನವರು ಎಲ್ಲ ಗುಂಪುಗಳನ್ನು ಒಂದುಗೂಡಿಸಿ ಇಡೀ ಕಾಯಕಜೀವಿಗಳ ಸಮೂಹವನ್ನು ಸೃಷ್ಟಿಸಿದರು. ಬಸವಣ್ಣನವರಿಗಿಂತ ಮೊದಲು ದುಡಿಯುವ ವರ್ಗವನ್ನು ಹೀಗೆ ಒಂದುಗೂಡಿಸಿದ ದಾಖಲೆ ಜಗತ್ತಿನ ಯಾವುದೇ ದೇಶದಲ್ಲಿ ಕಾಣ ಸಿಗುವುದಿಲ್ಲ. ಮಹಾನುಭಾವಿ ಬಸವಣ್ಣನವರು ಸೋಪಜ್ಞ ಚಿಂತಕರಾಗಿದ್ದರು. ಹೀಗಾಗಿ ಅವರ ಚಿಂತನೆಗಳು ಬದುಕಿನ ಹೊಸ ಹೊಳವುಗಳಿಂದ ಕೂಡಿದ್ದಾಗಿವೆ. ಮಾನವಕುಲವನ್ನು ಒಂದುಗೂಡಿಸುವ ಕ್ರಮವನ್ನು ಅವರು ಅರಿವು ಮತ್ತು ಆಚರಣೆಯ ಮೂಲಕ ಜಗತ್ತಿಗೆ ತೋರಿಸಿಕೊಟ್ಟರು.

ಜಾತಿಗುಂಪುಗಳ ವರ್ಗಲಕ್ಷಣ:

ಮಾನವಕುಲವನ್ನು ಒಂದುಗೂಡಿಸುವ ಸಮಾಜವನ್ನು ನಿರ್ಮಿಸುವ ಮೊದಲು ಸಮಾಜದಲ್ಲಿ ಮೊದಲಿನಿಂದಲೂ ವಿವಿಧ ಕಾಯಕಗಳೊಂದಿಗೆ ಇರುವ ಜಾತಿಗುಂಪುಗಳ ವರ್ಗಲಕ್ಷಣಗಳನ್ನು ಗುರುತಿಸಬೇಕಾಗುತ್ತದೆ. ಆ ಮೂಲಕ ಉಳ್ಳವರ ಮತ್ತು ಬಡವರ ಸೈದ್ಧಾಂತಿಕ ಧ್ರುವೀಕರಣವಾಗಬೇಕಾಗುತ್ತದೆ. ಅದಕ್ಕಾಗಿ ಶೋಷಣೆಗೆ ಒಳಗಾದ

ಕಾಯಕಜೀವಿಗಳಿಗೆ ಅರಿವಿನ ಶಿಕ್ಷಣ ನೀಡುತ್ತ ಜಾತಿ ವಿಜಾತಿಗಳಲ್ಲಿ ಚೆದರಿಹೋದ ಅವರನ್ನು ದುಡಿಯುವ ವರ್ಗದ ಪರಿಧಿಯಲ್ಲಿ ತರಬೇಕಾಗುತ್ತದೆ. ತದನಂತರ ಶೋಷಣೆಯ ವಿರುದ್ಧ ಚಳವಳಿಗಳನ್ನು ರೂಪಿಸಬೇಕಾಗುತ್ತದೆ. ಬಸವಣ್ಣನವರು ಇಷ್ಟೆಲ್ಲ ಮಹತ್ವದ ಕಾರ್ಯಗಳನ್ನು 12ನೇ ಶತಮಾನದಲ್ಲೇ ಮಾಡುವ ಮೂಲಕ ದುಡಿಯುವ ವರ್ಗದ ಅದ್ವಿತೀಯ ಸಂಘಟಕರೆನಿಸಿದ್ದಾರೆ.

19ನೇ ಶತಮಾನದಲ್ಲಿ ಕಾರ್ಲ್ ಮಾರ್ಕ್ಸ್ ಜನಿಸುವ ವರೆಗೂ ಐರೋಪ್ಯ ರಾಷ್ಟ್ರಗಳಲ್ಲಿ ದುಡಿಯುವ ವರ್ಗದ ಸಂಘಟನೆಯಾಗಿರಲಿಲ್ಲವೆಂಬುದು ಗಮನಾರ್ಹವಾಗಿದೆ. ವರ್ಗರಹಿತ ಸಮಾಜದ ನಿರ್ಮಾಣವಾಗಬೇಕಾದರೆ ಮೊದಲಿಗೆ ವರ್ಗಗಳನ್ನು ಗುರುತಿಸಬೇಕಾಗುತ್ತದೆ. 'ಉಳ್ಳವರು ಶಿವಾಲಯವ ಮಾಡಿಹರು; ನಾನೇನು ಮಾಡಲಿ ಬಡವನಯ್ಯಾ' ಎಂದು ಹೇಳುವ ಮೂಲಕ ಬಸವಣ್ಣನವರು ಶೋಷಣೆ ಮಾಡುವ ಹಾಗೂ ಶೋಷಣೆಗೆ ಒಳಗಾಗುವ ವರ್ಗಗಳನ್ನು ಗುರುತಿಸಿದ್ದಾರೆ. ಬಸವಣ್ಣನವರ ಪರಿಕಲ್ಪನೆಯ ಭವಿ ಮತ್ತು ಭಕ್ತ ಶಬ್ದಗಳು ಕೂಡ ಆಳದಲ್ಲಿ ಎರಡು ವಿಭಿನ್ನ ವರ್ಗಲಕ್ಷಣಗಳನ್ನು ಗುರುತಿಸುವ ಶಬ್ದಗಳೇ ಆಗಿವೆ. ಭೌತಿಕ ಜಗತ್ತಿನಲ್ಲಿ 'ಇದು ನನ್ನದು' ಎನ್ನುವುದು ಭವಿಯ ಗುಣ. 'ಇದು ನಮ್ಮದು' ಎನ್ನುವುದು ಭಕ್ತನ ಗುಣ. ಹೀಗೆ ಬಸವಣ್ಣನವರು ವರ್ಗಗಳನ್ನು ಗುರುತಿಸುವ ಸಂದರ್ಭದಲ್ಲಿ ಐರೋಪ್ಯ ರಾಷ್ಟ್ರಗಳಲ್ಲಿ ವರ್ಗ ವಿಂಗಡಣೆಯ ಪರಿಕಲ್ಪನೆ ಮೂಡಿದ್ದಿಲ್ಲ. ಅಲ್ಲಿ 13ನೇ ಶತಮಾನದಲ್ಲಿ ಬಂಡವಾಳಶಾಹಿಯ ಲಕ್ಷಣಗಳುಳ್ಳ ಉತ್ಪಾದನಾ ವ್ಯವಸ್ಥೆ ಆರಂಭವಾದ ಸಂದರ್ಭದಲ್ಲಿ ವರ್ಗ ಪರಿಕಲ್ಪನೆ ಮೂಡತೊಡಗಿತು. 18ನೇ ಶತಮಾನದಲ್ಲಾದ ಔದ್ಯೋಗಿಕ ಕ್ರಾಂತಿಯ ನಂತರ ವರ್ಗ ವ್ಯವಸ್ಥೆ ಪ್ರಬಲಗೊಂಡಿತು. ಬಂಡವಾಳಶಾಹಿ ಮತ್ತು ಕಾರ್ಮಿಕ ವರ್ಗಗಳ ಸ್ಪಷ್ಟತೆ ಎದ್ದು ಕಾಣತೊಡಗಿತು. ಆದರೆ ಸರಂಜಾಮಿ ಯುಗದಲ್ಲೇ ಬಸವಣ್ಣನವರು ವರ್ಗ ಲಕ್ಷಣಗಳನ್ನು ಗುರುತಿಸಿದ್ದು ವಿಶೇಷವಾಗಿದೆ. 'ಇಲ್ಲಿಯವರೆಗಿನ ಸಮಾಜಗಳ ಇತಿಹಾಸವು ವರ್ಗ ಹೋರಾಟಗಳ ಇತಿಹಾಸವೇ ಆಗಿದೆ' ಎಂದು ಕಾರ್ಲ್ ಮಾರ್ಕ್ಸ್ ಹೇಳಿದ್ದು ಎಷ್ಟೊಂದು ಸತ್ಯವಾಗಿದೆ ಎಂಬುದಕ್ಕೆ ವಚನ ಚಳವಳಿ ಸಾಕ್ಷಿಯಾಗಿದೆ.

ಮಾನವ ಸ್ವಭಾವ ಅರಿತ ಬಸವಣ್ಣ:

ಮಾನವ ಸ್ವಭಾವವನ್ನು ಬಸವಣ್ಣನವರಷ್ಟು ಚೆನ್ನಾಗಿ ಅರಿತವರು ಜಗತ್ತಿನಲ್ಲಿ ಬಹಳ ವಿರಳ ಎಂದೇ ಹೇಳಬೇಕಾಗುತ್ತದೆ. ಮನುಷ್ಯ ಸಮಾಜಜೀವಿಯಾಗಿದ್ದಾನೆ ಎಂದು ಎಲ್ಲ ಸಮಾಜ ವಿಜ್ಞಾನಿಗಳು ಹೇಳುತ್ತಾರೆ. ಇದು ವಾಸ್ತವದ ಮಾತು. ಈ ಸಮಾಜ ಎಂಬುದು ಧರ್ಮ, ಕುಲ, ಜಾತಿ, ಉಪಜಾತಿ, ಜನಾಂಗ, ವರ್ಣ, ಗೋತ್ರ, ಪಂಥ, ವೃತ್ತಿ, ವರ್ಗ ಹೀಗೆ ವಿವಿಧ ರೀತಿಯಲ್ಲಿ ವಿಂಗಡಣೆಯಾಗುತ್ತಲೇ

ಹೋಗುತ್ತದೆ. ಹೀಗೆ ಮನುಷ್ಯನಿಗೆ ಆತ ಬಯಸುವ ಗುಂಪೇ ಸಮಾಜವಾಗುತ್ತದೆ. ಭಾರತದಂಥ ದೇಶಗಳಲ್ಲಿ ಆತ ಇಂಥ ಅನೇಕ ಗುಂಪುಗಳ ಜೊತೆ ಸಂಬಂಧವನ್ನು ಹೊಂದಿರುತ್ತಾನೆ. ಕೊನೆಗೆ ಜಾತಿ ಮತ್ತು ಉಪಜಾತಿಗಳೇ ವಂಶವಾಹಿನಿಯ ಗತಿಯನ್ನು ಗುರುತಿಸುತ್ತವೆ ಎಂದು ಆತ ನಂಬಿದ್ದರಿಂದ ಮತ್ತೇ ಅಲ್ಲಿಗೇ ಜಾರುತ್ತಾನೆ.

ಭಾರತದಲ್ಲಿ ವೈದಿಕ ವ್ಯವಸ್ಥೆ ಇಂಥ ಒಂದು ಮಾನಸಿಕ ಸ್ಥಿತಿಯನ್ನು ನಿರ್ಮಿಸಿದೆ. ಜೈನ, ಬೌದ್ಧ, ಕ್ರೈಸ್ತ, ಇಸ್ಲಾಂ, ಸಿಖ್ ಮುಂತಾದ ಧರ್ಮಗಳು ಕೂಡ ತಮ್ಮದೇ ಆದ ರೀತಿಯಲ್ಲಿ ವಿವಿಧ ರೀತಿಯಲ್ಲಿ ವಲಯಗಳನ್ನು ನಿರ್ಮಿಸಿಕೊಂಡಿವೆ. ವಿವಿಧ ಧರ್ಮಗಳ ಅನುಯಾಯಿಗಳು ಕೂಡ ತಮ್ಮದೇ ಆದ ಗುಂಪುಗಳನ್ನು ಜಾತಿ, ಉಪಜಾತಿ ಮತ್ತು ಪಂಥಗಳ ಮೂಲಕ ಸೃಷ್ಟಿಸಿಕೊಂಡಿದ್ದಾರೆ.

ಹೊಸ ಜೀವನವಿಧಾನ:

ಎಲ್ಲರೂ ದೇವರ ಮಕ್ಕಳು, ಎಲ್ಲ ಮಾನವರು ಸಹೋದರರು, ವಸುಧೈವ ಕುಟುಂಬಕಂ (ಇಡೀ ಜಗತ್ತೇ ಒಂದು ಕುಟುಂಬ) ಮುಂತಾದ ಆಶಯಗಳು ಮೊದಲಿನಿಂದಲೂ ಇವೆ. ಆದರೆ ಈ ಆಶಯಗಳೆಲ್ಲ ಕಾರ್ಯಗತಗೊಳ್ಳಲು ಮಾರ್ಗವೊಂದನ್ನು ರೂಪಿಸಬೇಕಾಗುತ್ತದೆ. ಇವರೆಲ್ಲರನ್ನು ಒಂದುಗೂಡಿಸುವ ಮಾರ್ಗವನ್ನು ತೋರಿಸಿಕೊಟ್ಟವರೇ ಬಸವಣ್ಣನವರು. ಆದ್ದರಿಂದ ಬಸವಣ್ಣನವರ ಲಿಂಗಾಯತ ಧರ್ಮವು ಒಂದು ಹೊಸ ಜೀವನವಿಧಾನವಾಗಿದೆ. ಈ ಜೀವನವಿಧಾನವನ್ನು ಅರ್ಥೈಸಿಕೊಂಡು ಬದುಕಿನಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಲಿಂಗಾಯತ ಸಮಾಜ ಜಗತ್ತಿಗೆ ಮಾರ್ಗದರ್ಶಿಯಾಗಬೇಕಿದೆ.

"ಕರುಣಿ ಬಸವಾ, ಕಾಲಹರ ಬಸವಾ, ಕರ್ಮಹರ ಬಸವಾ,
ನಿರ್ಮಳ ಬಸವಾ, ಶಿವಜ್ಞಾನಿ ಬಸವಾ,
ನಿಮ್ಮ ಧರ್ಮವಯ್ಯಾ ಈ ಭಕ್ತಿಯ ಪದವು.
ಕರುಣಿ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ
ನಿಮಗೂ ಎನಗೂ ಬಸವಣ್ಣನ ಧರ್ಮವಯ್ಯಾ"

ಸೊನ್ನಲಿಗೆಯ ಸಿದ್ಧರಾಮರ ಮಹತ್ವದ ವಚನವಿದು. ಈ ವಚನದ ಮೊದಲ ಮೂರು ಸಾಲುಗಳಲ್ಲಿ ಅವರು ಬಸವಣ್ಣನವರನ್ನು ಉದ್ದೇಶಿಸಿ ಹೇಳುತ್ತಾರೆ. ನಂತರದ ಎರಡು ಸಾಲುಗಳಲ್ಲಿ ದೇವರನ್ನು ಉದ್ದೇಶಿಸಿ ಹೇಳುತ್ತಾರೆ.

ಬಸವಣ್ಣನವರು ಕಾಲದ ಮಿತಿ ಮತ್ತು ಕರ್ಮಸಿದ್ಧಾಂತದ ತೊಡಕುಗಳನ್ನು ಬಿಡಿಸಿದರು. ಅವರ ಜೀವಕಾರುಣ್ಯದ ಚಿಂತನೆಯ ಮೂಲಕ ಈ ಭಕ್ತಿಮಾರ್ಗವು ರೂಪುಗೊಂಡಿದೆ. ಅಂತೆಯೆ ಜಾತಿ ಉಪಜಾತಿ ಮುಂತಾದ ಎಲ್ಲ ತೆರನಾದ

ಭೇದಭಾವಗಳನ್ನು ಅಳಿಸುವ ಭಕ್ತಿಮಾರ್ಗ, ಮಾನವಕುಲವನ್ನು ಒಂದುಮಾಡುವ ಮಾರ್ಗವಾಗಿದೆ. ಆದ್ದರಿಂದ ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಈ ಭಕ್ತಿಮಾರ್ಗವೇ ಬಸವಣ್ಣನವರ ಧರ್ಮವಾಗಿದೆ. ದೇವರು ಕರುಣಾಸಾಗರನಾಗಿರುವುದರಿಂದ ಬಸವಣ್ಣನವರ ಧರ್ಮವೇ ಸಿದ್ಧರಾಮೇಶ್ವರರ ಮತ್ತು ಅವರ ಕಪಿಲಸಿದ್ಧಮಲ್ಲಿಕಾರ್ಜುನನ ಧರ್ಮವಾಗುತ್ತದೆ. ನಿಜವಾದ ಅರ್ಥದಲ್ಲಿ ಲಿಂಗಾಯತವು ಮೂಲತಃ ಸಮತಾ ಜೀವನವಿಧಾನವಾಗಿದೆ.

ಬಸವಣ್ಣನವರ ಲಿಂಗಾಯತ ಧರ್ಮದಲ್ಲಿ ಜಾತಿ ಉಪಜಾತಿ ಮತ್ತು ಕುಲಗೋತ್ರಗಳಿಲ್ಲ. 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂದು ಹೇಳುವ ಭಕ್ತರ ಕುಲ ಒಂದಾದರೆ, 'ಇವನಾರವ, ಇವನಾರವ, ಇವನಾರವ' ಎಂದು ಕೇಳುವ ಭವಿಗಳ ಕುಲ ಒಂದಾತ್ತದೆ. 'ಇವ ನಮ್ಮವ' ಎಂದು ಹೇಳುವ ಭಕ್ತರಿಗೆ ಇಡೀ ಜಗತ್ತು ಒಂದಾಗಿ ಕಾಣಿಸುತ್ತದೆ. 'ಎಲ್ಲರೂ ನಮ್ಮವರೇ ಆಗಿದ್ದರಿಂದ ಈ ಜಗತ್ತಿನ ಚರಾಚರ ವಸ್ತುಗಳೆಲ್ಲ ಎಲ್ಲರಿಗೂ ಸೇರಿದ್ದು' ಎಂಬ ಭಾವವು ಭಕ್ತನ ಭಾವವಾಗಿದೆ. ಆದರೆ 'ಇವನಾರವ' ಎಂದು ಪ್ರಶ್ನಿಸುವ ಭವಿ ವಸ್ತುಮೋಹಿಯಾಗಿರುತ್ತಾನೆ. ಆದ್ದರಿಂದಲೇ ಆತ ಶೋಷಕನಾಗುತ್ತಾನೆ. ಶೋಷಣೆಗೆ ಧರ್ಮದ ರೂಪುರೇಷೆಗಳನ್ನು ಸೃಷ್ಟಿಸುತ್ತಾನೆ. 'ದಯೆಯೆ ಧರ್ಮದ ಮೂಲ' ಎಂಬುದನ್ನು ಅಲ್ಲಗಳೆದು 'ಭಯವೇ ಧರ್ಮದ ಮೂಲ' ಎಂಬುದಕ್ಕೆ ವ್ಯಾಪಕ ಪ್ರಚಾರ ನೀಡಿ, ಅಮಾಯಕರ ಶೋಷಣೆ ಮಾಡುವ ಕಲೆಯನ್ನು ಕರಗತ ಮಾಡಿಕೊಳ್ಳುತ್ತಾನೆ. ಅದಕ್ಕಾಗಿ ಪುಣ್ಯ, ಪಾಪ, ಸ್ವರ್ಗ, ನರಕ, ವರ್ಣ ಮತ್ತು ಪುನರ್ಜನ್ಮಗಳಿಂದ ಕೂಡಿದ ಕರ್ಮಸಿದ್ಧಾಂತವನ್ನು ಸೃಷ್ಟಿಸುತ್ತಾನೆ.

ಮಹಾಜನರು ಮತ್ತು ಬಹುಜನರು:

ಹಿಂದಿನ ಜನ್ಮದಲ್ಲಿ ಮಾಡಿದ ಪಾಪದ ಕಾರಣ ಪಾಪಿಗಳು ಶೂದ್ರರು ಮತ್ತು ದಲಿತರಾಗಿ ಜನ್ಮತಾಳಿದ್ದಾರೆ. ಈ ಜನ್ಮದಲ್ಲಿ ಪ್ರಾಮಾಣಿಕವಾಗಿ ಸವರ್ಣೀಯರ ಸೇವೆ ಮಾಡಿದರೆ ಮಾತ್ರ ಮುಂದಿನ ಜನ್ಮದಲ್ಲಿ ಪಾಪಮುಕ್ತರಾಗಿ ಜನಿಸುತ್ತಾರೆ ಎಂಬ ಭ್ರಮೆಯನ್ನು ಮನುವಾದಿಗಳು ಸೃಷ್ಟಿಸುತ್ತಾರೆ. ಹೀಗೆ ಅವರು ಉಳ್ಳವನಾಗುತ್ತಾರೆ. ನಂತರ ಇಂಥ ಉಳ್ಳವರ ಮತ್ತು ಬಡವರ ವರ್ಗಗಳಾಗುತ್ತವೆ. ಉಳ್ಳವರು ಕಡಿಮೆ ಸಂಖ್ಯೆಯಲ್ಲಿ ಇದ್ದರೆ ಬಡವರು ಬಹುಸಂಖ್ಯೆಯಲ್ಲಿದ್ದಾರೆ. ಶೋಷಕರಾದ ಉಳ್ಳವರು ಒಗ್ಗಟ್ಟಿನಿಂದ ವರ್ಗಹಿತವನ್ನು ಕಾಪಾಡುವಲ್ಲಿ ಸಹಸ್ರಾರು ವರ್ಷಗಳಿಂದ ಯಶಸ್ಸನ್ನು ಸಾಧಿಸುತ್ತಲೇ ಬಂದಿದ್ದಾರೆ. ಉಳ್ಳವರು 'ಮಹಾಜನರು' ಎಂದು ಕರೆಯಿಸಿಕೊಂಡರೆ, ಬಡವರು ಬಹುಜನರಾಗಿರುತ್ತಾರೆ. ಈ ಬಡಜನರು ಜಾತಿ ವಿಜಾತಿಗಳನ್ನು ಮೀರಿ ಕಾಯಕಜೀವಿಗಳ ವರ್ಗವಾಗಿ ರೂಪುಗೊಳ್ಳಬೇಕು ಆ ಮೂಲಕ ಶೋಷಣೆಯನ್ನು ತಡೆಗಟ್ಟಬೇಕು. ಶೋಷಣೆಯನ್ನು ತಡೆಗಟ್ಟಿದಾಗಲೇ ಭವಿಗಳು ಕೂಡ ಬೇರೆ ದಾರಿಯಿಲ್ಲದೆ

ಭಕ್ತರಾದಾಗ ವರ್ಗರಹಿತ ಸಮಾಜ ನಿರ್ಮಾಣವಾಗುವುದು. ಅಲ್ಲಿಯ ವರೆಗೆ ಭಕ್ತಿ ಎಂಬುದು ಅವರಿಗೆ ತೋರಿ ಉಂಬ ಲಾಭವಾಗಿರುತ್ತದೆ.

"ವೇದವೆಂಬುದು ಓದಿನ ಮಾತು; ಶಾಸ್ತ್ರವೆಂಬುದು ಸಂತೆಯ ಸುದ್ದಿ,
ಪುರಾಣವೆಂಬುದು ಪುಂಡರ ಗೋಷ್ಠಿ, ತರ್ಕವೆಂಬುದು ತಗರ ಹೋರಟೆ,
ಭಕ್ತಿ ಎಂಬುದು ತೋರಿ ಉಂಬ ಲಾಭ,
ಗುಹೇಶ್ವರನೆಂಬುದು ಮೀರಿದ ಘನವು."

ಅಲ್ಲಮಪ್ರಭುಗಳು ಹೇಳುವುದನ್ನು ಅರ್ಥ ಮಾಡಿಕೊಂಡಾಗ, ನಮ್ಮ ದೇಶದಲ್ಲಿ ಧಾರ್ಮಿಕ ಭಾವನೆಗಳು ಮತ್ತು ಸುಲಿಗೆ ಸಂಸ್ಕೃತಿ ಹೇಗೆ ಒಂದಕ್ಕೊಂದು ಪೂರಕವಾಗಿ ಬೆಳೆದವು ಎಂಬುದರ ಅರಿವು ನಮಗಾಗದೆ ಇರದು.

ಬಸವಳಿದವರ ಬಳಿಗೆ ಬಂದ ಬಸವ:

ಉನ್ನತ ಕುಲದಲ್ಲಿ ಹುಟ್ಟಿ, ಉನ್ನತ ವಿದ್ಯೆ ಪಡೆದು, ಉನ್ನತ ಹುದ್ದೆ ಹೊಂದಿದ್ದ ಉನ್ನತ ವರ್ಗದ ಬಸವಣ್ಣನವರು ವ್ಯವಸ್ಥೆಯ ಎಲ್ಲ ಸೌಕರ್ಯಗಳನ್ನು ತೊರೆದು ಬಸವಳಿದ ಜನರ ಬಳಿಗೆ ಬಂದು, ಇಂಥ ಶೋಷಣೆ ಇಲ್ಲದ ಭಕ್ತಿಮಾರ್ಗವನ್ನು ಸೃಷ್ಟಿಸಿದರು. ಅಂತೆಯೆ ಉಳ್ಳವರು, ಬಡವರು, ಭಕ್ತಿ, ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ದಾಸೋಹ ಮುಂತಾದ ಶಬ್ದಗಳು ಮತ್ತು ಪದಗಳು ವಚನ ಸಾಹಿತ್ಯದ ಪಾರಿಭಾಷಿಕ ಪದಗಳಾಗಿ ಬಸವಣ್ಣನವರ ಹೊಸಜಗತ್ತಿನ ತತ್ತ್ವಕ್ಕೆ ಪೂರಕವಾಗಿವೆ. ಈ ಶಬ್ದಗಳಿಗೆ ವೈದಿಕರು ಕೊಟ್ಟ ಅರ್ಥವನ್ನು ಹಚ್ಚಲಿಕ್ಕಾಗದು. ವಚನಕಾರರು ಬಳಸುವ ಅನೇಕ ಶಬ್ದಗಳು ವಿವಿಧ ವಚನಗಳಲ್ಲಿ ಆಯಾ ಸಂದರ್ಭಕ್ಕೆ ತಕ್ಕಂತೆ ವಿವಿಧ ತತ್ತ್ವಾರ್ಥಗಳನ್ನು ಕೊಡುವ ಸಾಮರ್ಥ್ಯವನ್ನು ಹೊಂದಿವೆ.

ಬಡತನ ನೋಡುವ ಕ್ರಮ:

ಬಸವಣ್ಣನವರು ಬಡತನವನ್ನು ನೋಡುವ ಕ್ರಮ ಕೂಡ ಬೇರೆಯಾಗಿದೆ. ವಸ್ತುಮೋಹಿಯಾಗದೆ ಅರಿವಿನ ಸಂಪತ್ತನ್ನು ಪಡೆದು ನೈಸರ್ಗಿಕ ಸಂಪನ್ಮೂಲಗಳು ದುರ್ಬಳಕೆಯಾಗದಂತೆ ಸರಳ ಸಹಜವಾಗಿ, ಪವಿತ್ರವಾಗಿ ಮತ್ತು ಸ್ವತಂತ್ರಧೀರರಾಗಿ ಬದುಕುವುದೇ ಬಸವಣ್ಣನವರು ಪ್ರತಿಪಾದಿಸುವ ಬಡವರ ವ್ಯಕ್ತಿತ್ವವಾಗಿದೆ. ಐಹಿಕ ಆಸೆಗಳಿಂದ ಮುಕ್ತರಾಗಿ ಸಂಪತ್ತಿನ ಸಂಗ್ರಹಕ್ಕೆ ಹೇಸಿ, ಬಡತನವನ್ನು ಪ್ರಜ್ಞಾಪೂರ್ಣವಾಗಿ ಸ್ವೀಕರಿಸುವವರೇ ಶರಣರು.

"ಮನೆ ನೋಡಾ ಬಡವರು ಮನ ನೋಡಾ ಘನ.
ಸೋಂಕಿನಲ್ಲಿ ಶುಚಿ ಸರ್ವಾಂಗ ಕಲಿಗಳು.

ಪಸರಕ್ಕನುವಿಲ; ಬಂದ ತತ್ಕಾಲಕ್ಕೆ ಉಂಟು.
ಕೂಡಲಸಂಗನ ಶರಣರು ಸ್ವತಂತ್ರ ಧೀರರು."

ಬಸವಣ್ಣನವರು ಅಭಿಮಾನದಿಂದ ಹೇಳುವಂತೆ ಶರಣರದು ಬಡವರ ಮನೆಯಾಗಿದ್ದರೂ ಅವರ ಮನದಲ್ಲಿ ಘನ (ದೈವೀಶಕ್ತಿ) ಇದೆ. ಕಾಯಕಜೀವಿಗಳಾದ ಅವರಲ್ಲಿ ಅಂದಂದಿಗೆ ಬೇಕಾಗುವಷ್ಟು ಮಾತ್ರ ಇರುತ್ತದೆ. ಶರಣಸಂಕುಲದಲ್ಲಿ ಸಂಗ್ರಹಕ್ಕೆ ಅವಕಾಶವಿಲ್ಲ. ಅವರು ಸೋಂಕಿನಲ್ಲಿ ಶುಚಿಯಾಗಿದ್ದಾರೆ. ಅಂದರೆ ಯಾವುದೇ ತೆರನಾದ ಅನೈತಿಕತೆಯಿಂದ ದೂರವಿದ್ದಾರೆ. ಅವರು ಸರ್ವಾಂಗ ಕಲಿಗಳಾಗಿದ್ದರಿಂದಲೇ ಇದು ಸಾಧ್ಯವಾಗಿದೆ. ಅವರು ಸರ್ವಾಂಗ ಕಲಿಗಳು ಏಕೆಂದರೆ ತಮ್ಮ ಎಲ್ಲ ಅಂಗಾಂಗಗಳ ಮೇಲೆ ಅವರು ಹಿಡಿತವನ್ನು ಸಾಧಿಸಿದ್ದಾರೆ. ಅವರ ಕಣ್ಣುಗಳು ಕೆಟ್ಟದ್ದನ್ನು ನೋಡುವುದಿಲ್ಲ. ಅವರ ಕಿವಿಗಳು ಕೆಟ್ಟದ್ದನ್ನು ಕೇಳುವುದಿಲ್ಲ. ಅವರ ಕೈಗಳು ಕೆಟ್ಟದ್ದನ್ನು ಮುಟ್ಟುವುದಿಲ್ಲ. ಅವರ ಕಾಲುಗಳು ಕೆಟ್ಟದ್ದರ ಕಡೆಗೆ ಹೋಗುವುದಿಲ್ಲ. ಏಕೆಂದರೆ ಅವರ ಮನಸ್ಸು ಕೆಟ್ಟದ್ದನ್ನು ಬಯಸುವುದಿಲ್ಲ. ಹೀಗೆ ಎಲ್ಲ ಅಂಗಾಂಗಳ ಮೇಲೆ ಹಿಡಿತವನ್ನು ಸಾಧಿಸಿದ್ದರಿಂದಲೇ ಅವರು ಸ್ವತಂತ್ರರು ಮತ್ತು ಧೀರರು ಆಗಿದ್ದಾರೆ.

ಬಸವಣ್ಣನವರು ಕಾಯಕಜೀವಿಗಳ ವ್ಯಕ್ತಿತ್ವವನ್ನು ರೂಪಿಸುತ್ತ ಅವರನ್ನು ಸಾತ್ವಿಕ ಶಕ್ತಿಯಾಗಿ ಮಾರ್ಪಡಿಸಿದರು. ತದನಂತರ ಅವರನ್ನು ಸಾಮಾಜಿಕ ಶಕ್ತಿಯಾಗಿಸಿ ಅನ್ಯಾಯದ ವಿರುದ್ಧದ ಚಳವಳಿಗೆ ಅಣಿಗೊಳಿಸಿದರು. ಈ ತೆರನಾಗಿ ಬಸವಣ್ಣನವರ ಕ್ರಾಂತಿಕಾರಿ ವಿಚಾರಗಳು ಹೊಸ ಸಮಾಜ ನಿರ್ಮಾಣಕ್ಕೆ ಬೇಕಾದ ಸಾಮೂಹಿಕ, ಸಾತ್ವಿಕ ಮತ್ತು ದೈಹಿಕ ಶಕ್ತಿಯನ್ನು ಕ್ರೋಢೀಕರಿಸುವಲ್ಲಿ ಸಫಲವಾದವು.

ಸದಾ ಅಪಮಾನ, ಅವಹೇಳನ ಮತ್ತು ಮೂಢನಂಬಿಕೆಯ ವಾತಾವರಣದಲ್ಲಿ ಬದುಕುತ್ತಿದ್ದ ಬಡವರು, ವೈದಿಕರು ಹೇಳಿದ್ದೇ ಸತ್ಯ ಎಂದು ಭಾವಿಸಿದ್ದರು. ಹೀಗಾಗಿ ಕಷ್ಟಕುಲಗಳಲ್ಲಿ ಜನಿಸಿದ ತಾವೆಲ್ಲ ಪಾಪಿಗಳೆಂದೇ ಭ್ರಮಿಸಿದ್ದರು. ಅಂಥ ಭ್ರಮೆಗಳಿಂದ ಜನಸಮುದಾಯವನ್ನು ಹೊರಗೆ ತಂದವರೇ ಬಸವಣ್ಣನವರು. ಅಂತೆಯೆ 'ಕಲ್ಯಾಣದಲ್ಲಿ ಬಸವಣ್ಣ ಇರುವಾಗ ಕಲ್ಲಿಗ್ಯಾಕ ಕೈಯ ಮುಗೀತಿ' ಎಂದು ನಿರಕ್ಷರಿ ಜನಪದ ಕವಿ ಹೇಳಲು ಸಾಧ್ಯವಾಯಿತು.

ಕರ್ಮಸಿದ್ಧಾಂತಕ್ಕೆ ತಿರಸ್ಕಾರ:

'ಪುಣ್ಯ ಪಾಪವೆಂಬ ಉಭಯ ಕರ್ಮವನಾರು ಬಲ್ಲರಯ್ಯಾ? ಇವನಾರುಂಬರು? ಕಾಯ ತಾನುಂಬಡೆ ಕಾಯ ತಾ ಮಣ್ಣು, ಜೀವ ತಾನುಂಬಡೆ ಜೀವ ತಾ ಬಯಲು' ಎಂದು ಬಸವಣ್ಣನವರು ಹೇಳಿದರು. ದೇಹ ಮಣ್ಣುಗೂಡಿ ಮನಸ್ಸು ಬಯಲಾಗುವುದ ರಿಂದ ಅವುಗಳಿಗೆ ಪುಣ್ಯ ಮತ್ತು ಪಾಪ ಹತ್ತಲಿಕ್ಕೆ ಸಾಧ್ಯವೇ ಇಲ ಎಂದು ಸಾರಿದರು.

ಜನ್ಮಜನ್ಮಾಂತರದಿಂದ ಉಳಿದುಕೊಂಡು ಬಂದ ಸಂಚಿತ ಕರ್ಮ, ಹಿಂದಿನ ಜನ್ಮದಿಂದ ಬಂದ ಪ್ರಾರಬ್ಧ ಕರ್ಮ ಮತ್ತು ಈ ಜನ್ಮದಲ್ಲಿ ಮಾಡಿದ ಕರ್ಮದಿಂದಾಗಿ ಮುಂದಿನ ಜನ್ಮದಲ್ಲಿ ಅನುಭವಿಸಲೇ ಬೇಕಾದ ಆಗಾಮಿ ಕರ್ಮಗಳು ಮತ್ತು ಜನ್ಮಜನ್ಮಾಂತರಗಳು ವೈದಿಕರ ಸುಳ್ಳುಸೃಷ್ಟಿಗಳು ಎಂಬುದು ಕಾಯಕಜೀವಿಗಳಿಗೆ ಮನವರಿಕೆಯಾಯಿತು.

ಬಸವಧರ್ಮದಲ್ಲಿ ಆಚಾರವೆ ಸ್ವರ್ಗ; ಅನಾಚಾರವೆ ನರಕ. ಹೀಗಾಗಿ ಇಲ್ಲಿ ವೈದಿಕರ ಸ್ವರ್ಗ, ನರಕಗಳು ಕೂಡ ಇಲ್ಲ. "ಭಕ್ತಿಯ ಪಿತ್ತ ನೆತ್ತಿಗೇರಿ ಕೈಲಾಸದ ಬಟ್ಟೆಯ ಹತ್ತುವ ವ್ಯರ್ಥರ ಕಂಡು ಎನ್ನ ಮನ ನಾಚಿತ್ತು, ನಾಚಿತ್ತು. ಕೈಲಾಸವೆಂಬುದೇನೋ ಪೃಥ್ವಿಯ ಮೇಲೊಂದು ಮೊರಡಿ." ಎಂದು ಬಸವಣ್ಣನವರು ಕೈಲಾಸವನ್ನು ಅಲ್ಲಗಳೆದು ಈ ಭೂಮಿಯ ಬಗ್ಗೆ ಅನನ್ಯ ಪ್ರೀತಿಯನ್ನು ವ್ಯಕ್ತಪಡಿಸಿದ್ದಾರೆ. ಭಕ್ತಿ ಎಂಬುದು ಸ್ವರ್ಗಪ್ರಾಪ್ತಿಗಾಗಿ ಇರುವಂಥದ್ದಲ್ಲ ಈ ನೆಲದ ಬದುಕನ್ನು ಸುಂದರಗೊಳಿಸುವುದಕ್ಕಾಗಿ ಇರುವಂಥದ್ದು. ಈ ಮರ್ತ್ಯಲೋಕವೇ ಕರ್ತಾರನ ಕಮ್ಮಟ ಎಂದು ಅವರು ಸಾರಿದ್ದಾರೆ.

ಎಲ್ಲ ಧರ್ಮಗಳಲ್ಲಿ ಮನುಷ್ಯರು ಸತ್ತಮೇಲೆ ದೇವರ ಕಡೆಗೆ ಹೋಗುತ್ತಾರೆ. ಆದರೆ ಬಸವಧರ್ಮದಲ್ಲಿ ದೇವರೇ ಮನುಷ್ಯರ ಕಡೆಗೆ ಬರುತ್ತಾನೆ. ಏಕೆಂದರೆ ಈ ಭೂಮಿಯೇ ಆತನ ಕಮ್ಮಟ (ಟಂಕಸಾಲೆ) ಆಗಿದೆ. ಈ ಜಗತ್ತನ್ನು ಶಾಂತಿ ಮತ್ತು ಸಮಾನತೆಯ ಮಹಾಮನೆಯಾಗಿಸುವ ನಿರಹಂಕಾರಿಗಳು ಮಾತ್ರ ಆತನ ಪ್ರೀತಿಗೆ ಪಾತ್ರರಾಗುತ್ತಾರೆ.

ಇನ್ನೂ ವೈಶಿಷ್ಟ್ಯವೆಂದರೆ ಎಲ್ಲ ಧರ್ಮಗಳಲ್ಲಿ ದೇವರು ಮನುಷ್ಯರಿಗೆ ಹೇಳುತ್ತಾನೆ. ಆದರೆ ಈ ಧರ್ಮದಲ್ಲಿ ಶರಣರು ದೇವರಿಗೆ ತಮ್ಮ ಬದುಕಿನ ಪರಿಯ ಬಗ್ಗೆ ವಚನಗಳ ಮೂಲಕ ವರದಿ ಒಪ್ಪಿಸುತ್ತಾರೆ! ಆದ್ದರಿಂದಲೇ ಲಿಂಗಾಯತ ಧರ್ಮವು ಅರಿವನ್ನು ಈ ಲೋಕದಲ್ಲಿ ಆಚರಣೆಗೆ ತರುವ ಧರ್ಮವಾಗಿದೆ.

ಕಾಯಕಜೀವಿಗಳು 'ಆಚಾರವೇ ಸ್ವರ್ಗ, ಅನಾಚಾರವೇ ನರಕ' ಎಂಬುದನ್ನು ಬಹುಬೇಗ ಅರಿತುಕೊಂಡರು. ಸತ್ಯಶುದ್ಧ ಕಾಯಕದಿಂದ ಕೂಡಿದ ಜೀವನವಿಧಾನವನ್ನು ಒಂದು ಮೌಲ್ಯವಾಗಿ ಸ್ವೀಕರಿಸಿದರು. ಕಾಯಕದ ಮೂಲಕ ಘನತೆವೆತ್ತ ವ್ಯಕ್ತಿತ್ವ ರೂಪುಗೊಳ್ಳುವುದು ಎಂಬುದು ಅವರಿಗೆ ಮನವರಿಕೆಯಾಯಿತು. ಯಾರಿಗೂ ಬೇಡದೆ ಮತ್ತು ಬಡತನಕ್ಕೆ ಅಂಜದೆ ಅವರು ಕಾಯಕ ಮಾಡುತ್ತ ಸ್ವತಂತ್ರಧೀರರಾಗಿ ಬದುಕಿದರು ಮತ್ತು ಅಸಹಾಯಕರಿಗೆ ದಾಸೋಹ ಭಾವದಿಂದ ಸಹಾಯಹಸ್ತ ಚಾಚಿದರು. ಕಾಯಕಜೀವಿಗಳ ಆತ್ಮಗೌರವ ಮತ್ತು ಸಮೂಹ ಪ್ರಜ್ಞೆಯಿಂದಾಗಿ ಇಂಥ ಅನುಪಮವಾದ ಸಾಮಾಜಿಕ ವ್ಯವಸ್ಥೆಯ ಸೃಷ್ಟಿಯಾಯಿತು. 'ಕಲ್ಯಾಣದಲ್ಲಿ

ಕೊಡುವವರುಂಟು ಬೇಡುವವರಿಲ್ಲ' ಎಂದು ಬಸವಣ್ಣನವರು ಹೇಳಿದ್ದು, 12ನೇ ಶತಮಾನದಲ್ಲಿ ಶರಣರೆಂಬ ನವಮಾನವರ ಸಮಾಜ ರೂಪುಗೊಂಡಿದ್ದಕ್ಕೆ ಸಾಕ್ಷಿಯಾಗಿದೆ.

ರಾಜ್ಯಶಕ್ತಿ ಮತ್ತು ಜನಶಕ್ತಿ:

ಎಲ್ಲವನ್ನೂ ಈ ಭೂಮಿಯಲ್ಲೇ ಸಾಧಿಸಿತೋರಿಸಬೇಕೆಂಬುದು ಬಸವಣ್ಣನವರ ಛಲವಾಗಿತ್ತು. ಅಂತೆಯೆ ಅವರು ಕೈಲಾಸದ ಭ್ರಮೆಯನ್ನು ಕಳೆದು ನೆಲಸಂಸ್ಕೃತಿಯ ಹರಿಕಾರರೆನಿಸಿದರು. ಕಾಯಕಜೀವಿಗಳು ತಮ್ಮ ಶ್ರಮದ ಮೂಲಕ ಸಮೃದ್ಧವಾದ ಸಮಾಜವನ್ನು ಸೃಷ್ಟಿಸಿದರು. ಬಸವಣ್ಣನವರು ನವಸಮಾಜ ನಿರ್ಮಾಣಕ್ಕಾಗಿ ಬಿಜ್ಜಳನ ಭಂಡಾರದ ಮೇಲೆ ಅವಲಂಬಿತರಾಗಲಿಲ್ಲ. ದುಡಿಯುವ ಜನರ ಶಕ್ತಿಯ ಮೇಲೆ ಅವರಿಗೆ ಅಚಲವಾದ ವಿಶ್ವಾಸವಿತ್ತು. ರಾಜ್ಯಶಕ್ತಿಗಿಂತ ಜನಶಕ್ತಿ ಮಿಗಿಲು ಎಂಬುದನ್ನು ವಿಶ್ವದಲ್ಲೇ ಮೊದಲಬಾರಿಗೆ ಕಂಡುಹಿಡಿವರೇ ಬಸವಣ್ಣನವರು. ಶರಣಸಂಕುಲದಲ್ಲಿ ಈ ಪರಿಕಲ್ಪನೆಯನ್ನು ಪ್ರಯೋಗಕ್ಕೆ ಒಡ್ಡಿ ಯಶಸ್ವಿಯಾದರು. ಅಂತೆಯೆ ಅವರಿಗೆ

"ಊರ ಮುಂದೆ ಹಾಲ ಹಳ್ಳ ಹರಿಯುತ್ತಿರಲು
ಒರೆಯಾವಿನ ಬೆನ್ನ ಹರಿಯಲದೇಕಯ್ಯಾ.
ಲಜ್ಜೆಗೆಡಲೇಕೆ ನಾಣುಗೆಡಲೇಕೆ
ಕೂಡಲಸಂಗಮದೇವನುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ."

ವಿವಿಧ ಧರ್ಮಗಳ ಪರಿಕಲ್ಪನೆಯಲ್ಲಿ ಹಾಲುಹಳ್ಳಗಳು ಸ್ವರ್ಗದಲ್ಲಿ ಹರಿಯುತ್ತವೆ. ಆದರೆ ಬಸವಣ್ಣನವರ ವಚನದಲ್ಲಿ ಊರ ಮುಂದೆ ಹಾಲುಹಳ್ಳ ಹರಿಯುತ್ತದೆ! ಕಾಯಕಜೀವಿಗಳ ಬದುಕು ಸಮೃದ್ಧವಾಗಿತ್ತು ಎಂಬುದಕ್ಕೆ ಬಸವಣ್ಣನವರ ಈ ಮಾತೇ ಸಾಕ್ಷಿಯಾಗಿದೆ.

ರಾಜ್ಯಶಕ್ತಿ ಎಂಬುದು ಹಿಂಸೆಯ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ಜನಶಕ್ತಿಯು ಶಾಂತಿ, ಸೌಹಾರ್ದ, ಸಮೃದ್ಧಿ ಮತ್ತು ನೆಮ್ಮದಿಯನ್ನು ಬಯಸುತ್ತಿರುತ್ತದೆ. ಕಾಯಕ, ಪ್ರಸಾದ ಮತ್ತು ದಾಸೋಹದ ಮೂಲಕ ಮಾತ್ರ ನಿಜವಾದ ಜನಶಕ್ತಿ ರೂಪುಗೊಳ್ಳುವುದು ಎಂಬ ಪರಮಸತ್ಯವನ್ನು ಬಸವಣ್ಣನವರು 12ನೇ ಶತಮಾನದಲ್ಲೇ ಕಂಡುಹಿಡಿದರು.

ಕಾಯಕವು ನಮ್ಮ ಮನದಲ್ಲಿ ಆತ್ಮಗೌರವ ಮೂಡಿಸುವುದರ ಮೂಲಕ ಭಿಕ್ಷುಕರ ಸೃಷ್ಟಿಯಾಗದಂತೆ ನೋಡಿಕೊಳ್ಳುತ್ತದೆ. ಪರಾವಲಂಬಿ ಜೀವನದಿಂದ ಮುಕ್ತಗೊಳಿಸುತ್ತದೆ. ಎಲ್ಲವನ್ನೂ ಅವರು ಕಾಯಕದ ಮೂಲಕವೇ ಪಡೆಯುವುದರಿಂದ ವಸ್ತುಗಳ ಮಹತ್ವ ಅವರಿಗೆ ಚೆನ್ನಾಗಿ ತಿಳಿದಿರುತ್ತದೆ. ಆದ್ದರಿಂದಲೇ ಅವರು ಪ್ರತಿಯೊಂದು ವಸ್ತುವನ್ನು ಪ್ರಸಾದದಂತೆ ಉಪಯೋಗಿಸುತ್ತಿರುತ್ತಾರೆ. ಕಾಯಕಜೀವಿಗಳು ಪರಹಿತ ಬಯಸುವುದು

ಮತ್ತು ಪರರ ನೋವಿಗೆ ಕ್ರಿಯಾತ್ಮಕವಾಗಿ ಸ್ಪಂದಿಸುವುದು ಸಹಜವಾಗಿದೆ. ಇದುವೇ ದಾಸೋಹ ಭಾವ. ಹೀಗೆ ದುಡಿಯುವ ವರ್ಗದಲ್ಲಿ ಸಹಜವಾಗಿರುವ ಕಾಯಕ, ಪ್ರಸಾದ ಮತ್ತು ದಾಸೋಹ ಪ್ರಜ್ಞೆ ಲಿಂಗಾಯತ ಧರ್ಮದ ಮೂರು ಆಧಾರ ಸ್ತಂಭಗಳಾಗಿವೆ. ಕಾಯಕ ಪ್ರಜ್ಞೆಯು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿತು. ಪ್ರಸಾದ ಪ್ರಜ್ಞೆಯು ವಸ್ತುಗಳನ್ನು ಹಿತಮಿತವಾಗಿ ಬಳಸಿಕೊಳ್ಳುವುದನ್ನು ಕಲಿಸಿತು. ದಾಸೋಹ ಪ್ರಜ್ಞೆಯು ಉತ್ಪಾದಿತ ವಸ್ತುಗಳ ಯೋಗ್ಯ ವಿರತಣೆಯಾಗುವಂತೆ ನೋಡಿ ಕೊಂಡಿತು. ಆದ್ದರಿಂದ ಈ ಮೂರೂ ಪದಗಳು ಏಕಕಾಲಕ್ಕೇ ಶರಣ(ಲಿಂಗಾಯತ) ಧರ್ಮದ ಜೀವನವಿಧಾನವಾಗಿ, ಸದೃಢ ಅರ್ಥವ್ಯವಸ್ಥೆಗೆ ಮತ್ತು ಸಮತಾ ಸಮಾಜ ನಿರ್ಮಾಣಕ್ಕೆ ಕಾರಣವಾದವು.

"ಕಾಯಕದಲ್ಲಿ ನಿರತನಾದಡೆ

ಗುರುದರ್ಶನವಾದಡೂ ಮರೆಯಬೇಕು.

ಲಿಂಗಪೂಜೆಯಾದಡೂ ಮರೆಯಬೇಕು.

ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು.

ಕಾಯಕವೇ ಕೈಲಾಸವಾದ ಕಾರಣ

ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು."

ಕಾಯಕವು ಗುರು ಲಿಂಗ ಮತ್ತು ಜಂಗಮಕ್ಕಿಂತಲೂ ಮಿಗಿಲಾದುದು ಎಂದು ಆಯ್ದಕ್ಕಿ ಮಾರಯ್ಯನವರು ತಿಳಿಸಿದ್ದಾರೆ. ಕಾಯಕವಿಲ್ಲದೆ ತ್ರಿವಿಧ ದಾಸೋಹ ನಡೆಯುವುದಿಲ್ಲ ಎಂಬ ಕಾರಣಕ್ಕಾಗಿ ಅವರು ಹೀಗೆ ಹೇಳುವ ಮೂಲಕ ಕಾಯಕದ ಮಹತ್ವವನ್ನು ಸಾರಿದ್ದಾರೆ. ಕಾಯಕವು ಮಾನವಕುಲಕ್ಕೆ ಮತ್ತು ಪ್ರಕೃತಿಗೆ ಪೂರಕವಾದ ಉತ್ಪದನಾ ವ್ಯವಸ್ಥೆಯಾಗಿದೆ.

ಕಾಯಕದ ಮೇಲೆ ಮೂರು ತೆರನಾದ ಜವಾಬ್ದಾರಿಗಳಿವೆ. ಇವುಗಳನ್ನು ತ್ರಿವಿಧ ದಾಸೋಹ ಎಂದು ಕರೆಯಲಾಗುತ್ತದೆ. ಅರಿವೆಂಬ ಗುರುವಿಗೆ, ತತ್ತ್ವ ಎಂಬ ಲಿಂಗಕ್ಕೆ ಮತ್ತು ಸಮಾಜ ಎಂಬ ಜಂಗಮಕ್ಕೆ ದಾಸೋಹದ ಮೂಲಕ ಸೇವೆ ಸಲ್ಲಿಸುವ ಉದ್ದೇಶದಿಂದಲೇ ಕಾಯಕವನ್ನು ಮಾಡಬೇಕು. ಸ್ವಾವಲಂಬಿಯಾಗಿ ಕಾಯಕ ಮಾಡದೆ ಈ ಉದ್ದೇಶವನ್ನು ಈಡೇರಿಸಲಿಕ್ಕಾಗದು. ಹೀಗೆ ಕಾಯಕ ಮಾಡುವಾಗ ಯಾವ ಮೂರನ್ನು ಮರೆಯಬೇಕೆಂದು ಆಯ್ದಕ್ಕಿ ಮಾರಯ್ಯನವರು ಹೇಳಿದರೋ ಆ ಮೂರಕ್ಕಾಗಿಯೆ ಕಾಯಕ ಮಾಡಬೇಕೆಂದು ದೃಢನಿರ್ಧಾರವನ್ನು ಹೊಂದಿದವರಾಗಿದ್ದಾರೆ. ಆದ್ದರಿಂದ ಕಾಯಕ ಎಂಬುದು ಗುರು ಲಿಂಗ ಜಂಗಮದ ಸೇವೆ ಮಾಡುವುದಕ್ಕೆ ಅನುಕೂಲವಾಗುವುದರೊಂದಿಗೆ ಸ್ವಾವಲಂಬನೆಯ ಮೂಲಕ ಆತ್ಮಗೌರವವನ್ನು

ಕಾಪಾಡುತ್ತದೆ ಕುಟುಂಬ ರಕ್ಷಣೆಯ ಕಾಳಜಿ ಮೂಡಿಸುತ್ತದೆ. ಮೌಲ್ಯಭರಿತ ಸಮಾಜದ ಸೇವೆಗೆ ಅನುವು ಮಾಡಿಕೊಡುತ್ತದೆ.

ಬಸವಣ್ಣನವರ ಜೀವಜಾಲದ ಪರಿಕಲ್ಪನೆ:

ಜಂಗಮ ಪದದ ಅರ್ಥವಿಸ್ತಾರ ಸಕಲ ಚರಾಚರಗಳನ್ನು ಒಳಗೊಳ್ಳುವುದರಿಂದ ಕಾಯಕವು ಸಕಲ ಜೀವಾತ್ಮರಿಗೆ ಲೇಸನೆ ಬಯಸುವಂಥ ಮನಸ್ಥಿತಿಯನ್ನು ಉಂಟುಮಾಡುತ್ತದೆ. 'ಜೀವಜಾಲದಲ್ಲಿದೆ ಚರಾಚರವೆಲ್ಲ' ಎಂದು ಬಸವಣ್ಣನವರು ಹೇಳಿದ್ದಾರೆ. ಜೀವಜಾಲವನ್ನು ರಕ್ಷಿಸುವುದು ನಮ್ಮೆಲ್ಲರ ನೈತಿಕ ಜವಾಬ್ದಾರಿಯಾಗಿದೆ. ಭೂ, ಜಲ, ವಾಯು ಮಲಿನವಾಗದಂತೆ ನೋಡಿಕೊಳ್ಳಬೇಕಿದೆ. ಅರಣ್ಯವನ್ನು ಸಂರಕ್ಷಿಸಬೇಕಿದೆ. ಜಲಚರ ಸಮೇತ ಸಕಲ ಪ್ರಾಣಿ ಪಕ್ಷಿಗಳ ಬಗ್ಗೆ ಕೂಡ ಕಾಳಜಿ ವಹಿಸಬೇಕಿದೆ. ಜೀವಜಾಲವನ್ನು ರಕ್ಷಿಸದಿದ್ದರೆ ಜಗತ್ತು ಸರ್ವನಾಶವಾಗುವುದರಲ್ಲಿ ಸಂಶಯವಿಲ್ಲ.

"ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳಿತಿರ್ದ ನಮ್ಮ ಮಹಾದೇವಸೆಟ್ಟಿ.
ಒಮ್ಮನವಾದಡೆ ಒಡನೆ ನುಡಿವನು, ಇಮ್ಮನವಾದಡೆ ನುಡಿಯನು.
ಕಾಣಿಯ ಸೋಲ, ಅರ್ಧಗಾಣಿಯ ಗೆಲ್ಲ;
ಜಾಣ ನೋಡವ್ವ ನಮ್ಮ ಕೂಡಲಸಂಗಮದೇವ."

ಬಸವಣ್ಣನವರು ಜೀವಜಾಲಸಮತೋಲನದ ಮಹತ್ವವನ್ನು ಸಾರಿದ್ದಾರೆ. ದೇವ ಮಹಾದೇವಸೆಟ್ಟಿ ಈ ಪೃಥ್ವಿಯ ಮೇಲೆ ಲೋಕವ್ಯವಹಾರವೆಂಬ ಬೃಹತ್ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರಕ್ಕೆ ಕುಳಿತಿದ್ದಾನೆ. ಏಕೋಭಾವದಿಂದ ತಮಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಬಯಸುವವರ ಕೂಡ ಆತ ವ್ಯವಹರಿಸುತ್ತಾನೆ. ಹಪಾಪಿತನದಿಂದ ಇಮ್ಮನಸು ಹೊಂದಿದವರ ಜೊತೆ ಆತನ ವ್ಯವಹಾರವಿಲ್ಲ. ಆತನ ಜೀವಜಾಲ ಸಮತೋಲನದ ತಕ್ಕಡಿಯಲ್ಲಿ ಒಂದಿಷ್ಟೂ ವ್ಯತ್ಯಾಸ ಕಂಡುಬರುವುದಿಲ್ಲ. ಕೊಡುವವನಿಗಾಗಲಿ ಕೊಳ್ಳುವವನಿಗಾಗಲಿ ಹಾನಿ ಎಂಬುದೇ ಇಲ್ಲ. ಆದ್ದರಿಂದಲೇ ಇಂಥ ಪ್ರಕೃತಿಯನ್ನು ಸೃಷ್ಟಿಸಿದ ಸೃಷ್ಟಿಕರ್ತ ಜಾಣನಲ್ಲದೆ ಇನ್ನೇನಾಗಿರಲು ಸಾಧ್ಯ?

ಸಕಲ ಜೀವರಾಶಿಗೆ ಇಂಥ ಸೃಷ್ಟಿಯನ್ನು ನಿರ್ಮಿಸಿದ ಸೃಷ್ಟಿಕರ್ತ ಅಗಮ್ಯ, ಅಗೋಚರ, ಅಪ್ರತಿಮ ಮತ್ತು ಅಪ್ರಮಾಣನಾಗಿದ್ದಾನೆ. ಆತ ಅಗಮ್ಯನಾಗಿದ್ದರಿಂದ ಆತನ ಬಳಿಗೆ ಹೋಗಲಿಕ್ಕಾಗದು. ಆತ ಅಗೋಚರನಾಗಿರುವುದರಿಂದ ಆತನನ್ನು ಹೊರಗಣ್ಣಿನಿಂದ ನೋಡಲಿಕ್ಕಗದು. ಆತನು ಅಪ್ರತಿಮನಾಗಿರುವುದರಿಂದ ಆತನನ್ನು ಯಾವುದರ ಜೊತೆಗೂ ಹೋಲಿಸಲಿಕ್ಕಾಗದು. ಅನಂತನಾದ ಆತ ಅಪ್ರಮಾಣನಾಗಿರುವುದರಿಂದ ಆತನ ಉದ್ದಗಲಗಳನ್ನು ಅಳೆಯಲಿಕ್ಕಾಗದು.

"ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದವೆ ಅತ್ತತ್ತ ನಿಮ್ಮ ಶ್ರೀಚರಣ
ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀಮಕುಟ
ಅಗಮ್ಯ, ಅಗೋಚರ, ಅಪ್ರತಿಮ ಲಿಂಗವೇ
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ."

ಬಸವಣ್ಣನವರು ಅಗೋಚರನಾದ ದೇವರನ್ನು ಇಷ್ಟಲಿಂಗವೆಂಬ ಕುರುಹಿನ ರೂಪದಲ್ಲಿ ನಮ್ಮ ಕರಸ್ಥಲಕ್ಕೆ ತಂದಿದ್ದಾರೆ.

ಇಷ್ಟಲಿಂಗದಲ್ಲಿ ವಿಶ್ವಪ್ರೇಮದ ಪಾಠ:

ಬಸವಣ್ಣನವರು ಕೊಟ್ಟ ಈ ಇಷ್ಟಲಿಂಗವು ಇಡೀ ಬ್ರಹ್ಮಾಂಡದ ಸಂಕೇತವೂ ಆಗಿದೆ. ಇದರಲ್ಲಿ ಸೂರ್ಯ ಚಂದ್ರ ತಾರೆಯರು ಸೇರಿದಂತೆ ಸಕಲಜೀವರಾಶಿಯಿಂದ ಕೂಡಿದ ಪ್ರಥ್ವಿಯೂ ಉಂಟು. ಇಷ್ಟಲಿಂಗ ಪೂಜಕರು ಇಡೀ ವಿಶ್ವವನ್ನೇ ಪೂಜಿಸುವವರಾಗಿದ್ದಾರೆ. ಲಿಂಗಾಯತ ಧರ್ಮದಲ್ಲಿ ಪೂಜೆ ಎಂದರೆ ಮಾನವ ಸಕಲಜೀವಿಗಳನ್ನು ತನ್ನ ಭಾವಲೋಕದಲ್ಲಿ ಇಂಬಿಟ್ಟುಕೊಳ್ಳುವುದು. ಆದ್ದರಿಂದ ಇಷ್ಟಲಿಂಗಪೂಜಕನಿಗೆ ಯಾವುದೂ ಹೊರಗಿನದಲ್ಲ ಮತ್ತು ಯಾರೂ ಹೊರಗಿನವರಲ್ಲ. ಬಸವಣ್ಣನವರು ಇಷ್ಟಲಿಂಗದ ಮೂಲಕ ವಿಶ್ವಪ್ರೇಮದ ಪಾಠವನ್ನು ಹೇಳಿಕೊಟ್ಟಿದ್ದಾರೆ. ಇಂಥ ನವಮಾನವರೆಂದರೆ ಶರಣರು. ಇವರೇ ವಿಶ್ವಮಾನವರು. ಹೀಗೆ ಮಾನವನನ್ನು ವಿಶ್ವಮಾನವನನ್ನಾಗಿ ಮಾಡುವ ಧರ್ಮ ಇದಾಗಿದೆ.

ಬಸವಣ್ಣನವರು ಬಯಸಿದಂತೆ ವಿಶ್ವಮಾನವನಾಗುವುದು ಸುಲಭದ ಕೆಲಸವಲ್ಲ. ಏಕಾತ್ಮನು ಲೋಕಾತ್ಮರ ಜೊತೆ ಒಂದಾದಾಗ ಮಾತ್ರ ತನ್ನೊಳಗಿನ ಪರಮಾತ್ಮನನ್ನು ಕೂಡುವ ಅರ್ಹತೆ ಪಡೆಯುತ್ತಾನೆ. ಆ ಮೂಲಕ ಶಿವಸ್ವರೂಪಿಯಾಗಿ ವಿಶ್ವಮಾನವನಾಗುತ್ತಾನೆ. ಲಿಂಗಾಂಗಸಾಮರಸ್ಯದಿಂದ ವಿಶ್ವಮಾನವರಾಗುವ ಕ್ರಮವನ್ನು ಬಸವಣ್ಣನವರು ಅರುಹಿದ್ದಾರೆ. ನಾವು ಅಂಗ. ನಮ್ಮನ್ನು ಜೀವಂತವಾಗಿರಿಸಿರುವುದು ನಮ್ಮೊಳಗಿನ ಲಿಂಗ. ನಾವು ಅಂಗವಾದಂತೆ ಜಗತ್ತಿನ ಸಕಲ ಚರಾಚರವೂ ಅಂಗವೇ ಆಗಿದೆ. ಎಲ್ಲ ಅಂಗಗಳಲ್ಲಿಯೂ ಲಿಂಗವೇ ಇದೆ. ಆದ್ದರಿಂದ ನಾವು ವಿಶ್ವದ ಪ್ರತಿಯೊಂದು ಜೀವಿಯ ಬಗ್ಗೆ ಜೀವಕಾರುಣ್ಯವನ್ನು ಹೊಂದಿದಾಗ ಮಾತ್ರ ನಮ್ಮೊಳಗಿನ ದೇವರ ಜೊತೆ ಐಕ್ಯವಾಗಲು ಸಾಧ್ಯವಾಗುತ್ತದೆ. ನಾವು ನಮ್ಮೊಳಗಿನ ದೇವರ ಜೊತೆ ಐಕ್ಯವನ್ನು ಸಾಧಿಸುವುದೇ ಲಿಂಗಾಂಗಸಾಮರಸ್ಯ. ಇದುವೆ ವಸ್ತು ಮತ್ತು ಚೈತನ್ಯದ ಅವಿನಾಭಾವ ಸಂಬಂಧ. ಇದನ್ನೇ ವಿಜ್ಞಾನದಲ್ಲಿ 'ಮ್ಯಾಟರ್ ಅಂಡ್ ಎನರ್ಜಿ' ಎಂದು ಕರೆಯುತ್ತಾರೆ. ಮ್ಯಾಟರ್ ಅಂಗವಾದರೆ ಎನರ್ಜಿ ಲಿಂಗವಾಗುತ್ತದೆ. ಇಡೀ ವಿಶ್ವ ಚೈತನ್ಯದಿಂದ

ಸೃಷ್ಟಿಯಾಗಿದೆ. ಕೊನೆಗೆ ಒಂದು ದಿನ ನಿರ್ನಾಮವಾಗಿ ಚೈತನ್ಯವನ್ನೇ ಸೇರುತ್ತದೆ ಎಂದು ವಿಜ್ಞಾನ ಹೇಳುತ್ತದೆ. ಇದನ್ನೇ ಅಲ್ಲಮಪ್ರಭುಗಳು "ರೂಪಿಂಗೆ ಕೇಡುಂಟು" ಎಂದು ತಿಳಿಸಿದ್ದಾರೆ. "ಸಕಲ ಜೀವರೆಲ್ಲರೂ ಪೃಥ್ವಿಯಿಂದ ಉದ್ಭವ" ಎಂದು ಸಾರಿದ ಅಲ್ಲಮಪ್ರಭುಗಳು ಕಣ್ಣಿಗೆ ಕಾಣುವುದೆಲ್ಲವೂ ಸಾಯಲೇ ಬೇಕು ಎಂದು ಹೇಳಿದ್ದು ಎಷ್ಟೊಂದು ವೈಜ್ಞಾನಿಕವಾಗಿದೆ! ಮಾನವರು ಇದನ್ನರಿತು ಇತರ ಮಾನವರೊಂದಿಗೆ, ಸಕಲಜೀವಿಗಳೊಂದಿಗೆ ಹಾಗೂ ಒಟ್ಟಾರೆ ನಿಸರ್ಗದೊಂದಿಗೆ ಸೌಹಾರ್ದಯುತವಾಗಿ ಬದುಕಬೇಕೆಂಬುದೇ ಬಸವಧರ್ಮವಾದ ಲಿಂಗಾಯತ ಧರ್ಮದ ಸಂದೇಶವಾಗಿದೆ.

ಇದು ಬರಿ ಸಂದೇಶ ಮಾತ್ರವಲ್ಲ. ಇದನ್ನು ಕಾರ್ಯಗತಗೊಳಿಸುವ ವಿಧಾನವನ್ನೂ ಬಸವಾದಿ ಶರಣರು ತಿಳಿಸಿಕೊಟ್ಟಿದ್ದಾರೆ. ನಮ್ಮ ಕಣ್ಣಿಗೆ ಕಾಣುವ ಅನುಭವದ ಜಗತ್ತಿನಲ್ಲಿ ಬದುಕುತ್ತಲೇ ಒಳಗಣ್ಣಿಗೆ ಕಾಣುವ ಅನುಭಾವದ ಜಗತ್ತಿನಲ್ಲಿ ಆನಂದಮಯವಾಗಿ ಇರಲು ಸಾಧ್ಯವಾಗುವಂಥ ಮಾರ್ಗದರ್ಶಿ ಸೂತ್ರಗಳನ್ನು ಲಿಂಗತತ್ತ್ವ ಒಳಗೊಂಡಿದೆ. ಆ ಸೂತ್ರಗಳು ಶರಣರ ವಚನಗಳಲ್ಲಿ ಹಾಸುಹೊಕ್ಕಾಗಿವೆ. ಇಷ್ಟಲಿಂಗವು ಅನುಭಾವದೆಡೆಗೆ ಒಯ್ಯುವ ಲಿಂಗಾಂಗಸಾಮರಸ್ಯಕ್ಕಷ್ಟೇ ಸೀಮಿತವಾಗಿಲ್ಲ. ಅದು ಐಹಿಕ ಬದುಕಿನ ಎಲ್ಲ ಸ್ತರಗಳಲ್ಲೂ ನಮ್ಮನ್ನು ಕಾಪಾಡುವ ಶಕ್ತಿಯನ್ನು ಹೊಂದಿದೆ.

ಸಮೂಹ ಶಕ್ತಿ:

ಇಷ್ಟಲಿಂಗವು ಸಮೂಹದ ಪರವಾಗಿದ್ದು ಸಮೂಹ ಶಕ್ತಿಯನ್ನು ಒಂದುಗೂಡಿಸುವ ಸಾಮರ್ಥ್ಯವನ್ನು ಹೊಂದಿದೆ. "ದಾಸೀಪುತ್ರನಾಗಲಿ ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ" ಎಂದು ಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ. ಇಷ್ಟಲಿಂಗ ದೀಕ್ಷೆಯಾದ ಮೇಲೆ ಅನೈತಿಕ ಸಂಬಂಧದಿಂದ ಜನಿಸಿದ ದಾಸೀಪುತ್ರರು ಮತ್ತು ವೇಶ್ಯಾಪುತ್ರರು ಹಾಗೂ ದಾಂಪತ್ಯ ಸಂಬಂಧದಿಂದ ಜನಿಸಿದ ಪುತ್ರರಲ್ಲಿ ಬಸವಣ್ಣನವರು ಯಾವುದೇ ಭೇದಭಾವ ಎಣಿಸಲಿಲ್ಲ. ಇಷ್ಟಲಿಂಗ ಧರಿಸಿದ ವೇಶ್ಯಾಪುತ್ರರು, ನಿರ್ಗತಿಕರ, ಬಡವರ, ಶ್ರೀಮಂತರ ಮತ್ತು ರಾಜರ ಮಕ್ಕಳು ಒಂದೇ ಸ್ಥಾನಮಾನ ಹೊಂದಿದ್ದರು. ಶರಣಸಂಕುಲದಲ್ಲಿ ಅವರೆಲ್ಲ ಆತ್ಮಗೌರವ ಮತ್ತು ಕಾಯಕಸಂಸ್ಕೃತಿಯೊಂದಿಗೆ ಬದುಕುತ್ತ ಸಮೂಹಶಕ್ತಿಯಾಗಿ ಬೆಳೆದರು.

ಇವರಲ್ಲಿನ ಅನೇಕರು ಶರಣಸಂಕುಲಕ್ಕೆ ಬರುವ ಮೊದಲು ಅರಮನೆಯಲ್ಲಿ, ಗುರುಮನೆಯಲ್ಲಿ ಮತ್ತು ದೇವಾಲಯಗಳಲ್ಲಿ ಬಿಟ್ಟಿಕೂಲಿ ಮಾಡುತ್ತ ಹೊಟ್ಟೆಪಾಡಿಗಾಗಿ ಜೀವ ಸವೆಸುತ್ತಿದ್ದರು. ಅವರಿಗೆಲ್ಲ ಆಹಾರವೇ ಕೂಲಿಯಾಗಿತ್ತು. ಕೆಲಸ ಮಾಡಿಕೊಳ್ಳುವವರು ಅವರತ್ತ ತಲೆ ಎತ್ತಿ ಕೂಡ ನೋಡುತ್ತಿರಲಿಲ್ಲ. ಇಂಥ ಸ್ಥಿತಿಯನ್ನು 'ಅರಸರಿಯದ ಬಿಟ್ಟಿ' ಎಂದು ಬಸವಣ್ಣನವರು ತಿಳಿಸಿದ್ದಾರೆ.

ಕಾಯಕಜೀವಿಗಳು ಸಹಸ್ರಾರು ವರ್ಷಗಳಿಂದ ಬೆಳೆದು ಬಂದ ಮಾನಸಿಕ ಗುಲಾಮಗಿರಿಯಿಂದ ಹೊರಬಂದು ವೃತ್ತಿಗೌರವದ ವಾತಾವರಣದಲ್ಲಿ ವ್ಯಕ್ತಿತ್ವ ವಿಕಸನ ಹೊಂದುತ್ತ ಮೊದಲ ಬಾರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ಆನಂದವನ್ನು ಅನುಭವಿಸಿದರು. ಶೋಷಣೆಯ ಕೇಂದ್ರಗಳಾಗಿ ಬೆಳೆದಿದ್ದ ಮಂದಿರ ವ್ಯವಸ್ಥೆಯನ್ನು ಬಸವಣ್ಣನವರು ತಿರಸ್ಕರಿಸಿದ್ದರಿಂದ ಕಾಯಕಜೀವಿಗಳು ಮಂದಿರಗಳ ಸಂಬಂಧವನ್ನು ಸಂಪೂರ್ಣವಾಗಿ ಕಡಿದುಕೊಂಡರು. ತಮ್ಮ ಆರಾಧ್ಯ ದೈವಗಳಾಗಿದ್ದ ಸ್ಥಾವರಲಿಂಗಗಳನ್ನು ಕೂಡ ತಿರಸ್ಕರಿಸಿ ಬಸವಣ್ಣನವರು ಕೊಟ್ಟ ಇಷ್ಟಲಿಂಗಗಳನ್ನು ಎದೆಯ ಮೇಲೆ ಕಟ್ಟಿಕೊಂಡು ಆ ಮೂಲಕ ದೇವಸಾನಿಧ್ಯವನ್ನು ಪಡೆದರು. ಏಕದೇವೋಪಾಸನೆಯ ಮೂಲಕ ಕಾಯಕಜೀವಿಗಳು ತಮ್ಮ ಜಾತಿಗಳಿಂದ ಹೊರಬಂದು ಕಾಯಕಜೀವಿಗಳ ವರ್ಗವಾಗಿ ರೂಪುಗೊಂಡರು. ಹೀಗೆ ಜನ ಜನ ಸೇರಿ ಜನಸಾಗರವೇ ಆದರು. ಮೊದಲಬಾರಿಗೆ ಜಗತ್ತಿನಲ್ಲಿ ದುಡಿಯುವ ಜನರ ಸಮೂಹಶಕ್ತಿಯ ಉದಯವಾಯಿತು! ಶರಣಸಂಕುಲ ಜಾತಿ ವರ್ಗ ಮತ್ತು ಲಿಂಗಭೇದಗಳಿಲ್ಲದ ಹೊಸ ಸಮಾಜವಾಯಿತು. ಮೇಲ್ಜಾತಿಯವರು, ಕೆಳಜಾತಿಯವರು, ಬಡವರು ಮತ್ತು ಶ್ರೀಮಂತರು ಶರಣಸಂಕುಲದಲ್ಲಿ ಇಷ್ಟಲಿಂಗ ದೀಕ್ಷೆಯ ಮೂಲಕ ಒಂದಾಗಿ ಹೋದರು. ಅವರು ತಮ್ಮ ಜಾತಿ ಮತ್ತು ವರ್ಗ ಲಕ್ಷಣಗಳನ್ನು ಕಳೆದುಕೊಂಡು ಪರಿಶುದ್ಧ ಮಾನವರಾದರು.

ಇಂದು ನಡೆದಾಡುವ ದೇವರು ಎನಿಸಿಕೊಳ್ಳುವವರು ಈ ಜಗತ್ತನ್ನು ಒಂದು ಮಾಯೆ ಎಂದು ಭಾವಿಸುತ್ತಾರೆ. 'ಇದು ಐತಿ ಅಂದ್ರ ಐತಿ; ಇಲ್ಲ ಅಂದ್ರ ಇಲ್ಲ' ಎಂಬ ವಾದವನ್ನು ಮಂಡಿಸುತ್ತಾರೆ. ಹೂವಿನ ಪರಿಮಳ, ಹಕ್ಕಿಗಳ ಮಧುರ ಗಾನ ಮತ್ತು ತಂಗಾಳಿಯ ಬಗ್ಗೆ ಇಡೀ ಜೀವನ ಮಾತನಾಡುತ್ತ ಜನರು ತಮ್ಮ ದೈನಂದಿನ ಬದುಕಿನ ಕಷ್ಟನಷ್ಟಗಳನ್ನು ಮಾಯೆ ಎಂದು ಭ್ರಮಿಸುವ ಹಾಗೆ ಮಾಡುತ್ತಾರೆ. ಇವರು ಸಮಾಜದಲ್ಲಿನ ಜಾತಿ ಮತ್ತು ವರ್ಗ ಲಕ್ಷಣಗಳನ್ನು ಗುರುತಿಸುವ ಗೊಡವೆಗೆ ಹೋಗುವುದಿಲ್ಲ. ಎಲ್ಲವನ್ನೂ ಒಂದೇ ತಕ್ಕಡಿಯಲ್ಲಿ ಇಟ್ಟು ತೂಗುತ್ತಾರೆ. ಶೋಷಕರಿಗೆ ಇಂಥವರನ್ನು ಕಂಡರೆ ಬಹಳ ಇಷ್ಟ. ಏಕೆಂದರೆ ಇವರು ಜನರನ್ನು ವಾಸ್ತವದ ನೆಲೆಯಿಂದ ಭ್ರಮಾತ್ಮಕ ನೆಲೆಗೆ ಒಯ್ಯುವ ಮೂಲಕ ಆ ಜನರಲ್ಲಿನ ಹೋರಾಟ ಮನೋಭಾವವನ್ನು ನಿಷ್ಕ್ರಿಯಗೊಳಿಸುತ್ತಾರೆ. ವಿವಿಧ ಕ್ಷೇತ್ರಗಳಲ್ಲಿನ ಶೋಷಕರಿಗೆ ಇದರಿಂದ ಬಹಳೇ ಲಾಭವಾಗುವುದು. ಆದ್ದರಿಂದ ಪ್ರತಿದಿನ ಲಕ್ಷ ರೂಪಾಯಿ ಖರ್ಚಾದರೂ ಇಂಥವರಿಂದ ತಿಂಗಳ ಪರ್ಯಂತ ಪ್ರವಚನದ ಏರ್ಪಾಡು ಮಾಡುತ್ತಾರೆ. ಸಹಸ್ರ ಸಹಸ್ರ ಜನರು ಇಂಥ ಭ್ರಮೆಯನ್ನು ಸೃಷ್ಟಿಸುವ ಪ್ರವಚನಗಳಿಗೆ ಸಹಜವಾಗಿಯೇ ಮಾರುಹೋಗುತ್ತಾರೆ. ಜೀವನ ನಶ್ವರ ಎಂದು ಗುಣಗುತ್ತ ನಿಷ್ಕ್ರಿಯರಾಗುವ ಮೂಲಕ ಶೋಷಣೆಯನ್ನು ಅನುಭವಿಸುತ್ತಲೆ ಬದುಕನ್ನು ಸವೆಸುತ್ತಾರೆ. ಈ ದೇಶದಲ್ಲಿ ದೇವರ ದಿಂಡರ, ಬಾಬಾಗಳ, ಶ್ರೀಶ್ರೀಗಳ, ಸ್ವಾಮೀಜಿಗಳನ್ನು

ಬಳಸಿಕೊಳ್ಳುವುದರ ಮೂಲಕ ಸುಲಿಗೆಕೋರರು ಸಮಾಜದ ಸುಲಿಗೆ ಮಾಡುತ್ತಲೇ ಇರುತ್ತಾರೆ. ಜನರು ಚೆನ್ನಬಸವಣ್ಣನವರು ಹೇಳುವಂತೆ ನರಗುರಿಗಳಾಗಿರುತ್ತಾರೆ. ಇಡೀ ಸಮಾಜವನ್ನು ಒಂದು ಮಾಡಬೇಕಾದರೆ ಆ ಸಮಾಜದ ವರ್ಗ ಲಕ್ಷಣಗಳನ್ನು ಗುರುತಿಸಿ ಮೊದಲಿಗೆ ಕಾಯಕಜೀವಿಗಳ ರಕ್ಷಣೆ ಮಾಡಬೇಕು. ಅರಿವಿನೊಂದಿಗೆ ದುಡಿಯುವ ವರ್ಗ ಹೋರಾಟದ ಮಾರ್ಗ ಹಿಡಿದಾಗ ಮಾತ್ರ ವರ್ಗರಹಿತ ಸಮಾಜ ನಿರ್ಮಾಣವಾಗಲು ಸಾಧ್ಯ. ಈ ಸತ್ಯವನ್ನು ಕಂಡುಹಿಡಿದ ಬಸವಣ್ಣನವರಿಗೆ ಇಡೀ ಜಗತ್ತಿನ ಕಾಯಕಜೀವಿಗಳು ಗೌರವಿಸುವುದರಲ್ಲಿ ಸಂಶಯವಿಲ್ಲ. ಬಸವತತ್ತ್ವಗಳನ್ನು ಜಗತ್ತಿಗೆ ಮುಟ್ಟಿಸಿದಾಗಲೇ ಇದೆಲ್ಲ ಸಾಧ್ಯವಾಗುವುದು.

ಬಡ್ಡಿರಹಿತ ಸಾಮಾಜಿಕ ವ್ಯವಸ್ಥೆ:

ಲಿಂಗಭಕ್ತರಾದವರು ವೈಯಕ್ತಿಕವಾಗಿ ಸಂಪತ್ತನ್ನು ಕ್ರೂಡೀಕರಿಸುವ ಹಾಗಿಲ್ಲ. 'ಅನ್ನದೊಳಗೊಂದಗುಳ, ಸೀರೆಯೊಳಗೊಂದೆಳೆಯ, ಹೊನ್ನಿನೊಳಗೊಂದೊರೆಯ ಇಂದಿಂಗೆ ನಾಳಿಂಗೆ ಎಂದೊಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ' ಎಂದು ಬಸವಣ್ಣನವರು ಹೇಳುವ ಮೂಲಕ ಖಾಸಗಿ ಆಸ್ತಿಗೆ ತಿಲಾಂಜಲಿ ಇತ್ತಿದ್ದಾರೆ.

ಯಾರು ಎಷ್ಟೇ ಗಳಿಸಿದರೂ ಹೆಚ್ಚಿನದನ್ನು ಶಿವನಿಧಿ ಎನಿಸಿಕೊಂಡ ಸಾಮಾಜಿಕ ನಿಧಿಗೇ ಸಲ್ಲಿಸಬೇಕಿತ್ತು. ಶರಣ ಸಂಕುಲದ ಸದಸ್ಯರು ತಮಗೆ ಬೇಕಾದಾಗ ಸಂಪತ್ತಿನ ಬಳಕೆ ಮಾಡುತ್ತಿದ್ದರು. ಮತ್ತೆ ಸಾಧ್ಯವಾದಾಗ ಶಿವನಿಧಿಗೆ ಅರ್ಪಿಸುತ್ತಿದ್ದರು. ಬಡ್ಡಿಯ ವ್ಯವಸ್ಥೆಯು ಕಾಯಕ ಸಿದ್ಧಾಂತಕ್ಕೆ ವಿರುದ್ಧವಾಗಿರುವ ಕಾರಣ ಬಸವಣ್ಣನವರು ಬಡ್ಡಿಯನ್ನು ನಿಷೇಧಿಸಿದ್ದರು. "ಮೃಡಭಕ್ತರಿಗಲ್ಲದೆ ಕಡ, ಬಡ್ಡಿಯ ಕೊಡಲಾಗದು. ಬಂದರೆ ಒಂದು ಲೇಸು ಬಾರದಿದ್ದರೆ ಎರಡು ಲೇಸು" ಎಂದು ಬಸವಣ್ಣನವರು ತಿಳಿಸಿದ್ದಾರೆ. ಕಾಯಕಜೀವಿಗಳು ದಾಸೋಹ ಮಾಡುವುದರಲ್ಲೇ ಆನಂದ ಪಡುತ್ತಿದ್ದರೇ ಹೊರತು ಏನನ್ನಾದರೂ ಪಡೆಯುವುದರಲ್ಲಿ ಅಲ್ಲ. ಹೀಗಾಗಿ ಕಾಯಕದ ಮೂಲಕ ಅವರು ಸಂಪಾದನೆ ಮಾಡಿದರು. ಸಂಪಾದನೆ ಮಾಡಿದ್ದನ್ನು ದೇವರ ಪ್ರಸಾದವೆಂದು ಸ್ವೀಕರಿಸಿ ಸ್ವಲ್ಪವೂ ಹಾಳಾಗದಂತೆ ಬಳಸಿದರು. ಸಂಪಾದಿಸಿದ್ದರಲ್ಲಿ ಏನನ್ನೂ ಉಳಿಸಿಕೊಳ್ಳದೆ ಶಿವನಿಧಿಗೆ ಅರ್ಪಿಸಿದರು. ನಿತ್ಯ ಕಾಯಕದ ಮೂಲಕವೇ ಬದುಕಿದರು. ಆಯ್ದಕ್ಕಿ ಮಾರಯ್ಯನವರು ಒಂದು ಸಲ ಹೆಚ್ಚಿಗೆ ಅಕ್ಕಿಯನ್ನು ತಂದದ್ದಕ್ಕೆ ಅವರ ಪತ್ನಿ ಆಯ್ದಕ್ಕಿ ಲಕ್ಕಮ್ಮ "ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ" ಎಂದು ಪ್ರಶ್ನಿಸುತ್ತಾಳೆ. ಕಡುಬಡವಿಯಾದ ಈ ಶರಣೆ ರಾಜ್ಯವ್ಯವಸ್ಥೆಯನ್ನೇ ಎದುರು ಹಾಕಿಕೊಳ್ಳುವಂಥ ಧೈರ್ಯ ತಾಳಿದ್ದು ಜನಶಕ್ತಿಯ ದ್ಯೋತಕವಾಗಿದೆ. ಇಂಥ ಜನಶಕ್ತಿಯನ್ನು ಸೃಷ್ಟಿಸಿಕ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ.

ಬಸವಣ್ಣನವರು ರಾಜ್ಯಶಕ್ತಿಯ ಮೇಲೆ ಅವಲಂಬಿತವಾಗದೆ ಜನಶಕ್ತಿಯ ಸಮಾಜವನ್ನು ಕಟ್ಟುವ ಕನಸು ಕಂಡಿದ್ದರು. ಅಂತೆಯೆ 'ಊರಮುಂದೆ ಹಾಲಹಳ್ಳ ಹರಿಯುತ್ತಿರಲು ಬಿಜ್ಜಳನ ಭಂಡಾರವೆನಗೇಕಯ್ಯಾ' ಎಂದು ಹೇಳಿದ್ದರು. ಊರ ಮುಂದೆ ಹಾಲಹಳ್ಳ ಹರಿಯುವುದೆಂದರೆ ಜನಶಕ್ತಿಯ ಗುಣಗಾನ ಮಾಡುವುದು. ಹೀಗೆ ಜಗತ್ತಿನ ಯಾವ ಭಾಗದಲ್ಲೂ ಹಾಲಹಳ್ಳ ಹರಿಯಲಿಲ್ಲ. ಅದು ಹರಿದದ್ದು ಸ್ವರ್ಗದಲ್ಲಿ ಮಾತ್ರ ಎಂದು ವಿವಿಧ ಧರ್ಮಗ್ರಂಥಗಳು ಸಾರುತ್ತವೆ. ಇಷ್ಟಲಿಂಗವು ಹೀಗೆ 33 ಕೋಟಿ ದೇವತೆಗಳನ್ನು ದೂರ ಸರಿಸಿ ದುಡಿಯುವ ಜನರ ಎದೆಯ ಮೇಲೆ ರಾರಾಜಿಸಿತು. ದುಡಿಯುವ ಜನರನ್ನು ಒಂದು ವರ್ಗವಾಗಿ ರೂಪಿಸಿತು.

ಅರ್ಥಶಕ್ತಿ:

ಇಷ್ಟಲಿಂಗವು ಎದೆಯ ಮೇಲೆ ಬಂದ ಬಳಿಕ ಕಾಯಕಜೀವಿಗಳು ಗುಡಿ ಗುಂಡಾರ ಸುತ್ತುವುದನ್ನು ಮತ್ತು ಅಲ್ಲಿ ಬಿಟ್ಟಿಕೂಲಿ ಮಾಡುವುದನ್ನು ನಿಲ್ಲಿಸಿದರು. ದೇವರಿಗೆ ಹರಕೆ ಹೊರುವುದು ತಪ್ಪಿತು. ಬೆಳ್ಳಿಬಟ್ಟಲು, ಬಂಗಾರದ ತೊಟ್ಟಿಲು, ಪ್ರಭಾವಳಿ, ಕುರಿ, ಕೋಣ, ತೆಂಗಿನಕಾಯಿ ಹೀಗೆ ಯಾವುದೂ ಇಷ್ಟಲಿಂಗ ಪೂಜೆಗೆ ಬೇಕಿಲ್ಲ. ಜಗತ್ತಿನ ಖರ್ಚಿಲ್ಲದ ಮಹಾದೇವರಿದು. ಭಾರತದಲ್ಲಿ ಮೂಢನಂಬಿಕೆ ಎಷ್ಟೊಂದು ವ್ಯಾಪಕವಾಗಿದೆ ಎಂದರೆ ಅದರ ಮೇಲೆ ಖರ್ಚು ಮಾಡುವ ಹಣ ಪಂಚವಾರ್ಷಿಕ ಯೋಜನೆಯ ಹಣವನ್ನೂ ಮೀರಿಸುತ್ತದೆ! ಕಾಯಕಜೀವಿಗಳ ಬಹುಪಾಲು ಶ್ರಮ ದೇವರು ಮತ್ತು ಮೂಢ ನಂಬಿಕೆಗಳಿಗೇ ಖರ್ಚಾಗುತ್ತಿತ್ತು. ಈ ಅನಿಷ್ಟ ಪದ್ಧತಿಗಳಿಗೆ ಮಾಡುವ ಖರ್ಚು ವೆಚ್ಚಗಳು ನಿಂತುಹೋದದ್ದರಿಂದ ಕಾಯಕಜೀವಿಗಳು ಸಾಲದ ಹೊರೆಯಿಂದ ಮುಕ್ತರಾಗಿ ನೆಮ್ಮದಿಯಿಂದ ಬದುಕುವಂತಾಯಿತು. ಹೀಗೆ ಇಷ್ಟಲಿಂಗವು ಅವರ ಆರ್ಥಿಕ ಶಕ್ತಿಯನ್ನು ಹೆಚ್ಚಿಸಿತು.

ಮನೋಶಕ್ತಿ:

"ಕತ್ತಲೆ ಹರಿಯದೊಡಾ ಜ್ಯೋತಿಯದೇಕೋ, ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ ಕರ್ಮ ಹರಿಯದೊಡಾ ಪೂಜೆ ಅದೇಕೋ" ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ಮೂಢನಂಬಿಕೆಗಳ ತಾಯಿಯಾದ ಕರ್ಮಸಿದ್ಧಾಂತವನ್ನು

ಅಲ್ಲಗಳೆಯುವುದೇ ಬಸವಣ್ಣನವರ ಗುರಿಯಾಗಿತ್ತು. ಕರ್ಮ ಎಂಬುದು ಇಲ್ಲವೇ ಇಲ್ಲ. ಅದೊಂದು ಭ್ರಮೆಯಾಗಿ ದುರ್ಬಲ ಜೀವಿಗಳ ಮನದಲ್ಲಿ ಮನೆ ಮಾಡಿರುತ್ತದೆ. ಕರ್ಮದ ಕತ್ತಲೆಯು ಲಿಂಗಪೂಜೆಯ ಬೆಳಕಿನಿಂದ ಹೊರಟುಹೋಗುತ್ತದೆ. ಇದೇ ಲಿಂಗಪೂಜೆಯ ಅರಿವು. ಈ ಅರಿವಿನಿಂದ ಮಾನವ ಲಿಂಗಭೇದ, ವರ್ಣಭೇದ

ಮತ್ತು ವರ್ಗಭೇದದ ಭ್ರಮೆಗಳಿಂದಲೂ ಹೊರ ಬರುತ್ತಾನೆ ಎಂದು ಬಸವಣ್ಣನವರು ಇನ್ನೊಂದು ವಚನದಲ್ಲಿ ಹೇಳಿದ್ದಾರೆ. 'ಲಿಂಗವ ಪೂಜಿಸಿ ಫಲವೇನಯ್ಯಾ ಸಮರತಿ, ಸಮಕಳೆ, ಸಮಸುಖವ ಅರಿಯದನ್ನಕ್ಕ?' ಎಂದು ಅವರು ಪ್ರಶ್ನಿಸಿದ್ದಾರೆ. ಸಮರತಿಯು ಅನುಭಾವಕ್ಕೆ ಸಂಬಂಧಿಸಿದ ಲಿಂಗಾಂಗಸಾಮರಸ್ಯಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ದೈನಂದಿನ ಬದುಕಿನಲ್ಲಿ ಕೂಡ ಲಿಂಗಭೇದ ಮಾಡದೆ ಬದುಕುವುದನ್ನು ಅದು ಸೂಚಿಸುತ್ತದೆ. ಅದೇ ರೀತಿ ಸಮಕಳೆ ಅಂದರೆ ಬ್ರಾಹಣಕಳೆ, ಕ್ಷಾತ್ರಕಳೆ ಎಂದಿರದೆ ಮಾನವ ಕಳೆ ಎಂದಿರುತ್ತದೆ ಎಂದು ಬಸವಣ್ಣನವರು ಪ್ರತಿಪಾದಿಸಿದ್ದಾರೆ. ಸಮಸುಖ ಎಂದರೆ ಪ್ರಪಂಚದ ಎಲ್ಲ ವಸ್ತುಗಳು ಎಲ್ಲರಿಗೂ ಒಂದೇ ರೀತಿಯ ಸುಖವನ್ನು ಕೊಡುತ್ತವೆ. ಪ್ರಕೃತಿಯು ಮನುಷ್ಯರಲ್ಲಿ ಭೇದಭಾವ ಎಣಿಸುವುದಿಲ್ಲ ಎಂಬುದನ್ನು ಬಸವಣ್ಣನವರು ಮಾರ್ಮಿಕವಾಗಿ ತಿಳಿಸಿದ್ದಾರೆ.

ಕರ್ಮಸಿದ್ಧಾಂತದಿಂದಾಗಿ ಭಾರತೀಯರು ಸಹಸ್ರಾರು ವರ್ಷಗಳಿಂದ ಮಾನಸಿಕವಾಗಿ ಗುಲಾಮಗಿರಿಯನ್ನು ಅನುಭವಿಸುತ್ತಲೇ ಬಂದಿದ್ದಾರೆ. ಇದರ ಲಾಭವನ್ನು ಪುರೋಹಿತಶಾಹಿಗಳು ಪಡೆಯುತ್ತಲೇ ಬಂದಿದ್ದಾರೆ. ಕರ್ಮಸಿದ್ಧಾಂತವನ್ನು ಅಲ್ಲಗಳೆದ ಇಷ್ಟಲಿಂಗವು ಕಾಯಕಜೀವಿಗಳಲ್ಲಿ ಮನೋಶಕ್ತಿ ಹೆಚ್ಚುವಂತೆ ಮಾಡಿತು. ಅವರಿಗೆ ಏಕದೇವೋಪಾಸನೆಯ ಹೊಸ ಜೀವನ ವಿಧಾನವನ್ನು ಕಲಿಸಿತು.

ವಿಚಾರಶಕ್ತಿ:

ಸಹಸ್ರಾರು ವರ್ಷಗಳಿಂದ ಭಾರತೀಯರು ಶಾಸ್ತ್ರ ಪಂಚಾಂಗಗಳನ್ನು ನಂಬಿ ಬದುಕಿದವರಾಗಿದ್ದರು. ಜನರು ವೈಚಾರಿಕತೆಯನ್ನು ನಂಬಿ ಬದುಕಬೇಕೆಂದು ಬಸವಣ್ಣನವರು ಹೇಳಿದರು. 'ಕರ್ಣದಲಿ ಜನಿಸಿದವರುಂಟೆ ಜಗದೊಳು' ಎಂದು ಪ್ರಶ್ನಿಸಿದರು. 'ವಾರ ತಿಥಿ ಸುಮುಹೂರ್ತ ಎಂಬ ಲೌಕಿಕದ ಕರ್ಮವ ಮಾಡಿದಡೆ ನಿಮ್ಮ ಸದ್ಭಕ್ತರಿಗೆ ದೂರವಯ್ಯಾ ಕೂಡಲಚೆನ್ನಸಂಗಮದೇವಾ' ಎಂದು ಚೆನ್ನಬಸವಣ್ಣನವರು ಸಾರಿದರು.

"ಬ್ರಹ್ಮನ ನಾವು ಬಲ್ಲೆವು, ವಿಷ್ಣುವ ನಾವು ಬಲ್ಲೆವು
ತೆತ್ತೀಸಕೋಟಿ ದೇವತೆಗಳ ನಾವು ಬಲ್ಲೆವು
ಅದೇನು ಕಾರಣವೆಂದಡೆ;
ಇವರು ಹಲವು ಕಾಲ ನಮ್ಮ ನೆರೆಮನೆಯಲ್ಲಿದ್ದರಾಗಿ
ಇವರು ದೇವರೆಂಬುದ ನಾ ಬಲ್ಲೆನಾಗಿ
ಒಲ್ಲೆನೆಂದಾತನಂಬಿಗ ಚೌಡಯ್ಯ."

ಅಂಬಿಗರ ಚೌಡಯ್ಯನವರು ಗುಡಿ ಗುಂಡಾರಗಳ ದೇವರುಗಳನ್ನು ಅಲ್ಲಗಳೆದರು.

"ಸತ್ತು ಮಣ್ಣಾಗಿ ಹೋದ ಮಾತಾ ಪಿತರುಗಳು ತಮ್ಮ ಸಂತಾನವಾಗಿ ಜನಿಸಿ ಬಂದರೆಂದು ಹೆತ್ತು ಹೆಸರಿಟ್ಟು ಕರೆವರಯ್ಯಾ." ಎಂದು ಮಡಿವಾಳ ಮಾಚಿದೇವರು ಪುನರ್ಜನ್ಮವನ್ನು ತಿರಸ್ಕರಿಸಿದರು. "ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು. ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?" ಎಂದು ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ಪ್ರಶ್ನಿಸಿದಳು. ಹೀಗೆ ಕಾಯಕಜೀವಿಗಳು ವಿಚಾರಶಕ್ತಿಯನ್ನು ಬೆಳೆಸಿಕೊಂಡರು.

ಆತ್ಮಶಕ್ತಿ:

ಮನಸ್ಸನ್ನು ಕೇಂದ್ರೀಕರಿಸುವ ಇಷ್ಟಲಿಂಗ ಯೋಗವು ಖಂಡಿತವಾಗಿಯೂ ಆತ್ಮಶಕ್ತಿಯನ್ನು ವೃದ್ಧಿಸುವ ಕುರುಹು ಆಗಿದೆ. 'ಮರಣವೆ ಮಹಾನವಮಿ' ಎಂದು ಬಸವಣ್ಣನವರು ಹೇಳಿದ್ದು ಧೈರ್ಯದ ಅತ್ಯುನ್ನತ ಸ್ಥಿತಿಯ ದ್ಯೋತಕವಾಗಿದೆ. ಇಷ್ಟಲಿಂಗಯೋಗದ ಮೂಲಕ ಲಿಂಗಾಂಗಸಾಮರಸ್ಯ ಸಾಧಿಸಿದ ಶರಣರು ಸಾವಿಗೂ ಅಂಜದ ವೀರರಾದರು. ಇಷ್ಟಲಿಂಗವು ಯಾವುದೇ ಹೊರಗಿನ ಶಕ್ತಿಯ ಮೇಲೆ ಅವಲಂಬಿತವಾಗದಂಥ ಆತ್ಮಶಕ್ತಿಯನ್ನು ಕೊಡುತ್ತದೆ ಮತ್ತು ಆ ಮೂಲಕ ಸಕಲಜೀವಾತ್ಮರಿಗೆ ಲೇಸನೆ ಬಯಸುವ ದಯಾಭಾವ ಮೂಡಿಸುತ್ತದೆ. ದಯವೇ ಇಷ್ಟಲಿಂಗದ ಮೂಲ ಸೆಲೆಯಾಗಿದೆ. ಆದ್ದರಿಂದಲೇ ಬಸವಣ್ಣನವರು 'ದಯೆಯೆ ಧರ್ಮದ ಮೂಲವಯ್ಯಾ' ಎಂದು ಹೇಳಿದರು. 'ಕೂಡಲಸಂಗಮದೇವರೇ ಧರ್ಮದ ಮೂಲ' ಎಂದು ಅವರು ಹೇಳಲಿಲ್ಲ. ದಯೆ ಮತ್ತು ಧೈರ್ಯ ಇಷ್ಟಲಿಂಗ ತತ್ತ್ವದ ಮಹಾ ಕಾಣಿಕೆಗಳಾಗಿವೆ. ದೇವರು ದಯೆಯ ರೂಪದಲ್ಲಿ ಮಾತ್ರ ಇರುತ್ತಾನೆ. ದೇವರ ಮೂಲ ಹೆಸರೇ ದಯೆ ಎಂಬುದು ಬಸವಣ್ಣನವರ ನಂಬಿಕೆಯಾಗಿತ್ತು. ದಯೆಯು ಮನುಷ್ಯನನ್ನು ವಸ್ತುಮೋಹದಿಂದ ಹೊರ ತರುವುದು. ವಸ್ತುಮೋಹಿಗಳು ಅತ್ಯಂತ ದುರ್ಬಲ ವ್ಯಕ್ತಿತ್ವದವರು. ದಯೆಯುಳ್ಳವರು ಸಹಜವಾಗಿಯೆ ಐಹಿಕ ಆಸೆಗಳಿಂದ ಹೊರಬರುವುದರಿಂದ ಅವರು ಬದುಕಿಗೆ ಅಂಜುವವರಲ್ಲ. ಹೀಗಾಗಿ ಅವರು ವೀರಗುಣವನ್ನು ಹೊಂದಿರುತ್ತಾರೆ. ಜೀವಕಾರುಣ್ಯದ ಮೂಲಕ ಹೊಸ ಜಗತ್ತನ್ನು ರೂಪಿಸಬೇಕೆನ್ನುವವರಿಗೆ ಜಗತ್ತಿನ ಎಲ್ಲ ವಸ್ತುಗಳು ತೃಣ ಸಮಾನವಾಗಿ ಕಾಣತೊಡಗುವವು. 'ತಾ ಮಲಗುವುದರ್ಧ ಮಂಚ, ಉಣ್ಣುವುದು ಪಡಿಯಕ್ಕಿ, ಕುಡಿಯುವುದು ಒಂದಾವಿನ ಹಾಲು, ಸಿರಿಯ ನೆಚ್ಚಿ ಕೆಡಬೇಡ ಮನುಜಾ " ಎಂದು ಮೋಳಿಗೆ ಮಾರಯ್ಯನವರು ಹೇಳಿದ್ದಾರೆ. ಹೀಗೆ ಐಹಿಕ ವಸ್ತುಗಳಲ್ಲಿ ಸರ್ವರಿಗೂ ಸಮಪಾಲು ಬಯಸುವ ಶರಣರು ಸ್ವತಃ ಐಹಿಕ ಆಸೆಗಳಿಂದ ಮುಕ್ತರಾಗುವಂಥ ಆತ್ಮಶಕ್ತಿಯನ್ನು ಹೊಂದಿದ್ದರು.

ಇಂಥ ಆತ್ಮಶಕ್ತಿಯನ್ನು ಹೊಂದಿದ್ದರಿಂದಲೇ ಅವರು ತಮ್ಮ ಹೃದಯದೊಳಗೆ ಇಡೀ ಜಗತ್ತನ್ನು ತುಂಬಿಕೊಂಡರು. ಹೃದಯದ ಜ್ಞಾನದಿಂದ ಮಾತ್ರ ಇಡೀ ಜಗತ್ತನ್ನು ಸರ್ವಸಮತ್ವಭಾವದಿಂದ ನೋಡಲು ಸಾಧ್ಯ. ಅಂಥ ಸಾಧನೆಯನ್ನು ಮಾಡಿದವರು

ನಮ್ಮ ಶರಣರು. ಆ ಮೂಲಕ ಅವರು ಜಂಗಮಪೂಜೆ ಮಾಡಿದರು. ಜಂಗಮಪೂಜೆ ಎಂದರೆ ಕಾಯಕ, ಪ್ರಸಾದ ಮತ್ತು ದಾಸೋಹ ಪ್ರಜ್ಞೆಯೊಂದಿಗೆ ಕ್ರಿಯಾಶೀಲರಾಗಿ ಲೋಕದ ಹಿತ ಕಾಪಾಡುವುದು. "ಇನ್ನು ಜಂಗಮವೇ ಲಿಂಗವೆಂದು ನಂಬಿದೆ" ಎಂದು ಬಸವಣ್ಣನವರು ಹೇಳಿದ್ದಾರೆ. ಇಷ್ಟಲಿಂಗದ ಮೂಲಕ ಅರಿವು ಪಡೆದವರು ಜಂಗಮಲಿಂಗವೆಂಬ ಸಮಾಜದಲ್ಲಿ ಆಚರಣೆಗೆ ತರುತ್ತಾರೆ. ಇಷ್ಟಲಿಂಗವು ಆತ್ಮಶಕ್ತಿಯನ್ನು ಹೆಚ್ಚಿಸುವ ಗರಡಿಮನೆಯಂತೆ ಇದೆ. ಆದರೆ ಅಲ್ಲಿ ಶಕ್ತಿಯನ್ನು ಪಡೆದಾತ ಜಂಗಮಲಿಂಗವೆಂಬ ಜಗತ್ತಿನ ಅಖಾಡಾದಲ್ಲಿ ಸತ್ಯದ ಗೆಲವಿಗಾಗಿ ಹೋರಾಟವನ್ನು ಮಾಡಲೇಬೇಕು.

ಚಳವಳಿಯ ಶಕ್ತಿ:

ಶರಣರು ಎಲ್ಲ ತೆರನಾದ ಅನ್ಯಾಯಗಳ ವಿರುದ್ಧ ಚಳವಳಿ ಹೂಡುವ ಸಾಮರ್ಥ್ಯವನ್ನು ಹೊಂದಿದ್ದರು. "ಲಿಂಗಾರ್ಚನೆ ಮಾಡುವ ಮಹಿಮರೆಲ್ಲ ಸಲುಗೆಯಿಂದ ಒಳಗೈದಾರೆ. ಆನು ದೇವಾ ಹೊರಗಣವನು, ನಿಮ್ಮ ನಾಮವಿಡಿದ ಅನಾಮಿಕ ನಾನು. ಸಂಬೋಳಿ ಸಂಬೋಳಿ ಎಂದು ಇಂಬಿನಲ್ಲಿ ಇದ್ದೇನೆ." ಎಂಬ ಬಸವಣ್ಣನವರ ವಚನ ಚಳವಳಿಯ ಸಂಕೇತವಾಗಿದೆ. ಬಸವಪೂರ್ವ ಜಗತ್ತಿನಲ್ಲಿ ಯಾವುದೇ ಚಳವಳಿ ನಡೆದ ದಾಖಲೆಗಳಿಲ್ಲ. ಅಲ್ಲಿಯ ವರೆಗೆ ಜಗತ್ತಿನಲ್ಲಿ ಅನ್ಯಾಯದ ಯುದ್ಧಗಳಾಗುತ್ತಿದ್ದವು. ಹಾಗೆಯೆ ಅವುಗಳ ವಿರುದ್ಧ ನ್ಯಾಯದ ಯುದ್ಧಗಳಾಗುತ್ತಿದ್ದವು. ಜಗತ್ತಿಗೆ ಚಳವಳಿಯ ಪಾಠ ಕಲಿಸಿದವರೇ ಬಸವಣ್ಣನವರು. ಶರಣರ ಚಳವಳಿಗಳು ಸತ್ಯ ಮತ್ತು ಅಹಿಂಸೆಯ ನೆಲೆಯಲ್ಲಿ ನಡೆದವು.

ಶಿವಾಲಯದ ಗರ್ಭಗುಡಿಯೊಳಗೆ ಮಹಿಮರು (ಬಸವಣ್ಣನವರ ವ್ಯಂಗದ ರೀತಿಯಿದು. ಇದರರ್ಥ ಮಹಾಜನರೆಂದು ಕರೆಯಲಾಗುವ ಪಟ್ಟಭದ್ರ ಹಿತಾಸಕ್ತಿಗಳು) ಲಿಂಗಾರ್ಚನೆಗಾಗಿ ಸಲುಗೆಯಿಂದ ದೇವರು ನಮ್ಮಂಥವರಿಗೆ ಮಾತ್ರ ಎನ್ನುವ ರೀತಿಯಲ್ಲಿ ನಿಂತಿದ್ದಾರೆ. ಆದರೆ ದೇವರೇ ನಾನು ಹೊರಗಣವನು ಎಂದು ಬಸವಣ್ಣನವರು ಹೇಳುತ್ತಾರೆ. ಹೊರಗಣವನು ಎಂದರೆ ಗುಡಿಯ ಪ್ರವೇಶಕ್ಕೆ ಹೊರತಾದ ಅಸ್ಪೃಶ್ಯನು. ಬ್ರಾಹ್ಮಣ ಕುಲದಲ್ಲಿ ಜನಿಸಿದರೂ ಅಲ್ಲಿನ ತಾರತಮ್ಯವನ್ನು ಧಿಕ್ಕರಿಸಿದ ಬಸವಣ್ಣನವರು ಮಾನಸಿಕವಾಗಿ ಕೆಳಜಾತೀಕರಣಕ್ಕೆ ಒಳಗಾಗಿ ದಲಿತರು ಮತ್ತು ಇತರೆ ಕಾಯಕಜೀವಿಗಳ ಉದ್ಧಾರಕ್ಕಾಗಿ ತಮ್ಮ ಬದುಕನ್ನೇ ಪಣಕ್ಕಿಡುತ್ತಾರೆ. ಯಾವುದೇ ಅಹಂಕಾರಕ್ಕೆ ಒಳಗಾಗದ ಬಸವಣ್ಣನವರು 'ನಿಮ್ಮ ನಾಮವಿಡಿದ ಅನಾಮಿಕ' ಎಂದು ಹೇಳುವಲ್ಲಿ ಮತ್ತೆ ತಮ್ಮನ್ನು ಅಸ್ಪೃಶ್ಯರೊಂದಿಗೆ ಗುರುತಿಸಿಕೊಳ್ಳುತ್ತಾರೆ. ವೈದಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯರು ಅನಾಮಿಕರಾಗಿಯೆ ಬದುಕಿದವರು ಎಂಬುದನ್ನು ಸೂಚಿಸುತ್ತಾರೆ. 'ಸಂಬೋಳಿ ಸಂಬೋಳಿ ಎಂದು ದೂರದಲ್ಲಿ ಇದ್ದೇನೆ' ಎಂದು ಒಳಗಿದ್ದವರಿಗೆ ಎಚ್ಚರಿಸುತ್ತಾರೆ.

ಅಸ್ಪೃಶ್ಯರು ಊರ ಒಳಗೆ ಬರುವ ಸಂದರ್ಭದಲ್ಲಿ ಬಳಸುವ ಸಂಬೋಳಿ ಪದವನ್ನೇ ಬಳಸುತ್ತಾರೆ. ಸಂಬೋಳಿ ಎಂಬುದಕ್ಕೆ ಎಚ್ಚರ ಎಂಬ ಅರ್ಥವೂ ಇರುವುದರಿಂದ ಈ ವಚನ ವಿಶಿಷ್ಟವಾದ ಚಳವಳಿಯನ್ನು ಸೂಚಿಸುತ್ತದೆ. ಬಸವಣ್ಣನವರು ಶಿವಾಲಯದ ಹೊರಗೆ ಅಸ್ಪೃಶ್ಯರ ಜೊತೆ ನಿಂತು ಅವರಿಗೆ ಮಾನಸಿಕ ಧೈರ್ಯ ತುಂಬುವ ಮತ್ತು ಒಳಗಿರುವ ಜನರ ಟೊಳ್ಳುತನವನ್ನು ಬಯಲಿಗೆಳೆಯುವ ಕ್ರಿಯೆಯನ್ನು ಈ ವಚನ ಒಳಗೊಂಡಿದೆ.

ಕ್ರಿಯಾಶಕ್ತಿ:

ಶರಣರಿಗೆ ಕಾಯಕವು ಜೀವನಗಾಥೆಯಂತೆ ಕಂಡಿತು. ಅವರಿಗೆ ಕಾಯಕವೇ ಕೈಲಾಸವಾಯಿತು. "ಸಾಕ್ಷಾತ್ ಅಮರೇಶ್ವರ ಲಿಂಗವಾದಡೂ ಕಾಯಕದೊಳಗು" ಎಂದು ಆಯ್ದಕ್ಕಿ ಮಾರಯ್ಯನವರು ಹೇಳಿದ್ದಾರೆ. ಅವರು ದುಡಿಮೆಯಲ್ಲೇ ದೇವರನ್ನು ಕಂಡರು. ಆ ದುಡಿಮೆಯ ಫಲವನ್ನು ಲೋಕಕಲ್ಯಾಣಕ್ಕಗಿ ಬಳಸಿದರು. ಅವರು ಕೂಡಿಡುವ ದುಃಖಕ್ಕೆ ಬಲಿಯಾಗಲಿಲ್ಲ. ಆದರೆ ದಾಸೋಹದ ಮೂಲಕ ಕೊಡುವುದರಲ್ಲಿ ಆನಂದ ಪಟ್ಟರು. ಕಲ್ಯಾಣವನ್ನು ಸಮೃದ್ಧಿಯ ದೇಶವಾಗಿಸಿದರು. ಬಿಜ್ಜಳ ದೊರೆಯ ಬೊಕ್ಕಸವನ್ನೂ ತುಂಬಿಸಿದರು. ಶರಣರ ಈ ಕ್ರಿಯಾಶಕ್ತಿ ಭರತಖಂಡದ ವಿವಿಧ ದೇಶ ಮತ್ತು ಪ್ರದೇಶಗಳ ಜನರನ್ನು ಆಕರ್ಷಿಸಿತು. ವಿವಿಧ ತತ್ತ್ವ ಸಿದ್ಧಾಂತಗಳ ಜನರು ಕೂಡ ಬಂದು ಇಷ್ಟಲಿಂಗದ ಆರಾಧಕರಾದರು.

ತನ್ನ ತಾ ಅರಿಯುವ ಶಕ್ತಿ:

ಸೃಷ್ಟಿಕರ್ತ ಮತ್ತು ಸೃಷ್ಟಿಯ ಕುರಿತು ಇಷ್ಟಲಿಂಗಯೋಗಿ ಅರಿವು ಪಡೆದ ಮೇಲೆ ಪರಮಾತ್ಮ ಮತ್ತು ಲೋಕಾತ್ಮಗಳ ಜೊತೆ ತನ್ನ ಸಂಬಂಧವನ್ನು ಕಲ್ಪಿಸಿಕೊಳ್ಳುತ್ತಾನೆ. ವಿಶ್ವಚೈತನ್ಯದ ಒಂದು ಕಣವಾದ ತಾನು ಶಿವಸ್ವರೂಪಿ ಎಂಬ ಸತ್ಯದ ಸಾಕ್ಷಾತ್ಕಾರವಾದ ಮೇಲೆ ಸಕಲಜೀವಾತ್ಮರಿಗೆ ಲೇಸನೆ ಬಯುಸುವುದು ಮತ್ತು ಅದಕ್ಕಾಗಿ ಕಾರ್ಯೋನ್ಮುಖವಾಗುವುದು ತನ್ನ ಆದ್ಯ ಕರ್ತವ್ಯ ಎಂದು ಭಾವಿಸುತ್ತಾನೆ. "ಅರಿವೆ ಗುರು, ಆಚಾರವೆ ಶಿಷ್ಯ, ಜ್ಞಾನವೆ ಲಿಂಗ, ಪರಿಣಾಮವೆ ತಪ, ಸಮತೆಯೆಂಬುದೆ ಯೋಗದಾಗು ನೋಡಾ." ಎಂದು ಹಾವಿನಾಳ ಕಲ್ಲಯ್ಯನವರು ಹೇಳಿದ್ದು ಮನೋಜ್ಞವಾಗಿದೆ. ಲಿಂಗಾಯತ ಧರ್ಮದ ಅಂತಿಮ ಗುರಿ ಸಮತಾವಾದವೇ ಆಗಿದೆ.

"ಅರ್ಥರೇಖೆ ಇದ್ದಲ್ಲಿ ಫಲವೇನು ಆಯುಷ್ಯರೇಖೆ ಇಲ್ಲದನ್ನಕ್ಕರ?
ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದಲ್ಲಿ ಫಲವೇನು?
ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು?

ಮರ್ಕಟನ ಕೈಯಲ್ಲಿ ಮಾಣಿಕವಿದ್ದು ಫಲವೇನು?
ನಮ್ಮ ಕೂಡಲಸಂಗನ ಶರಣರನರಿದಯದವರ ಕೈಯಲ್ಲಿ
ಲಿಂಗವಿದ್ದು ಫಲವೇನು? ಶಿವಪಥವನರಿಯದನ್ನಕ್ಕ."

ಧರ್ಮದ ಅಂತಿಮ ಗುರಿಯನ್ನು ಅರಿಯದೆ ಲಿಂಗಪೂಜೆ ವ್ಯರ್ಥ ಎಂದು ಬಸವಣ್ಣನವರು ಈ ವಚನದಲ್ಲಿ ತಿಳಿಸಿದ್ದಾರೆ. ಶಿವಪಥವು ಸಮತೆಯ ಪಥವಾಗಿದೆ. ಹೇಡಿಗಳ ಕೈಯಲ್ಲಿ ಚಂದ್ರಾಯುಧ ನಿಷ್ಪ್ರಯೋಜಕವಾಗಿರುತ್ತದೆ. ಅದೇ ರೀತಿ ಮಾನವಕುಲದಲ್ಲಿ ಏಕತೆ ಮತ್ತು ಸಮಾನತೆ ಬಯಸದವನ ಕೈಯಲ್ಲಿ ಲಿಂಗವಿದ್ದೂ ನಿಷ್ಪ್ರಯೋಜಕ.

"ಎರೆದಡೆ ನನೆಯದು, ಮರೆದಡೆ ಬಾಡದು
ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ
ಕೂಡಲಸಂಗಮದೇವಾ ಜಂಗಮಕ್ಕೆರೆದಡೆ ಸ್ಥಾವರ ನನೆಯಿತು." ಎಂದು ಬಸವಣ್ಣನವರು ಹೇಳುವಲ್ಲಿ ಜಂಗಮ (ಸಮಾಜ) ಸೇವೆಯೆ ಪ್ರಮುಖವಾಗಿದೆ. ಸಕಲಜೀವಿಗಳ ಏಳ್ಗೆಯ ಉದ್ದೇಶದಿಂದ ಕಾರ್ಯೋನ್ಮುಖವಾಗದಿದ್ದರೆ ಇಷ್ಟಲಿಂಗ ಪೂಜೆಯು ನಿಷ್ಪ್ರಯೋಜಕ ಪೂಜೆಯಾಗುತ್ತದೆ.

ಪರಿವರ್ತನಾ ಶಕ್ತಿ:

ಲಿಂಗಾಂಗಸಾಮರಸ್ಯದ ಅರಿವು ಮಾನವನನ್ನು ಐಹಿಕ ಆಸೆಗಳಿಂದ ಮುಕ್ತಗೊಳಿಸಿ ಇಡೀ ಮಾನವಕುಲವನ್ನು ಸರ್ವೋದಯದ ಕಡೆಗೆ ಒಯ್ಯುವಂಥ ಪರಿವರ್ತನಾ ಸಾಮರ್ಥ್ಯವನ್ನು ಹೊಂದಿದೆ. ಪರಿವರ್ತನೆಯು ನಿಸರ್ಗದ ನಿಯಮವಾಗಿದೆ. ಬಸವಧರ್ಮವು ಪರಿವರ್ತನಾ ಪ್ರಧಾನ ಧರ್ಮವಾಗಿದ್ದರಿಂದ ಈ ಧರ್ಮವನ್ನು ನಿಸರ್ಗಧರ್ಮ ಎಂದೂ ಕರೆಯಬಹುದು. ಕಾಯಕವು ನಿಸರ್ಗ ನಿಯಮದ ಮೂಲಾಧಾರವಾಗಿದೆ. ಎಲ್ಲ ಚರಾಚರ ವಸ್ತುಗಳ ಮತ್ತು ಜೀವಿಗಳು ಸದಾ ಕಾಯಕನಿರತವಾಗಿರುತ್ತವೆ. ಯಾವುದು ಕಾಯಕ ಮಾಡುವುದಿಲ್ಲವೊ ಅದಕ್ಕೆ ಅಸ್ತಿತ್ವದಲ್ಲಿರುವ ಹಕ್ಕಿಲ್ಲ. ಹಣ್ಣೆಲೆಯು ದ್ಯುತಿಸಂಶ್ಲೇಷಣೆ ಮಾಡುವುದನ್ನು ನಿಲ್ಲಿಸಿದಾಗ ಮರವು ಅದನ್ನು ತ್ಯಜಿಸುತ್ತದೆ. ಇದಕ್ಕೆ ಕಾರ್ಲ್ ಮಾರ್ಕ್ಸ್ 'ನಿಷೇಧದ ನಿಷೇಧ' ಎಂದು ಕರೆದಿದ್ದಾರೆ. ನಿಸರ್ಗದಲ್ಲಿ ಯಾವುದು ಕ್ರಿಯಾಶೀಲವಾಗಿಲ್ಲವೋ ಅದಕ್ಕೆ ಸ್ಥಾನವಿಲ್ಲ.

ಮೂರು ಅವಸ್ಥೆಗಳ ಧರ್ಮ:

ಲಿಂಗಾಯತ ಧರ್ಮವು ಮೂರು ಅವಸ್ಥೆಗಳಿಂದ ಕೂಡಿದ ಧರ್ಮವಾಗಿದೆ. ಇಡೀ ವಚನ ಸಾಹಿತ್ಯ ಈ ಮೂರು ಅವಸ್ಥೆಗಳ ವಿವರಣೆಗೆ ಮೀಸಲಾಗಿದೆ. 12ನೇ ಶತಮಾನದ ವಚನಕಾರರು ವಚನಗಳ ರಚನೆ ಮಾಡಿದರು ಹೊರತಾಗಿ ವಿವಿಧ

ಅವಸ್ಥೆ ಮತ್ತು ಸ್ಥಲಗಳ ವಚನಗಳೆಂದು ಬರೆದಿಲ್ಲ. ಆದರೆ 15ನೇ ಶತಮಾನದ ಸಂಕಲನಕಾರರು ವಿವಿಧ ಸ್ಥಲಗಳ ವಚನಗಳನ್ನು ವಿಂಗಡಿಸಿ ವಚನಕಟ್ಟುಗಳನ್ನು ಸಿದ್ಧಪಡಿಸಿದರು. ಬಸವಣ್ಣ, ಅಲ್ಲಮಪ್ರಭು ಮತ್ತು ಚೆನ್ನಬಸವಣ್ಣನವರ ವಚನಗಳನ್ನು ಮಾತ್ರ ಷಟ್‌ಸ್ಥಲಗಳಲ್ಲಿ ವಿಂಗಡಿಸಲಾಗಿದೆ. ಸಿದ್ಧರಾಮೇಶ್ವರರ ಷಟ್‌ಸ್ಥಲದ ವಚನಗಳು ಎಂದು ಹೇಳಿದ್ದರೂ ವಚನಗಳ ವಿಂಗಡನೆಯಾಗಿಲ್ಲ.

ಅಷ್ಟಾವರಣ, ಷಟ್‌ಸ್ಥಲ ಮತ್ತು ಪಂಚಾಚಾರಗಳೇ ಈ ಅವಸ್ಥೆಗಳು. ಮಾನವನನ್ನು ಶರಣನಾಗಿಸುವ ಮೂಲಕ ವಿಶ್ವಮಾನವ ಪ್ರಜ್ಞೆಯನ್ನು ಮೂಡಿಸುವಲ್ಲಿ ಈ ಅವಸ್ಥೆಗಳ ಪಾತ್ರ ಹಿರಿದಾಗಿದೆ.

ಅಷ್ಟಾವರಣ:

ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಇವು ಅಷ್ಟ ಆವರಣಗಳು. ಮಾನವನ ಮನಸ್ಸು ಐಹಿಕ ಆಕರ್ಷಣೆಗಳಿಂದ ಕಲುಷಿತವಾಗದಂತೆ ಈ ಎಂಟು ಆವರಣಗಳು ರಕ್ಷಾಕವಚಗಳಂತೆ ತಡೆಯುತ್ತವೆ. ಇವು ಮನಸ್ಸಿನ ಕೋಟೆಗಳು ಅಥವಾ ಹೊದಿಕೆಗಳು. ಇವುಗಳಿಂದಾಗಿ ಮನಸ್ಸಿನ ಮೇಲೆ ಬಾಹ್ಯ ಆಕರ್ಷಣೆಗಳ ಪ್ರಭಾವ ಬೀಳುವುದಿಲ್ಲ. ಬಿತ್ತನೆಗಾಗಿ ಬೀಜಗಳನ್ನು ಸಿದ್ಧಪಡಿಸುವ ಬೀಜೋಪಚಾರದಂತೆ ಮನಸ್ಸನ್ನು ಸಿದ್ಧಪಡಿಸುವ ಕಾರ್ಯ ಅಷ್ಟಾವರಣಗಳಲಿ ನಡೆಯುತ್ತದೆ. ಅರಿವೆ ಗುರು, ವಿಶ್ವತತ್ತ್ವವೇ ಲಿಂಗ, ಚರಾಚರಗಳಿಂದ ಕೂಡಿದ ಸೃಷ್ಟಿಯೆ ಜಂಗಮ, ಲಿಂಗಕ್ಕೆ ಮಜ್ಜನಕ್ಕೆರೆದುದು ಪಾದ (ಜ್ಞಾನ) ಉದಕ. ಪ್ರಸಾದಕಾಯ ಮೊದಲು ಮಾಡಿ ಜೀವಿಸಲಿಕ್ಕೆ ಬೇಕಾದುದೆಲ್ಲವೂ ದೇವರು ಕೊಟ್ಟಿರುವುದೇ ಪ್ರಸಾದ. ಶೂನ್ಯದಿಂದ ಬಂದ ವಿಶ್ವ ಮತ್ತೆ ಆ ಚೈತನ್ಯರೂಪಿ ಶೂನ್ಯವನ್ನೇ ಸೇರುವಂಥ ಅಂತಿಮ ಸತ್ಯದ ಪ್ರಜ್ಞೆ ಮೂಡಿಸುವುದು ವಿಭೂತಿ. ಒಳನೋಟಗಳ ಸಂಕೇತವೇ ರುದ್ರಾಕ್ಷಿ. ಸತ್ಯ, ಮಂಗಳಕರ (ಶಿವ) ಮತ್ತು ಸುಂದರವಾದುದನ್ನು ಜಪಿಸುವುದೇ ಮಂತ್ರ. ಹೀಗೆ ಅಷ್ಟಾವರಣಗಳಿಂದ ಮನಸ್ಸು ಸಂಸ್ಕಾರಗೊಳ್ಳುತ್ತದೆ.

"ಗುರು ತನ್ನ ವಿನೋದಕ್ಕೆ ಗುರುವಾದ
ಗುರು ತನ್ನ ವಿನೋದಕ್ಕೆ ಲಿಂಗವಾದ
ಗುರು ತನ್ನ ವಿನೋದಕ್ಕೆ ಜಂಗಮವಾದ
ಗುರು ತನ್ನ ವಿನೋದಕ್ಕೆ ಪಾದೋದಕವಾದ
ಗುರು ತನ್ನ ವಿನೋದಕ್ಕೆ ಪ್ರಸಾದವಾದ
ಗುರು ತನ್ನ ವಿನೋದಕ್ಕೆ ವಿಭೂತಿಯಾದ
ಗುರು ತನ್ನ ವಿನೋದಕ್ಕೆ ರುದ್ರಾಕ್ಷಿಯಾದ
ಗುರು ತನ್ನ ವಿನೋದಕ್ಕೆ ಮಹಾಮಂತ್ರವಾದ.

ಇಂತೀ ಭೇದವನರಿಯದೆ,
ಗುರು ಲಿಂಗ ಜಂಗಮ ಪಾದತೀರ್ಥ ಪ್ರಸಾದ ವಿಭೂತಿ ರುದ್ರಾಕ್ಷಿ
ಓಂ ನಮಃ ಶಿವಾಯಯೆಂಬ ಮಂತ್ರವ ಬೇರಿಟ್ಟು ಅರಿಯಬಾರದು.
ಅದಲ್ಲದೆ ಒಂದರಲ್ಲಿಯೂ ವಿಶ್ವಾಸ ಬೇರಾದಡೆ
ಅಂಗೈಯಲ್ಲಿದ್ದ ಲಿಂಗವು ಜಾರಿತ್ತು.
ಮಾಡಿದ ಪೂಜೆಗೆ ಕಿಂಚಿತ್ತು ಫಲಪದವಿಯ ಕೊಟ್ಟು
ಭವಹೇತುಗಳ ಮಾಡುವನಯ್ಯಾ.
ಇಷ್ಟಲಿಂಗದಲ್ಲಿ ನೈಷ್ಠೆ ನಟ್ಟು ಬಿಟ್ಟು ತ್ರಿವಿಧವ ಮರಳಿ ಹಿಡಿಯದೆ
ವಿರಕ್ತನಾದನಯ್ಯಾ ಗುರು ಚೆನ್ನಮಲ್ಲಿಕಾರ್ಜುನಾ"

ಅಕ್ಕ ಮಹಾದೇವಿ ಈ ವಚನದ ಮೂಲಕ ಶಿವನ ಲೀಲೆಯನ್ನು ಅರಿತುಕೊಳ್ಳಲು ಸೂಚಿಸುತ್ತಾಳೆ.

ಷಟ್‌ಸ್ಥಲ:

ಹೀಗೆ ಅಷ್ಟಾವರಣದಿಂದ ಸಂಪೂರ್ಣ ಸಂಸ್ಕಾರ ಹೊಂದಿದ ಮನಸ್ಸು ಷಟ್‌ಸ್ಥಲಗಳೆಂಬ ಮಾನಸಿಕ ವಿಕಾಸದ ಸ್ಥಲಗಳ ಕಡೆಗೆ ಹೊರಳುತ್ತದೆ. ಇದುವೇ ಲಿಂಗವಂಥ ಧರ್ಮದ ವ್ಯಕ್ತಿತ್ವ ವಿಕಸನ ವ್ಯವಸ್ಥೆ. ನರಜನ್ಮದಿಂದ ಹರಜನ್ಮಕ್ಕೆ ಒಯ್ಯುವ ಪರಿ ಇದು. ಅಂದರೆ ಮಾನವನು ವಿಶ್ವಮಾನವನಾಗುತ್ತ ಶಿವಸ್ವರೂಪಿಯಾಗುವ ಕ್ರಮ.

ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಎಂಬ ಷಟ್‌ಸ್ಥಲಗಳಲ್ಲದೆ ನಿರವಯಸ್ಥಲವೆಂಬ ಸಪ್ತಸ್ಥಲದ ಬಗ್ಗೆಯೂ ಬಸವಣ್ಣನವರು ಹೇಳುತ್ತಾರೆ. ಮೂಲದಲ್ಲಿ ಶೂನ್ಯದಿಂದ ಬಂದದ್ದು ಕೊನೆಯಲ್ಲಿ ಶೂನ್ಯವನ್ನೇ ಸೇರುವುದಕ್ಕೆ ಸಂಬಂಧಿಸಿದಂತೆ ಸಪ್ತಸ್ಥಲವಾದ ನಿರವಯ ಸ್ಥಲವನ್ನು ಬಸವಣ್ಣನವರು ಈ ವಚನದಲ್ಲಿ ಪ್ರಸ್ತಾಪಿಸಿದ್ದಾರೆ.

"ಮೆಲ್ಲಮೆಲ್ಲನೆ ಭಕ್ತನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಮಾಹೇಶ್ವರನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಪ್ರಸಾದಿ ಎನಿಸಿಕೊಂಬೆ
ಮೆಲ್ಲಮೆಲ್ಲನೆ ಪ್ರಾಣಲಿಂಗಿ ಎನಿಸಿಕೊಂಬೆ,
ಮೆಲ್ಲಮೆಲ್ಲನೆ ಶರಣನೆನಿಸಿಕೊಂಬೆ,
ಮೆಲ್ಲಮೆಲನೆ ಐಕ್ಯನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಷಟ್‌ಸ್ಥಲವ ಮೀರಿ
ನಿರವಯಸ್ಥಲವನೆಯ್ದುವೆನಯ್ಯಾ
ಕೂಡಲಸಂಗಮದೇವಾ."

ಅಲ್ಲಮಪ್ರಭುಗಳು ಷಟ್‌ಸ್ಥಲಗಳ ಹೀಗೆ ವಿವರಿಸಿದ್ದಾರೆ:

"ವಿಶ್ವಾಸದಿಂದ ಭಕ್ತನಾಗಿ, ಆ ವಿಶ್ವಾಸದೊಳಗಿನ ನೈಷ್ಠೆಯಿಂದ ಮಹೇಶ್ವರನಾಗಿ,
ಆ ನೈಷ್ಠೆಯೊಳಗಣ ಸಾವಧಾನದಿಂದ ಪ್ರಸಾದಿಯಾಗಿ,
ಆ ಸಾವಧಾನದೊಳಗಣ ಸ್ವಾನುಭವದಿಂದ ಪ್ರಾಣಲಿಂಗಿಯಾಗಿ,
ಆ ಸ್ವಾನುಭಾವದೊಳಗಣ ಅರಿವಿನಿಂದ ಶರಣನಾಗಿ,
ಆ ಅರಿವು ನಿಜದಲ್ಲಿ ಸಮರಸಭಾವವನ್ನೈದಿ ನಿರ್ಭಾವ ಪದದೊಳು ನಿಂದ ಭೇದವೇ
ಐಕ್ಯಸ್ಥಲ ಕಾಣಾ ಗುಹೇಶ್ವರಾ."

ಮಾನವರು ಶಿವಸ್ವರೂಪಿಯಾಗುವಂಥ ವ್ಯಕ್ತಿತ್ವ ವಿಕಸನದ ಸ್ಪಷ್ಟರೂಪವನ್ನು ಅಲ್ಲಮಪ್ರಭುಗಳು ಈ ವಚನದಲ್ಲಿ ವಿವರಿಸಿದ್ದಾರೆ.

ಪಂಚಾಚಾರ:

ಮಾನವರು ಶಿವಸ್ವರೂಪಿಗಳಾದ ಮೇಲೆ ವ್ಯಕ್ತಿತ್ವ ವಿಕಸನದ ಅಂತಿಮ ಘಟ್ಟವನ್ನು ತಲುಪಿದಂತಾಗಲಿಲ್ಲ. ಇದುವೆ ಲಿಂಗಾಯತ ಧರ್ಮದ ವೈಶಿಷ್ಟ್ಯವಾಗಿದೆ. ಆತ ಪರಿಪೂರ್ಣನಾಗುವುದು ಕಾಯಕ, ಪ್ರಸಾದ ಮತ್ತು ದಾಸೋಹ ಪ್ರಜ್ಞೆಯನ್ನು ಕ್ರಿಯೆಗೆ ಇಳಿಸುವ ಮೂಲಕ ಪಂಚ ಆಚಾರಗಳನ್ನು ಪಾಲಿಸಿದಾಗ ಮಾತ್ರ. ಇಷ್ಟಲಿಂಗದ ಮೂಲಕ ಏಕದೇವೋಪಾಸನೆ ಮಾಡುವುದು ಲಿಂಗಾಚಾರ. ಸತ್ಯಶುದ್ಧ ಕಾಯಕದಿಂದ ಬಂದುದನ್ನು ದೇವರು ಕೊಟ್ಟ ಪ್ರಸಾದವೆಂದು ಸ್ವೀಕರಿಸಿ ಜ್ಞಾನಕ್ಕೆ, ಧರ್ಮಕ್ಕೆ ಮತ್ತು ಸಮಾಜಕ್ಕೆ ಕೂಡ ವಿನಿಯೋಗಿಸುವುದು ಸದಾಚಾರ. ಜಾತ್ಯತೀತನಾಗಿ ಬದುಕುವುದೇ ಶಿವಾಚಾರ. ಧರ್ಮದ ತತ್ತ್ವಗಳು ನಿಂದನೆಗೆ ಒಳಗಾಗದಂತೆ ನೋಡಿಕೊಳ್ಳುವುದೇ ಗಣಾಚಾರ. ತಾನು ಎಲ್ಲರಿಗಿಂತ ಕಿರಿಯ ಎಂದು ಭಾವಿಸುತ್ತ ಅಹಂಕಾರ ಮುಕ್ತನಾಗಿ ಸೇವಾಭಾವ ತಾಳುವುದೇ ಭೃತ್ಯಾಚಾರ. ಹೀಗೆ ಮಾನವ ಬೆಳವಣಿಗೆ ಹೊಂದುತ್ತ ಕೊನೆಯಲ್ಲಿ ಸಮಾಜಸೇವೆ ಮಾಡುವುದೇ ಲಿಂಗಾಯತ ಧರ್ಮ ಕಲಿಸುವ ಪಾಠವಾಗಿದೆ. ಈ ವಿಚಾರವನ್ನು ಚೆನ್ನಬಸವಣ್ಣನವರು ಕೆಳಗಿನ ವಚನದಲ್ಲಿ ಮನೋಜ್ಞವಾಗಿ ತಿಳಿಸಿದ್ದಾರೆ.

"ಲಿಂಗಾಚಾರ ಸದಾಚಾರ ಶಿವಾಚಾರ ಗಣಾಚಾರ ಭೃತ್ಯಾಚಾರವೆಂಬ
ಪಂಚಾಚಾರದ ಆಚರಣೆಯೆಂತೆಂದಡೆ:
ಲಿಂಗವಲ್ಲದೆ ಅನ್ಯವನರಿಯದಿಹುದೆ ಲಿಂಗಾಚಾರ.
ಸಜ್ಜನ ಕಾಯಕದಲ್ಲಿ ತಂದು ಗುರು ಲಿಂಗ ಜಂಗಮಕ್ಕೆ ನೀಡಿ
ಸತ್ಯಶುದ್ಧನಾಗಿಹುದೆ ಸದಾಚಾರ.

ಶಿವಭಕ್ತರಲ್ಲಿ ಕುಲ ಗೋತ್ರ ಜಾತಿ ವರ್ಣಾಶ್ರಮವನರಸದೆ
ಅವರೊಕ್ಕುದ ಕೊಂಬುದೆ ಶಿವಾಚಾರ,
ಶಿವಾಚಾರದ ನಿಂದೆಯ ಕೇಳದಿಹುದೆ ಗಣಾಚಾರ.
ಶಿವಶರಣರೆ ಹಿರಿಯರಾಗಿ ತಾನೆ ಕಿರಿಯನಾಗಿ
ಭಯಭಕ್ತಿಯಿಂದ ಆಚರಿಸುವುದೆ ಭೃತ್ಯಾಚಾರ.
ಇಂತೀ ಪಂಚಾಚಾರವುಳ್ಳ ಪರಮಸದ್ಭಕ್ತರ ಒಕ್ಕುದನಿಕ್ಕಿ ಸಲಹಯ್ಯಾ
ಪ್ರಭುವೆ ಕೂಡಲಚೆನ್ನಸಂಗಮದೇವಾ."

ಅಷ್ಟಾವರಣದಲ್ಲಿ ಮನಸ್ಸು ಹದಗೊಂಡು ವಸ್ತುಮೋಹಕ್ಕೆ ಒಳಗಾಗದಂಥ ಸಾಮರ್ಥ್ಯ ಪಡೆಯುವುದು. ಯಾವುದೇ ವಸ್ತು ನನ್ನದಲ್ಲ ಎಂಬ ಭಾವ ಮೂಡುವುದು. ಅದೇ ಮನಸ್ಸು ಷಟ್‌ಸ್ಥಲದಲ್ಲಿ ಸಕಲ ಜೀವಾತ್ಮರಿಗೆ ಲೇಸನೆ ಬಯಸುವಷ್ಟು

ವಿಕಸನಗೊಳ್ಳುತ್ತ ಹೋಗುವುದು. ಮುಂದೆ ಪಂಚಾಚಾರದಲ್ಲಿ, ಹಿಂದಿನ ಎರಡು ಅವಸ್ಥೆಗಳಲ್ಲಿ ಪಡೆದ ಅರಿವನ್ನು ಆಚರಣೆಗೆ ಇಳಿಸುವುದು.

ಈ ಆಚರಣೆಯ ಅಂತರಾಳವೆಂದರೆ 'ನನ್ನದಲ್ಲ ಎಂದು ಭಾವಿಸುವ ವಸ್ತು ನಮ್ಮೆಲ್ಲರದು' ಎಂದು ಪರಿಗಣಿಸಿ ಲೋಕಮುಖಿಯಾಗುವುದು. ಇದುವೆ ಮಾನವರಲ್ಲಾಗುವ ದೊಡ್ಡ ಪರಿವರ್ತನೆ. ಹೀಗೆ ಶರಣರು ಸ್ವಂತಕ್ಕೆ ಏನನ್ನೂ ಬಯಸಲಿಲ್ಲ ಆದರೆ ಈ ಭೂಮಿಯ ಸಕಲ ಸಂಪತ್ತು ಸರ್ವರಿಗೂ ಸಮನಾಗಿ ಸೇರಿದ್ದು ಎಂಬುದನ್ನು ಪ್ರತಿಪಾದಿಸಿದರು. 'ಎಲ್ಲವೂ ಎಲ್ಲರಿಗಾಗಿ' ಎಂಬುದು ಬಸವದರ್ಶನವಾಗಿದೆ.

ಭಕ್ತಿ ಇಲ್ಲದ ಬಡವ:

ಬಸವಣ್ಣನವರು ತಮ್ಮನ್ನು ಭಕ್ತಿ ಇಲ್ಲದ ಬಡವ ಎಂದು ಕರೆದುಕೊಂಡಿದ್ದಾರೆ. ಅವರೇಕೆ ಹೀಗೆ ಹೇಳಿದರು ಎಂದರೆ ಹೊಸ ಜೀವನಸಿದ್ಧಾಂತವನ್ನು ರೂಪಿಸಲು ಹೀಗೆ ಭಾವಿಸುವುದು ಅವಶ್ಯವಾಗಿತ್ತು.

"ಭಕ್ತಿ ಇಲ್ಲದ ಬಡವ ನಾನಯ್ಯ
ಕಕ್ಕಯ್ಯನ ಮನೆಯಲ್ಲೂ ಬೇಡಿದೆ
ಚೆನ್ನಯ್ಯನ ಮನೆಯಲ್ಲೂ ಬೇಡಿದೆ
ದಾಸಯ್ಯನ ಮನೆಯಲ್ಲೂ ಬೇಡಿದೆ
ಎಲ್ಲ ಪುರಾತರು ನೆರೆದು ಭಕ್ತಿಭಿಕ್ಷವನಿಕ್ಕೆದಡೆ
ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವಾ."

ಜನರ ಅನುಭವದ ಆಧಾರದ ಮೇಲೆಯೆ ಹೊಸ ದರ್ಶನವನ್ನು ಬಸವಣ್ಣನವರು ಜಗತ್ತಿಗೆ ನೀಡಿದರು. ಬಡವರ ಜೀವನಾನುಭವ ಮೇಲೆ ವಿಶ್ವದಲ್ಲಿ ಮೊದಲ ಬಾರಿಗೆ ರೂಪುಗೊಂಡ ದರ್ಶನವೆಂದರೆ ಅನುಭಾವ ದರ್ಶನ. ಇದು ಬಸವಣ್ಣನವರು

ಜಗತ್ತಿಗೆ ಕೊಟ್ಟ ಬಹುದೊಡ್ಡ ಕಾಣಿಕೆಯಾಗಿದೆ. ಜಗತ್ತಿನ ಬಹುಸಂಖ್ಯಾತರಾದ ಬಡವರ ದರ್ಶನವಿದು. ವಿವಿಧ ಕಾಯಕಜೀವಿಗಳ ಅನುಭವದ ಆಧಾರದ ಮೇಲೆ ಅನುಭಾವ ದರ್ಶನವನ್ನು ಬಸವಣ್ಣನವರು ಕಂಡುಹಿಡಿದರು. ಜಗತ್ತನ್ನು ಶೋಷಣೆಯಿಂದ ಮುಕ್ತ ಮಾಡುವಲ್ಲಿ ಅನುಭಾವ ದರ್ಶನ ಪಾತ್ರ ಬಹುಮುಖ್ಯವಾಗಿದೆ. ದುಡಿಯುವ ವರ್ಗದ ಶಕ್ತಿಯನ್ನು ಪ್ರದರ್ಶಿಸುವ ದರ್ಶನವಿದು.

ಈ ವಚನದಲ್ಲಿ ಬಸವಣ್ಣನವರು ಭಕ್ತಿ ಶಬ್ದವನ್ನು ನಿಜದ ನಿಲವಿಗೆ ಪರ್ಯಾಯವಾಗಿ ಬಳಸಿದ್ದಾರೆ. ಇದರ ಅನುಭವಕ್ಕಾಗಿ ದುಡಿಯುವ ವರ್ಗದ ಜೀವನಕ್ರಮವನ್ನು ಅವರು ಬಹಳ ಚೆನ್ನಾಗಿ ಅಭ್ಯಸಿಸಿದರು. ಹೀಗೆ ಎಲ್ಲ ಕಾಯಕಜೀವಿಗಳ ಅನುಭವದ ಆಧಾರದ ಮೇಲೆ ಅನುಭಾವ ದರ್ಶನವನ್ನು ಸೃಷ್ಟಿಸಿದರು.

'ವೇದ ಶಾಸ್ತ್ರ ಆಗಮಂಗಳನೋದಿದವರು ಹಿರಿಯರೆ? ಕವಿ, ಗಮಕಿ, ವಾದಿ, ವಾಗ್ಮಿಗಳು ಹಿರಿಯರೆ? ನಟನಿ, ಬಾಣ, ವಿಲಾಸಿ, ಸುವಿದ್ಯವ ಕಲಿತ ಡೊಂಬನೇನು ಕಿರಿಯನೆ?' ಎಂದು ಪ್ರಶ್ನಿಸುವ ಮೂಲಕ ದುಡಿಯುವ ವರ್ಗದ ಪ್ರತಿಭೆಯನ್ನು ಎತ್ತಿಹಿಡಿದರು.

ವೈದಿಕ ಸಿದ್ಧಾಂತದಲ್ಲಿ ದುಡಿಯುವ ವರ್ಗಕ್ಕೆ ಎಳ್ಳುಕಾಳಿನಷ್ಟೂ ಬೆಲೆ ಇಲ್ಲ. ಅವರನ್ನು ಸವರ್ಣೀಯರು ಹೇಗೆ ಶೋಷಣೆ ಮಾಡಬೇಕು ಎಂಬುದನ್ನು ತಿಳಿಸಿಕೊಡುವುದೇ ಅದರ ದುರುದ್ದೇಶವಾಗಿದೆ. ಬ್ರಾಹ್ಮಣ ಕುಲದಲ್ಲಿ ಜನಿಸಿದ್ದ ಬಸವಣ್ಣನವರು ಇದನ್ನೆಲ್ಲ ಅರಿತು ಹೊರಬಂದು ಇಂಥ ವಿಶ್ವಮಾನ್ಯವಾದ ದರ್ಶನವನ್ನು ನೀಡಿದರು. ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಸಮಾನತೆಯ ಕನಸು ಕೂಡ ಬಿದ್ದಿರದ ಸಂದರ್ಭದಲ್ಲಿ ಬಸವಣ್ಣನವರು ಅನುಭಾವ ದರ್ಶನದ ಮೂಲಕ ದುಡಿಯುವ ವರ್ಗವನ್ನು ರೂಪಿಸಿದರು. ಅವರದೇ ಆದ ಸಾಮಾಜೋ ಧಾರ್ಮಿಕ ಸಂಸತ್ ಅನ್ನು ಅನುಭವ ಮಂಟಪದ ಹೆಸರಿನಲ್ಲಿ ಸ್ಥಾಪಿಸಿದರು. ಜನರು ಮೂಗು ಮುರಿಯುವ ನಟುವರ ಜನಾಂಗದಿಂದ ಬಂದ ಮಹಾಜ್ಞಾನಿ ಅಲ್ಲಮಪ್ರಭುಗಳನ್ನು ಅನುಭವ ಮಂಟಪದ ಅಧ್ಯಕ್ಷರನ್ನಾಗಿಸಿದರು. ಅನುಭವ ಮಂಟಪದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಅರಿವು ಮೂಡಿಸಿದರು. ಮಾನವ ಹಕ್ಕುಗಳನ್ನು ಪ್ರತಿಪಾದಿಸಿದರು. ವಿವಿಧ ಕಾಯಕಗಳನ್ನು ಮಾಡುವ ಸಮಾಜಗಳ ಮೂಲದಿಂದ ಬಂದ 770 ಅಮರಗಣಗಳನ್ನು ಆಯ್ಕೆ ಮಾಡಿ ಧರ್ಮಕ್ಕೆ ಸಮೂಹ ನಾಯಕತ್ವವನ್ನು ಒದಗಿಸಿದರು. ಇಂಥ ಸಮೂಹ ನಾಯಕತ್ವವುಳ ಇನ್ನೊಂದು ಧರ್ಮ ಜಗತ್ತಿನಲ್ಲಿ ಇಲ್ಲ. ದಲಿತರಿಗೆ, ಮಹಿಳೆಯರಿಗೆ, ಕಾಯಕಜೀವಿಗಳಿಗೆ ಮತ್ತು ಹೊರದೇಶಗಳಿಂದ ಬಂದವರಿಗೆ ಕನ್ನಡ ಕಲಿಕೆಯ ವ್ಯವಸ್ಥೆ ಮಾಡಿದರು.

ದುಡಿಯುವ ವರ್ಗದ ಮೊದಲ ಸಾಹಿತ್ಯ:

12ನೇ ಶತಮಾನದ ವಚನಗಳು ಇಡೀ ವಿಶ್ವದಲ್ಲೇ ದುಡಿಯುವ ವರ್ಗದ ಪ್ರಥಮ ಸಾಹಿತ್ಯವಾಗಿ ಕಂಗೊಳಿಸುತ್ತಿವೆ. ನಮ್ಮ ಕಸಗುಡಿಸುವ ಸತ್ಯಕ ವಚನಗಳನ್ನು ಬರೆಯುವಾಗ ಇಂಗ್ಲಿಷ್ ಭಾಷೆಯಲ್ಲಿ ಇನ್ನೂ ಸಾಹಿತ್ಯ ರಚನೆ ಆರಂಭವಾಗಿದ್ದಿಲ್ಲ ಎಂಬುದು ಗಮನಾರ್ಹವಾಗಿದೆ.

ಈ ಎಲ್ಲ ಕಾರಣಗಳಿಂದಾಗಿ ಇಡೀ ಕಲ್ಯಾಣ ಬಸವಾ ಬಸವಾ ಎಂದು ಉಸಿರಾಡುತ್ತಿತ್ತು. ಇದನ್ನು ಸಹಿಸದ ಪಟ್ಟಭದ್ರ ಹಿತಾಸಕ್ತಿಗಳು ಬಿಜ್ಜಳನ ತಲೆ ಕೆಡಿಸಲು ಪ್ರಯತ್ನಿಸಿದವು. ಕಾಯಕಜೀವಿಗಳ ನಿಷ್ಠೆಯಿಂದಾಗಿ ಬಿಜ್ಜಳ ಭಂಡಾರ ತುಂಬಿ ತುಳುಕುತ್ತಿತ್ತು. ಹೀಗಾಗಿ ಮೊದ ಮೊದಲು ಬಿಜ್ಜಳ ರಾಜ ಪುರೋಹಿತಶಾಹಿಗಳ ಚಾಡಿ ಮಾತಿಗೆ ಬೆಲೆ ಕೊಡಲಿಲ್ಲ. 'ಶರಣರ ಪರ್ಯಾಯ ಸಮಾಜದ ಶಕ್ತಿ ನಿಮ್ಮ ರಾಜ್ಯಶಕ್ತಿಯನ್ನು ದುರ್ಬಲಗೊಳಿಸುವುದು' ಎಂದು ಪುರೋಹಿತಶಾಹಿಗಳು ಪದೆ ಪದೆ ಬಿಜ್ಜಳನ ತಲೆ ಕೆಡಿಸಿದರು. ಆತನ ಮಗ ರಾಯಮುರಾರಿ ಸೋವಿದೇವನನ್ನು ತಂದೆಯ ವಿರುದ್ಧವೇ ಎತ್ತಿ ಕಟ್ಟಿದರು. ಬಿಜ್ಜಳನ ಅರಮನೆ ಗೊಂದಲದ ಗೂಡಾಗಿದ್ದರಿಂದಲೇ ಶರಣರ ಹತ್ಯಾಕಾಂಡ ಮಾಡಿಸುವಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಯಶಸ್ಸನ್ನು ಸಾಧಿಸಿದವು. ವಿಶ್ವದಲ್ಲೇ ಅನುಪಮವಾದ ಶರಣಸಂಕುಲವೆಂಬ ಸಮತಾ ಸಮಾಜವನ್ನು ದುಷ್ಟಶಕ್ತಿಗಳು ಹಾಳುಗೆಡವಿದವು.

ಕಲ್ಯಾಣ ಹತ್ಯಾಕಾಂಡಕ್ಕೆ ಹರಳಯ್ಯ ಮತ್ತು ಮಧುವರಸರ ಮಕ್ಕಳ ವಿವಾಹವೇ ಕಾರಣವಾಗಿಸಿ ವೈದಿಕರು ಕ್ಯಾತೆ ತೆಗೆದರು. ಸಮಗಾರ ವರನ ಜೊತೆ ಬ್ರಾಹ್ಮಣ ಕನ್ನೆಯ ವಿವಾಹ ಮಾಡಿಸುವುದು ಮನುಸ್ಮೃತಿಯ ಪ್ರಕಾರ ಧರ್ಮಬಾಹಿರವಾದ ವಿಲೋಮ ವಿವಾಹ ಎಂದು ವಾದಿಸಿದರು. ಅವರಿಬ್ಬರೂ ಜಾತಿಗಳಿಲ್ಲದ ಲಿಂಗಾಯತ ಧರ್ಮದವರು ಎಂಬ ಸತ್ಯವನ್ನು ಮರೆಮಾಚಿ ವಿತಂಡ ವಾದ ಮಾಡಿದರು. ಕೊನೆಗೂ ಶರಣರ ಹತ್ಯೆಯಾಯಿತು. ಅನೇಕರು ದಿಕ್ಕಾಪಾಲಾದರು. ಅವರ ಬಹುಪಾಲು ವಚನಕಟ್ಟುಗಳು ಬೆಂಕಿಗೆ ಆಹುತಿಯಾದವು.

ಪ್ರಜಾರಾಜ್ಯ ವ್ಯವಸ್ಥೆ:

ಬಸವಣ್ಣನವರು ಹೊಸ ಪ್ರಜಾರಾಜ್ಯ ವ್ಯವಸ್ಥೆಯ ಮುಂದಾಳಾಗುವುದರ ಜೊತೆಗೆ ಬಿಜ್ಜಳನ ಹಳೆಯ ರಾಜ್ಯವ್ಯವಸ್ಥೆಯ ಪ್ರಧಾನಿಯಾಗಿದ್ದರು. ಶರಣಸಂಕುಲದಲ್ಲಿ ಅವರ ಪ್ರಜಾರಾಜ್ಯ ವ್ಯವಸ್ಥೆ ಸ್ವತಂತ್ರ ಅಸ್ತಿತ್ವವನ್ನು ಹೊಂದಿತ್ತು. ಕಾಯಕಜೀವಿಗಳು ರಾಜ್ಯಶಕ್ತಿಯ ಮೇಲೆ ಅವಲಂಬಿತರಾಗದೆ ಸಮೂಹಶಕ್ತಿಯ ಮೇಲೆ ಅವಲಂಬಿತರಾಗಿದ್ದರಿಂದ ಅವರು ಮೊದಲಬಾರಿಗೆ ಸ್ವಾವಲಂಬಿ ಜೀವನದ ಆನಂದವನ್ನು ಅನುಭವಿಸಿದರು. ದುಡಿಮೆ, ಸಹಕಾರ, ಚಿಂತನೆ ಮತ್ತು ಸಾಮೂಹಿಕ ಬದುಕಿನಿಂದಾಗಿ ಅವರ ವ್ಯಕ್ತಿತ್ವ

ವಿಕಸನವಾಯಿತು. ಅವರು ಇಷ್ಟಲಿಂಗದ ಮೂಲಕ ಆಂತರಿಕ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ನಂತರ ಸಮಾಜವೆಂಬ ಜಂಗಮಲಿಂಗದ ಮೂಲಕ ಸಾಮಾಜಿಕ ವ್ಯಕ್ತಿತ್ವವನ್ನು ಪಡೆದುಕೊಂಡರು. ಹೀಗೆ ಅಂತರಂಗ ಶುದ್ಧಿ ಮತ್ತು ಬಹಿರಂಗ ಶುದ್ಧಿಯ ಮೂಲಕ ಸ್ವತಂತ್ರರೂ ಧೀರರೂ ಆದರು.

ಬಸವಣ್ಣನವರ ಪ್ರಜಾರಾಜ್ಯದ ಕಲ್ಪನೆ ವಿಶಿಷ್ಟವಾಗಿದೆ. ಪ್ರತಿಯೊಬ್ಬ ವ್ಯಕ್ತಿ ಕಾಯಕದ ಮೂಲಕ ಸ್ವಾವಲಂಬನೆಯನ್ನು ಸಾಧಿಸುತ್ತ ತನ್ನ ಕುಟುಂಬ, ಸಮಾಜ ಮತ್ತು ಒಟ್ಟಾರೆ ದೇಶಕ್ಕೆ ಹಿತವನ್ನು ಕಾಪಾಡಬೇಕು. ಹೀಗೆ ಮಾಡುವ ಮೂಲಕ ರಾಜ್ಯದ ಬೊಕ್ಕಸಕ್ಕೆ ಹೊರೆಯಾಗದಂತೆ ಬದುಕಬೇಕು. ಅಲ್ಲದೆ ಪ್ರಜ್ಞಾಪೂರ್ಣವಾದ ಪ್ರಜಾಪ್ರಭುತ್ವವಾದಿ ವ್ಯವಸ್ಥೆಯ ಮೂಲಕ ಕಲ್ಯಾಣರಾಜ್ಯ ಸ್ಥಾಪನೆಗಾಗಿ ಶ್ರಮಿಸಬೇಕು ಎಂಬುದು ಬಸವಣ್ಣನವರ ರಾಜನೀತಿಯಾಗಿದೆ. ಸತ್ಯ ಮತ್ತು ಅಹಿಂಸೆಯ ಮೂಲಕವೇ ಕಲ್ಯಾಣ ರಾಜ್ಯ ಸ್ಥಾಪನೆಯ ಕನಸನ್ನು ಬಸವಣ್ಣನವರು ಕಂಡಿದ್ದರು. ಜನಸಮುದಾಯ ಅವರ ಭಾವನೆಗಳಿಗೆ ಸ್ಪಂದಿಸಿದ್ದು ಮತ್ತು ಅವರ ಕ್ರಾಂತಿಕಾರಿ ವಿಚಾರಗಳನ್ನು ಸ್ವೀಕರಿಸಿದ್ದು ಅವಿಸ್ಮರಣೀಯವಾಗಿದೆ.

ಬಿಜ್ಜಳನ ರಾಜ್ಯದಲ್ಲಿ ಎಲ್ಲೆಂದರಲ್ಲಿ ಬಸವಣ್ಣನವರ ಶ್ಲಾಘನೆ ನಡೆದೇ ಇತ್ತು. ಅವರಿಗೆ ಈ ಹೊಗಳಿಕೆ ಹೊನ್ನಶೂಲ ಎಂದು ಭಾವಿಸುವಷ್ಟು ಹೆಚ್ಚಾಗಿತ್ತು. ಆಗ ವೈದಿಕರು ಎಚ್ಚೆತ್ತರು. ಜನಸಾಗರ ತಮ್ಮ ಧರ್ಮಕ್ಕೂ ಬೆಲೆ ಕೊಡುತ್ತಿಲ್ಲ, ತಮ್ಮ ವೈದಿಕ ಧರ್ಮವನ್ನು ರಕ್ಷಿಸುವ ಬಿಜ್ಜಳ ರಾಜನಿಗೂ ಬೆಲೆ ಕೊಡುತ್ತಿಲ್ಲ. ಪರಿಸ್ಥಿತಿ ಹೀಗೇ ಮುಂದುವರಿದರೆ ಜನಶಕ್ತಿಯ ಮೂಲಕ ಬಸವಣ್ಣನೇ ಕಲ್ಯಾಣದ ಅಧಿಪತಿಯಾಗುವನು ಎಂದು ಕಲ್ಪನೆ ಮಾಡತೊಡಗಿದರು. ಈ ಗಾಳಿಮಾತು ಎಲ್ಲೆಡೆ ಹರಡುವಂತೆ ಮಾಡಿದರು.

ಬಸವಣ್ಣನಿಂದಾಗಿ ಜನರು ಕಾಯಕದಲ್ಲಿ ನಿಷ್ಠೆಯುಳ್ಳವರಾಗಿದ್ದರು. ಪ್ರಧಾನಿ ಬಸವಣ್ಣನವರು ಆಡಳಿತವನ್ನು ಕಟ್ಟುನಿಟ್ಟಾಗಿ ನಡೆಸುತ್ತಿದ್ದರು. ಕಾಯಕಜೀವಿಗಳು ಎಲ್ಲ ತೆರಿಗೆಗಳನ್ನು ಸರಿಯಾಗಿ ಕಟ್ಟುತ್ತಿದ್ದರು. ಕಳ್ಳನಾಣ್ಯಗಳ ಬಳಕೆ ಇದ್ದಿದ್ದಿಲ್ಲ. ಈ ಎಲ್ಲ ಕಾರಣಗಳಿಂದಾಗಿ ಬಿಜ್ಜಳನ ಭಂಡಾರ ತುಂಬಿ ತುಳುಕುತ್ತಿತ್ತು. ರಾಜತಂತ್ರ ನಿಪುಣ ಬಿಜ್ಜಳನಿಗೆ ಪ್ರಧಾನಿ ಬಸವಣ್ಣನವರ ಪ್ರತಿಭೆ ಮತ್ತು ಕಾರ್ಯತತ್ಪರತೆ ಬಹಳ ಹಿಡಿಸಿತ್ತು. ಆದ್ದರಿಂದಲೇ ಆತ ಒಡ್ಡೋಲಗದ ವೈದಿಕರ ಬಸವವಿರೋಧಿ ಚಾಡಿಮಾತುಗಳನ್ನು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಕೊನೆ ಕೊನೆಗೆ ವೈದಿಕರ ಉಪಟಳ ಹೆಚ್ಚಾಯಿತು. ಅರಮನೆಯಲ್ಲೇ ಅಣ್ಣ, ತಮ್ಮ ಮತ್ತು ತಂದೆ ಮಕ್ಕಳ ಮಧ್ಯೆ ಅಪನಂಬಿಕೆಯ ಬಿರುಗಾಳಿ ಬೀಸುವಂತೆ ಮಾಡುವಲ್ಲಿ ವೈದಿಕರು ಯಶಸ್ಸನ್ನು ಸಾಧಿಸಿದರು.

ಹೆದರಿದ ರಾಜ್ಯಶಕ್ತಿ:

ಬಸವಣ್ಣನವರು ಯಾವುದೇ ಕ್ಷಿಪ್ರಕ್ರಾಂತಿ ಮಾಡದೆ, ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ ಎನ್ನುತ್ತ ನಿಧಾನವಾಗಿ ರಾಜ್ಯಶಕ್ತಿಯನ್ನು ನಿರ್ಮೂಲನ ಮಾಡುತ್ತ ಪ್ರಜಾಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತ ಶರಣಸಾಮ್ರಾಜ್ಯ ಅಸ್ತಿತ್ವಕ್ಕೆ ಬರುವಂತೆ ನೋಡಿಕೊಳ್ಳುವರು. ಆಗ ರಾಜಸಿಂಹಾಸನವು ತಾನಾಗಿಯೆ ಕುಸಿಯುವುದು ಇನ್ನು ಧರ್ಮಸಿಂಹಾಸನಕ್ಕೆ ಉಳಿಗಾಲವೆಲ್ಲಿ? ಏನಿದ್ದರೂ ಶರಣರ ಶೂನ್ಯಸಿಂಹಾಸನವೇ ವಿಜೃಂಭಿಸುವುದು ಎಂದು ಮುಂತಾಗಿ ಬಿಜ್ಜಳನ ಮಂತಿಮಂಡಳದ ವೈದಿಕರು ತರ್ಕ ಮಂಡಿಸಿದರು. ಆ ಹೊತ್ತಿಗಾಗಲೇ ಬಿಜ್ಜಳನ ಮಗ ರಾಯಮುರಾರಿ ಸೋವಿದೇವ ವೈದಿಕರ ಬಲೆಗೆ ಬಿದ್ದಿದ್ದ. ಅಂತೂ ಇಂತೂ ವಿಲೋಮ ವಿವಾಹದ ನೆಪದಲ್ಲಿ ವೈದಿಕರು ಕಲ್ಯಾಣದಲ್ಲಿ ನರಮೇಧ ಆಗುವಂತೆ ನೋಡಿಕೊಂಡರು. ಶರಣಸಂಕುಲವೆಂಬ ನವಸಮಾಜವನ್ನು ಹಾಳುಗೆಡವಿದರು.

ಕಲ್ಯಾಣದಲ್ಲಿ ನರಮೇಧ ಆಗುವ ಸಂದರ್ಭದಲ್ಲಿ ಬಸವಣ್ಣನವರು ಗಡಿಪಾರು ಶಿಕ್ಷೆಗೆ ಒಳಗಾಗಿ ಕೂಡಲಸಂಗಮ ಸೇರಿದ್ದರು. ಆದರೆ ಅವರ ನಾಯಕತ್ವ ಅದ್ಭುತವಾಗಿತ್ತು. ಶರಣರು ಕೂಡ ಮರಣವೇ ಮಹಾನವಮಿ ಎಂದು ಭಾವಿಸಿ ಮಣಿಹ ಪೂರೈಸಿದರು. ಅವರು ಮೌಲ್ಯಕ್ಕಾಗಿ ಜೀವತೆತ್ತರು. ಹರಳಯ್ಯ ಮಧುವರಸರ ಮಕ್ಕಳ ಮದುವೆ ಅವರಿಗೆ ಬರಿ ಒಂದು ಮದುವೆಯಾಗಿ ಕಾಣಲಿಲ್ಲ. ಜೀವನಮೌಲ್ಯವಾಗಿ ಕಂಡಿತು. ಅದಕ್ಕಾಗಿ ಅವರು ಎಲ್ಲವನ್ನೂ ಕಳೆದುಕೊಳ್ಳಲು ಸಿದ್ಧರಾದರು. ನುಡಿದಂತೆ ನಡೆದು ಹುತಾತ್ಮರಾದರು.

ಶರಣರ ಕೊಲೆ ಏಕಾಯಿತು?:

ವೈದಿಕರ ಕುತಂತ್ರವೇ ಶರಣರ ಕೊಲೆಗೆ ಕಾರಣವಾಯಿತು. ಬಸವಣ್ಣನವರ ನಾಯಕತ್ವದಲ್ಲಿ ಶರಣರು ತಮ್ಮ ಸುಖಮಯ ಬದುಕಿಗೆ ಸಂಚಕಾರ ತರುತ್ತಿದ್ದಾರೆ ಎಂಬ ಭಾವ ಅವರಲ್ಲಿ ಆಳವಾಗಿ ಬೇರೂರಿತ್ತು. ಸಹಸ್ರಾರು ವರ್ಷಗಳಿಂದ ಕಾಯ್ದುಕೊಂಡು ಬಂದ ಮೇಲುರಿಮೆಯನ್ನು ಉಳಿಸಿಕೊಳ್ಳುವುದೇ ಅವರ ಬಹುದೊಡ್ಡ ಚಿಂತನೆಯಾಗಿತ್ತು. ಎಲ್ಲ ಕಾಲಘಟ್ಟದಲ್ಲೂ ಅವರಿಗೆ ಅದೊಂದೇ ಧ್ಯಾನವಾಗಿದ್ದು ಇಂದಿಗೂ ಮುಂದುವರಿದೇ ಇದೆ. ಜನಸಮುದಾಯಗಳಲ್ಲಿ ಭೇದ ಸೃಷ್ಟಿಸುತ್ತ ವೈದಿಕ ಶಕ್ತಿಗಳು ಸದಾ ಯಶಸ್ಸನ್ನು ಸಾಧಿಸುತ್ತಲೇ ಮುಂದುವರಿದಿವೆ. ಕರ್ಮಸಿದ್ಧಾಂತ, ಮೂಢನಂಬಿಕೆ, ಬಹುದೇವೋಪಾಸನೆ, ಹೋಮ ಹವನ ಯಜ್ಞಯಾಗ, ಪಂಚಾಂಗ, ಗುಡಿ ಗುಂಡಾರ, ಮಠಮಾನ್ಯಗಳು ಅವರ ಅಸ್ತ್ರಗಳಾಗಿವೆ. ಈ ಎಲ್ಲ ಅಸ್ತ್ರಗಳಿಂದ ವೈದಿಕರು ಧರ್ಮಶಕ್ತಿಯಾಗಿ ರೂಪುಗೊಂಡರು. ರಾಜ್ಯಶಕ್ತಿಯ ಮೇಲೂ ಹಿಡಿತ ಸಾಧಿಸಿದರು.

ರಾಜಸಿಂಹಾಸನಕ್ಕೂ ಎತ್ತರದ ಸ್ಥಾನದಲ್ಲಿ ಧರ್ಮಸಿಂಹಾಸನ ಇರುವಂತೆ ನೋಡಿಕೊಳ್ಳಲಾಯಿತು. ಚಾತುರ್ವರ್ಣ ವ್ಯವಸ್ಥೆಯನ್ನು ರಕ್ಷಿಸುವುದೇ ರಾಜನ ಕರ್ತವ್ಯವಾಯಿತು.

"ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ ।

ತಸ್ಮಾದ್ಧರ್ಮೋನ ಹಂತವ್ಯೋ ಮಾ ನೋ ಧರ್ಮೋ ಹತೋಽವಧೀತ್ ॥"

(ಮನುಸ್ಮೃತಿ ಅಧ್ಯಾಯ 8, ಶ್ಲೋಕ 15)

(ನಾವು ಧರ್ಮವನ್ನು ಕೊಂದರೆ ಅದು ನಮ್ಮನ್ನು ಕೊಲ್ಲುತ್ತದೆ. ಧರ್ಮವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಆದ್ದರಿಂದ ಧರ್ಮವನ್ನು ಕೊಲ್ಲಬಾರದು. ಆ ಧರ್ಮ ಸಹ ನಮ್ಮನ್ನು ಕೊಲ್ಲದಿರಲಿ.)

ಮೇಲ್ನೋಟಕ್ಕೆ ಇದೊಂದು ಉದಾತ್ತ ವಿಚಾರ ಎಂಬಂತೆ ಭಾಸವಾಗುತ್ತದೆ. ಆದರೆ ಇದು ಮೋಸದ ಮಾತಾಗಿದೆ. ವರ್ಣಾಶ್ರಮ ಧರ್ಮವನ್ನು ಸಂರಕ್ಷಿಸುವುದು ಮತ್ತು ಬ್ರಾಹ್ಮಣರ ಉಪದೇಶದ ಪ್ರಕಾರ ರಾಜ್ಯಭಾರ ಮಾಡುವುದೇ ರಾಜಧರ್ಮ ಎಂಬುದನ್ನು ವೈದಿಕರು ಧರ್ಮಶಾಸ್ತ್ರಗಳು ಮತ್ತು ಸ್ಮೃತಿಗಳ ಮೂಲಕ ರಾಜರ ತಲೆಯಲ್ಲಿ ತುಂಬಿದ್ದರು.

"ಜಾತಿಮಾತ್ರೋಪಜೀವೀ ವಾ ಕಾಮಂ ಸ್ಯಾದ್ಬ್ರಾಹ್ಮಣಬ್ರುವಃ ।

ಧರ್ಮಪ್ರವಕ್ತಾ ನೃಪತೇರ್ನ ತು ಶೂದ್ರಃ ಕಥಂಚನ ॥"

ಮನುಸ್ಮೃತಿ ಅಧ್ಯಾಯ 8, ಶೋಕ 20

(ಧರ್ಮವಿಚಾರ ಮಾಡಲು ವಿದ್ವಾಂಸನಾದ ಬ್ರಾಹ್ಮಣನು ರಾಜನಿಗೆ ದೊರೆಯದಿದ್ದ ಪಕ್ಷದಲ್ಲಿ ಬರಿ ಜಾತಿಯಿಂದ ಬ್ರಾಹ್ಮಣನಾಗಿ, ಬ್ರಾಹ್ಮಣ ಧರ್ಮವನ್ನನುಸರಿಸುತ್ತಿದ್ದರೆ ಸಾಕು ಅಂಥವನು ಕೂಡ ರಾಜನಿಗೆ ಧರ್ಮಪ್ರವಚನ ಮಾಡಲು ಸಮರ್ಥನು ಹಾಗೂ ಅರ್ಹನು. ಶೂದ್ರನು ಮಾತ್ರ ಎಂದಿಗೂ ರಾಜನಿಗೆ ಧರ್ಮದ ವಿಚಾರವನ್ನು ಹೇಳಲು ಅರ್ಹನಲ್ಲ.)

ಮೇಧಾವಿ ಶೂದ್ರರಿಗಿಂತ ದಡ್ಡ ಬ್ರಾಹ್ಮಣರು ಕೂಡ ಶ್ರೇಷ್ಠರು ಎಂದು ಪ್ರತಿಪಾದಿಸುವುದೇ ಮನುಸ್ಮೃತಿಯ ಉದ್ದೇಶವಾಗಿದೆ. ಚಾತುರ್ವರ್ಣ ರಕ್ಷಣೆ ಮಾಡುತ್ತ ಬ್ರಾಹ್ಮಣರನ್ನು ಎತ್ತಿಹಿಡಿದು ಶೂದ್ರರನ್ನು ಸದಾ ಶೋಷಣೆಗೆ ಒಳಪಡಿಸುವ ವಿಚಾರಗಳನ್ನು ಹರಡುವುದಕ್ಕಾಗಿಯೆ ಮನುಸ್ಮೃತಿಯನ್ನು ರಚಿಸಲಾಗಿದೆ.

ಶೂದ್ರರು ವೇದಾಧ್ಯಯನದಲ್ಲಿ ತೊಡಗಬಾರದು, ವೇದಮಂತ್ರಗಳು ಅವರ ಕಿವಿಗೂ ಬೀಳಬಾರದು, ತಪಸ್ಸು ಮಾಡಬಾರದು ಮುಂತಾದ ಕಟ್ಟಳೆಗಳಿಗೆ ಭಂಗ ಬರದಂತೆ ನೋಡಿಕೊಳ್ಳುವುದೇ ರಾಜಧರ್ಮವಾಗಿದೆ!

ಈ ರಾಜಧರ್ಮದ ಪಾಲನೆಗಾಗಿಯೇ ಶ್ರೀರಾಮ ಶೂದ್ರ ತಪಸ್ವಿ ಶಂಬೂಕನ ವಧೆ ಮಾಡಿದ. ಆತ ತಪಸ್ಸು ಮಾಡತೊಡಗಿದ ಕಾರಣವೇ ಬ್ರಾಹ್ಮಣ ಮಗುವಿನ ಸಾವುಂಟಾಯಿತು ಎಂದು ವೈದಿಕರು ಶ್ರೀರಾಮನ ಬಳಿ ದೂರಿದರು. ಚಾತುರ್ವರ್ಣಗಳ ಯಥಾಸ್ಥಿತಿಯನ್ನು ಕಾಪಾಡುವುದೇ ರಾಜಧರ್ಮ ಎಂಬುದನ್ನು ಅಯೋಧ್ಯೆಯ ರಾಜ ಶ್ರೀರಾಮಚಂದ್ರನಿಗೆ ನೆನಪು ಮಾಡಿಕೊಟ್ಟರು. ಶ್ರೀರಾಮನಿಂದಲೇ ಶಂಬೂಕನ ವಧೆಯಾಯಿತು.

ಹೀಗೆ ಶೂದ್ರರು ಮತ್ತು ಪಂಚಮರು ಯಾವ ತಪ್ಪೂ ಮಾಡದೆ ವಿವಿಧ ಪ್ರಕಾರದ ಶಿಕ್ಷೆಯನ್ನು ಅನುಭವಿಸುತ್ತಲೇ ಬಂದಿದ್ದಾರೆ. ಇಂಥ ದುಷ್ಟ ವ್ಯವಸ್ಥೆಯನ್ನು ಕೊನೆಗಾಣಿಸುವುದೇ ಬಸವಣ್ಣನವರ ಬದುಕಿನ ಗುರಿಯಾಗಿತ್ತು. ಆದರೆ ಪುರೋಹಿತಶಾಹಿಗಳ ಕುತಂತ್ರದಿಂದ ಬಸವಣ್ಣನವರು ಗಡಿಪಾರು ಶಿಕ್ಷೆಗೆ ಒಳಗಾಗಿದ್ದರಿಂದ ಕಲ್ಯಾಣ ತೊರೆದು ಕೂಡಲಸಂಗಮಕ್ಕೆ ಬರಬೇಕಾಯಿತು.

"ಉಟ್ಟ ಸೀರೆಯ ಹರಿದು ಹೋದಾತ ನೀನಲಾ ಬಸವಣ್ಣ.
ಮೆಟ್ಟಿದ ಕೆರಹ ಕಳೆದುಹೋದಾತ ನೀನಲಾ ಬಸವಣ್ಣ.
ಕಟ್ಟಿದ ಮುಡಿಯ ಬಿಟ್ಟುಹೋದಾತ ನೀನಲಾ ಬಸವಣ್ಣ.
ಸೀಮೆಸಂಬಂಧವ ತಪ್ಪಿಸಿಹೋದಾತ ನೀನಲಾ ಬಸವಣ್ಣ.
ಲಿಂಗಕ್ಕೆ ಮಾಡಿದುದ ಸೋಂಕದೆ ಹೋದೆಯಲ್ಲಾ ಬಸವಣ್ಣ.
ಜಂಗಮಕ್ಕೆ ಮಾಡಿದ ಮಾಟವ ಕೈಯಲ್ಲಿ ಹಿಡಿದುಕೊಂಡು ಹೋದೆಯಲ್ಲಾ ಬಸವಣ್ಣ.
ಬೆಳಗನುಟ್ಟು ಬಯಲಾಗಿ ಹೋದೆಯಲ್ಲಾ ಬಸವಣ್ಣ.
ಆ ಬಸವಣ್ಣಂಗೆ ಶರಣೆಂಬ ಪಥವನೆ ತೋರು ಕಂಡಾ ಕಲಿದೇವರದೇವ."

ಮಡಿವಾಳ ಮಾಚಿದೇವರ ಈ ಭಾವಪೂರ್ಣ ವಚನ ಅವರ ಬಸವನಿಷ್ಠೆಯ ದ್ಯೋತಕವೂ ಆಗಿದೆ. ಅಂಥ ಅಹಿತಕರ ಸಂದರ್ಭದಲ್ಲೂ ಶರಣರು ಬಸವನಿಷ್ಠೆಯನ್ನೇ ಮೆರೆದಿದ್ದಕ್ಕೆ ಈ ವಚನ ಸಾಕ್ಷಿಯಾಗಿದೆ.

ಬಸವಣ್ಣನವರು ಅನಿವಾರ್ಯವಾಗಿ ಕೂಡಲಸಂಗಮಕ್ಕೆ ಹೋದರೂ ಶರಣರು ಪರಿಸ್ಥಿತಿಯನ್ನು ಎದುರಿಸುವಲ್ಲಿ ಎದೆಗುಂದಲಿಲ್ಲ. ಸತ್ಯ ಮತ್ತು ಅಹಿಂಸೆಯ ಮಾರ್ಗದಲ್ಲೇ ವೈದಿಕರ ಶಾಸ್ತ್ರಗಳನ್ನು ಮತ್ತು ಆ ಶಾಸ್ತ್ರಗಳು ಹೇಳಿದಂತೆ ಕೇಳಿದ ಬಿಜ್ಜಳನ ಶಸ್ತ್ರಗಳನ್ನು ಎದುರಿಸಿದರು. ಸಾವು ನೋವನ್ನು ಅನುಭವಿಸಿದರೂ ಸಮಾನತೆಯ ಮೌಲ್ಯಗಳ ರಕ್ಷಣೆಯಾಗುವಂತೆ ನೋಡಿಕೊಂಡರು. ಸಮಗಾರ ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆ ಅವರಿಗೆ ಬರಿ ಮದುವೆಯಾಗಿ ಕಾಣಲಿಲ್ಲ. ಮಾನವ ಸಂಬಂಧಗಳ

ಮಹಾಕ್ಷಣವಾಗಿ ಕಂಡಿತು. ಹೀಗಾಗಿ ಶರಣರು ಇಂದಿಗೂ ಜನಮಾನಸದಲ್ಲಿ ಅಮರರಾಗಿ ಉಳಿದು ಹೊಸ ಬದುಕಿನ ಕನಸು ಕಾಣುವಂತೆ ಮಾಡುತ್ತಲೇ ಇದ್ದಾರೆ.

ಚಳವಳಿ ನಿರಂತರ:

ಇಷ್ಟೆಲ್ಲ ಆಗಿ ಎಂಟು ಶತಮಾನ ಗತಿಸಿದರೂ ಶರಣರ ಚಳವಳಿ ನಮ್ಮನ್ನು ಜೀವಂತವಾಗಿರಿಸುವಲ್ಲಿ ಯಶಸ್ಸನ್ನು ಸಾಧಿಸಿದೆ. ನಮ್ಮ ಮನಸ್ಸು ಬದಲಾವಣೆಗೆ ತುಡಿಯುವಂತೆ ಮಾಡುತ್ತಿದೆ. ನಾವು 12ನೇ ಶತಮಾನದ ಕಡೆಗೆ ಹೊರಳುವಂತೆ ಪ್ರೇರೇಪಿಸುತ್ತದೆ. ಜಗತ್ತು 22ನೇ ಶತಮಾನಕ್ಕೆ ಹೋಗುವುದಾದರೆ 12ನೇ ಶತಮಾನದ ಮೂಲಕವೇ ಹೋಗಬೇಕಾಗಿದೆ. ಇಂದು ಬಸವತತ್ತ್ವಗಳಿಗೆ ವಿಶ್ವ ಮಾನ್ಯ ಮಾಡುತ್ತಿದೆ. ಬಸವಣ್ಣನವರನ್ನು ಅರಿತುಕೊಳ್ಳಲು ಕಾತರಿಸುತ್ತಿದೆ.

ವಿಶ್ವವು ಲಿಂಗಭೇದ, ಜಾತಿಭೇದ, ವರ್ಣಭೇದ ಮತ್ತು ವರ್ಗಭೇದ ನೀತಿಯಿಂದ ತತ್ತರಿಸಿದೆ. ಅಹಂಕಾರವು ವಿವಿಧ ದೇಶಗಳ ರಾಜ್ಯಶಕ್ತಿಯ ಪ್ರಧಾನ ಗುಣವಾಗುತ್ತಿದೆ. ಕೋಮುವಾದ, ಉಗ್ರವಾದ, ಜನಾಂಗವಾದ, ಮಿಲಿಟರಿ ಸಂಕೀರ್ಣ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಸಹಾಯದೊಂದಿಗೆ ಬೆಳೆಯುತ್ತಿರುವ ಸಾಮ್ರಾಜ್ಯವಾದ ಮುಂತಾದವು ಆಧುನಿಕ ಜಗತ್ತಿನ ಪೀಡೆಗಳಾಗಿವೆ. ಯೋಗ್ಯ ಉತ್ಪದನೆಯ ಕಾಯಕ, ಸದ್ಬಳಕೆಯೆ ಪ್ರಸಾದ ಮತ್ತು ಜೀವನಾವಶ್ಯಕ ವಸ್ತುಗಳ ಸಾಮಾಜಿಕ ವಿತರಣೆಯ ದಾಸೋಹ ತತ್ತ್ವದ ಬಸವ ಶಾಸನದಿಂದ ಅಂದರೆ, ಶಾಂತಿ ಸಮಾನತೆ ಮತ್ತು ನಮ್ರತೆಯಿಂದ ಕೂಡಿದ ಜೀವನವಿಧಾನದಿಂದ ಯುದ್ಧ, ಅಂತಃಕಲಹ, ಜನಾಂಗಹತ್ಯೆ ಮತ್ತು ಎಲ್ಲ ತೆರನಾದ ಶೋಷಣೆಯನ್ನು ತಡೆಗಟ್ಟಲು ಸಾಧ್ಯ.

"ಬಸವ ಪೀಠವು ಎದ್ದು। ಒಸೆದು ನಾಣ್ಯವು ಹುಟ್ಟಿ ।
ಬಸವನ ಮುದ್ರೆ ಮೆರೆದಾವು । ವಸುಧೆಯವಗೆ ।
ವಶವಾಗದಿಹುದೆ ಸರ್ವಜ್ಞ ॥"

ಸರ್ವಜ್ಞ ಭವಿಷ್ಯ ನುಡಿದದ್ದು ನಿಜವಾಗುತ್ತಿದೆ. ಈ ಜಗತ್ತು ಬಸವಣ್ಣನವರ ಕಡೆಗೆ ಹೊರಳಿದಾಗಲೇ ಶಾಂತಿ, ಸಮಾನತೆ ಮತ್ತು ನಮ್ರತೆಯಿಂದ ಬದುಕಲು ಕಲಿಯುವುದು.

* * *

ಪ್ರತಿಜ್ಞೆ

1. ಏಕದೇವೋಪಾಸಕನಾದ ನನಗೆ 33 ಕೋಟಿ ದೇವತೆಗಳಲ್ಲಿ ನಂಬಿಕೆ ಇಲ್ಲ.
2. ದೇಹವೇ ದೇವಾಲಯ ಎಂಬುದನ್ನು ನಂಬಿದ ನಾನು ಗುಡಿ ಸಂಸ್ಕೃತಿಯವನಲ್ಲ.
3. ವಿವಿಧ ವಚನಾಂಕಿತಗಳಿಂದ ಕರೆಯಲಾಗುವ ಲಿಂಗದೇವನೊಬ್ಬನೇ ದೇವ ಎಂಬುದರಲ್ಲಿ ನನಗೆ ನಂಬಿಕೆ ಇದೆ.
4. ಇಷ್ಟಲಿಂಗವು ಲಿಂಗದೇವನ ಕುರುಹು ಎಂಬುದನ್ನು ನಾನು ಒಪ್ಪುತ್ತೇನೆ. ವಚನಾಂಕಿತ ತಿದ್ದುವುದನ್ನು ವಿರೋಧಿಸುತ್ತೇನೆ.
5. ದೇವರನ್ನು ಯಾವುದೇ ಹೆಸರಿನಿಂದ ಕರೆದರೂ ದೇವನೊಬ್ಬನೇ ಎಂದು ನಾನು ಪ್ರತಿಪಾದಿಸುತ್ತೇನೆ.
6. ಬಸವಣ್ಣನವರೇ ಲಿಂಗವಂತರ ಧರ್ಮಗುರು; ಇಷ್ಟಲಿಂಗ ಮಾತ್ರ ಲಿಂಗಾಂಗಸಾಮರಸ್ಯಯೋಗ ಎಂಬ ಪೂಜಾ ಸಾಧನ,
   ಬಸವಾದಿ ಶರಣರ ವಚನಗಳೇ ಧರ್ಮಗ್ರಂಥ, ಅನುಭಾವವೇ ಲಿಂಗವಂತರ ತತ್ತ್ವಜ್ಞಾನ ಮತ್ತು ಸಕಲ ಜೀವಾತ್ಮರಿಂದ
   ಕೂಡಿದ ವಿಶ್ವವೇ ಜಂಗಮಲಿಂಗ ಎಂಬುದು ನನ್ನ ದೃಢನಿರ್ಧಾರ.
7. ರೂಢಿಗತವಾದ ಪಾದಪೂಜೆ ಲಿಂಗವಂತ ಧರ್ಮಸಮ್ಮತವಲ್ಲ ಎಂದು ನಾನು ವಾದಿಸುತ್ತೇನೆ.
8. ಪಾದ ಎಂದರೆ ಜ್ಞಾನ. ಪಾದಪೂಜೆ ಎಂದರೆ ಜ್ಞಾನಪೂಜೆ. ಜ್ಞಾನಪೂಜೆ ಎಂದರೆ ಅರಿವಿನ ಸಾಕ್ಷಾತ್ಕಾರ.
   ಇಷ್ಟಲಿಂಗಪೂಜೆ ಇರುವುದು ಅರಿವಿನ ಸಾಕ್ಷಾತ್ಕಾರಕ್ಕಾಗಿ ಎಂಬುದನ್ನು ನಾನು ಒತ್ತಿಹೇಳುತ್ತೇನೆ.

9. ಲಿಂಗವಂತ ಧರ್ಮದಲ್ಲಿ ಪೂಜೆ ಎಂದರೆ, ನಾವು ಅರಿವಿನ ಸಾಕ್ಷಾತ್ಕಾರದೊಂದಿಗೆ ನಮ್ಮೊಳಗಿನ ಮಹಾಘನದ ಜೊತೆ ಒಂದಾಗುವುದು. ಇದುವೆ ಲಿಂಗಾಂಗಸಾಮರಸ್ಯ ಎಂಬ ಭಾವ ನನ್ನಲ್ಲಿ ಅಚಲವಾಗಿದೆ.
10. ಸರ್ವರೂ ಶಿವಸ್ವರೂಪಿಗಳಾಗಿರುವುದರಿಂದ ಮನುಷ್ಯರ ಮಧ್ಯೆ ಭೇದಭಾವ ಮಾಡುವುದನ್ನು ನಾನು ವಿರೋಧಿಸುತ್ತೇನೆ.
11. ಮಾನಸಿಕ ಗುಲಾಮಗಿರಿಗೆ ಕಾರಣವಾಗುವ ಕರ್ಮಸಿದ್ಧಾಂತದಲ್ಲಿ ನನಗೆ ನಂಬಿಕೆ ಇಲ್ಲ.
12. ಬಸವಾದಿ ಶರಣರ ಕಾಯಕ–ಪ್ರಸಾದ–ದಾಸೋಹ ಸಿದ್ಧಾಂತದಲ್ಲಿ ನನಗೆ ನಂಬಿಕೆ ಇದೆ.
13. ಶರಣರ ಸರ್ವಸಮತ್ವ ನೀತಿಗೆ ಧಕ್ಕೆ ತರುವಂಥ ಕಾರ್ಯಗಳನ್ನು ನಾನು ಮಾಡುವುದಿಲ್ಲ.
14. ನಾನು ಯಾವುದೇ ಶುಭಕಾರ್ಯವನ್ನು ಬಸವಾದಿ ಶರಣರ ನೆನೆಯದೆ ಆರಂಭಿಸುವುದಿಲ್ಲ.
15. ಸಕಲ ಜೀವಾತ್ಮರಿಗೆ ಲೇಸನ್ನು ಬಯಸುತ್ತ ಕ್ರಿಯಾಶೀಲವಾಗುವುದನ್ನು ನಾನು ಪ್ರತಿಪಾದಿಸುತ್ತೇನೆ.
16. ನಾನು ಕಳವು ಮಾಡುವುದಿಲ್ಲ;. ಕೊಲ್ಲುವುದಿಲ್ಲ; ಸುಳ್ಳು ಹೇಳುವುದಿಲ್ಲ; ಸಿಟ್ಟಿಗೆ ಬರುವುದಿಲ್ಲ;. ಹೊಗಳಿಕೊಳ್ಳುವುದಿಲ್ಲ; ಅಸಹ್ಯ ಪಡುವುದಿಲ್ಲ; ಅನ್ಯರು ಹಳಿದಾಗ ಅರ್ಥ ಮಾಡಿಕೊಳ್ಳಲು ಯತ್ನಿಸುತ್ತೇನೆ.
17. ನನ್ನದು ಲಂಚವಂಚನಕ್ಕೆ ಕೈಯಾನದ ಭಾಷೆ. 'ನಾನು ಭ್ರಷ್ಟಾಚಾರಿ ಅಲ್ಲ' ಎಂದು ಸಾರುತ್ತೇನೆ.
18. ಲಿಂಗಸಾರಾಯನಾದ ನಾನು ಮಾದಕವಸ್ತುಗಳ ಗುಲಾಮನಾಗುವುದಿಲ್ಲ.
19. ವಾರ, ತಿಥಿ, ಸುಮುಹೂರ್ತ ಹಾಗೂ ಪಂಚಸೂತಕಗಳಾದ ಜನನ, ಮರಣ, ಜಾತಿ, ಎಂಜಲು, ರಜಸ್ಸೂತಕದಂಥ ಮೂಢನಂಬಿಕೆಗಳನ್ನು ತಿರಸ್ಕರಿಸುತ್ತೇನೆ.
20. ನಾನು ಪುನರ್ಜನ್ಮವನ್ನು ನಂಬುವುದಿಲ್ಲ. ಆದರೆ ಇಷ್ಟಲಿಂಗ ಧರಿಸಿದ ಮೇಲೆ ಲಿಂಗತತ್ತ್ವದ ಅರಿವನ್ನು ಆಚರಣೆಗೆ ತರುವುದರ ಮೂಲಕ ಉಂಟಾಗುವ ವ್ಯಕ್ತಿತ್ವ ವಿಕಸನವೇ ಪುನರ್ಜನ್ಮ ಎಂದು ಭಾವಿಸುತ್ತೇನೆ.
21. ಸ್ವರ್ಗ ನರಕಗಳು ಇಲ್ಲ ಎಂದು ನಾನು ಸಾರುತ್ತೇನೆ. ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂಬುದನ್ನು ಒಪ್ಪುತ್ತೇನೆ.

22. ಕಾಯಕದ ಅನುಭವದ ಮೂಲಕವೇ ಅನುಭಾವಿಯಾಗಲು ಸಾಧ್ಯ ಎಂಬುದನ್ನು ಪ್ರತಿಪಾದಿಸುತ್ತೇನೆ.

23. ದಯೆಯಿಂದ ಮಾತ್ರ ಮಾನವೀಯ ಜಗತ್ತಿನ ನಿರ್ಮಾಣ ಸಾಧ್ಯ ಎಂಬುದು ನನ್ನ ಅಚಲ ನಿರ್ಧಾರವಾಗಿದೆ.

24. ಭವರೋಗದಿಂದ ರಕ್ಷಿಸುವ ಅಷ್ಟಾವರಣ, ವ್ಯಕ್ತಿತ್ವ ವಿಕಸನದ ಷಟ್‌ಸ್ಥಲ ಮತ್ತು ಸಕಲಜೀವಾತ್ಮರಿಗೆ ಲೇಸನೇ ಬಯಸುವ
ಅರಿವನ್ನು ಆಚರಣೆಗೆ ತರುವ ಪಂಚಾಚಾರಗಳನ್ನು ಪಾಲಿಸುತ್ತೇನೆ.

25. ಶರಣರ ತತ್ತ್ವಾದರ್ಶಕ್ಕೆ ತಕ್ಕಂತೆ ಬದುಕುತ್ತೇನೆ ಮತ್ತು ಜೀವಿಸುವ ಪ್ರತಿ ಕ್ಷಣವೂ ಮಹತ್ವದ್ದು ಎಂದು ಸಾರುತ್ತೇನೆ.

It's amazing and extraordinary that Basaveshwara professed campaigned and advocated genuine democracy, human rights, gender equality way back in the 12th century even before anyone in United Kingdom had even thought about it.

Rt Hon John Bercow

Speaker of the British Parliament made

this statement on 21.01.2013

If Lingayatism was an island thrown up within the "boundless sea of Hinduism," it would appear that the waters of the ocean are doing their utmost to undermine its solid foundations.

Edgar Thurston (1855-1935)

Castes and tribes of India

Volume 4, page 260

Published in the year 1909

By Madras Government Press

Whatever legend may say of Basava, the fact is pretty clear that he was the first Indian free thinker. He might be called the Luther of India. The acknowledged leadership of the priests was in full swing when Basava came upon the scene, and there was a

movement on foot to replace caste and priestly authority with intelligence and free thinking. Basava, a Shivaite Brahman, was in the camp of the liberals. He mounted the rostrum for the abolition of caste and ceremonies, and preached that all men were by birth equal, that one sex was as important as another, that child marriage was wrong, and that widows should be permitted to remarry. He promised the Lingayats freedom of individual action. All wearers of the divine lingam were to occupy a common level; they were eat together and to intermarry. For a while the simplicity of his teaching appealed to the people, but soon, as they increased in wealth and numbers, they wanted their old distinctions back, as these increased their importance. Ceremonies and elaborate ritual crept into their worship, and thus as new converts enter they were placed on a lower strata, while the priests got back their old power and again became the privileged caste.

-Arthur Miles

THE LAND OF THE LINGAM
Published by
The Paternoster Library series IX
First published in 1933
Cheap edition 1937 page 288

ನಮ್ಮ ಪ್ರಕಟಣೆಗಳು

1.	*ಬಾಯಾರಿಕೆ: (ಕಾವ್ಯ) ಡಾ. ವಿನಯಾ (ಕರ್ನಾಟಕ ಸಾಹಿತ್ಯ ಅಕಾಡೆಮಿ, ಪು.ತಿ.ನ ಕಾವ್ಯ ಪ್ರಶಸ್ತಿ ಸೇರಿ 6 ಪ್ರಶಸ್ತಿ ಪುರಸ್ಕೃತ ಕೃತಿ)	₹ 35
2.	ಬಿಳಿ ಮುಗಿಲ ಕೆಳಗೆ (ಕಾವ್ಯ) ಸಿ.ಜಿ. ಹಿರೇಮಠ	₹ 30
3.	ತುಳುಕು: (ಕಾವ್ಯ) ಎಂ.ಡಿ. ಒಕ್ಕುಂದ	₹ 35
4.	ಬಂದೂಕಿನ ಮನುಷ್ಯ (ಕಾವ್ಯ) ಡಾ. ಬಸವರಾಜ ಕುಂಬಾರ	₹ 35
5.	*ಹಕ್ಕಿಗೂಡು: (ಕಾವ್ಯ) ಪೃಥ್ವಿ (ಗಂಗಮ್ಮ ಬೊಮ್ಮಾಯಿ ಅರಳು ಪ್ರತಿಭೆ ಪುರಸ್ಕೃತ ಕೃತಿ)	₹ 20
6.	*ತತ್ರಾಣಿ: (ಕಾವ್ಯ) ಬಸವರಾಜ ಹೂಗಾರ (ಕರ್ನಾಟಕ ಸಾಹಿತ್ಯ ಅಕಾಡೆಮಿ, ಕಡೆಂಗೋಡ್ಲು, ಕಸಾಪ ದತ್ತಿ ನಿಧಿ ಪುರಸ್ಕೃತ)	₹ 30
7.	*ಕನ್ನಡ: ರಚನಾತ್ಮಕ ಮತ್ತು ಸಮಾಜೋಭಾಷಿಕ ಅಧ್ಯಯನ: ಡಾ. ಬಿ.ಎಸ್. ಗೊರವರ	₹ 80
8.	*ಉಮರ ಖಯ್ಯಾಮನ ಪದ್ಯಗಳು: ಡಾ. ಎನ್. ಜಗದೀಶ ಕೊಪ್ಪ	₹ 50
9.	*ಗೊಂಬೆಯಾಟ: (ಕಾವ್ಯ) ಶಂಕರಗೌಡ ಸಾತ್ಮಾರ	₹ 35
10.	*ಬೆತ್ತಲೆ ರಸ್ತೆಯ ಕನಸಿನ ದೀಪ: (ಕೈಫಿ ಆಜ್ಮಿ ಕವಿತೆಗಳು) ಅನು: ವಿಭಾ	₹ 40
11.	*ಮುಂಡರಗಿ: ಬ್ರಿಟಿಷ್ ವಿರೋಧಿ ಹೋರಾಟ: ಹು. ಬಾ. ವಡ್ಡಟ್ಟಿ	₹ 30
12.	*ಜಂಗಮ ಫಕೀರನ ಜೋಳಿಗೆ: (ಕಾವ್ಯ) ಆರೀಫ್ ರಾಜಾ (ಕೇಂದ್ರ ಸಾಹಿತ್ಯ ಅಕಾಡೆಮಿ ಯುವ ಪ್ರಶಸ್ತಿ, ಬೇಂದ್ರೆ ಕಾವ್ಯ ಪ್ರಶಸ್ತಿ, ಕ.ಸಾ.ಪ. ಅರಳು ಪ್ರಶಸ್ತಿ, ಗುಲಬರ್ಗಾ ವಿ.ವಿ. ಪ್ರಶಸ್ತಿ ಪುರಸ್ಕೃತ ಕೃತಿ)	₹ 40
13.	ದಲಿತ ತತ್ವ: ಕಾಂಚ ಐಲಯ್ಯ: ಅನು: ಸುಜ್ಞಾನಮೂರ್ತಿ	₹ 60
14.	ಜಾತಿ ವಿನಾಶ: ಕಾಂಚ ಐಲಯ್ಯ: ಅನು: ಸುಜ್ಞಾನಮೂರ್ತಿ	₹ 50
15.	*ನಮಗೆ ಗೋಡೆಗಳಿಲ್ಲ ಅನು: ಸುಜ್ಞಾನಮೂರ್ತಿ	₹ 60
16.	*ಬಿ.ಟಿ. ಬದನೆ: ಬದುಕು ಬರಿದಾಗಿಸುವ ಕುಲಾಂತರಿ! ಸಂ. ಬಸೂ	₹ 50
17.	*ಕಡಲ ತಡಿಯ ಮನೆ: (ಕಥೆ) ಡಾ. ಸಬಿಹಾ ಭೂಮಿಗೌಡ	₹ 50
18.	*ಮುಗ್ಗಲು ಮನಸಿನ ಪದರು: (ಕಥೆ) ಎಸ್.ಬಿ. ಜೋಗುರ	₹ 50
19.	ಮಾಯಕಾರತಿ: (ಕಥೆ) ಶರಣಪ್ಪ ವಡಿಗೇರಿ	₹ 50
20.	*ಹರಿವ ನೀರೊಳಗಿನ ಉರಿ (ಅನುವಾದಿತ ಕಾವ್ಯ) ವಿಭಾ	₹ 60
21.	ಕಾಣದಾಯಿತೋ ಊರುಕೇರಿ (ಕಥೆ) ಬಿ. ಶ್ರೀನಿವಾಸ	₹ 60
22.	ಮನುಸ್ಮೃತಿ ಮತ್ತು ದಲಿತರು: ಜ ಹೊ ನಾ.	₹ 50
23.	*ಉರಿಯ ಪೇಟೆ: ಡಾ.ಕಾಂ.ವೆಂ. ಶ್ರೀನಿವಾಸಮೂರ್ತಿ	₹ 60
24.	ಕೋಮುವಾದಿ ಕಾರ್ಯಾಚರಣೆ: ದಲಿತ ಪ್ರತಿಸ್ಪಂದನೆ ಸಂ: ಆನಂದ ತೇಲ್ತುಂಬ್ಡೆ ಅನು, ಸಂಯೋಜನೆ: ಬಿ.ಗಂಗಾಧರಮೂರ್ತಿ, ಶಿವಸುಂದರ	₹ 140
25.	* ಗೀತಾ ನಾಗಭೂಷಣ: ಮಹಿಳಾ ಮಾರ್ಗ, ಸಂ. ಕೆ. ಷರೀಫಾ, ಬಸೂ	₹ 80
26.	ಕೋರೆಗಾಂವ ಕದನ: ದಲಿತ ದಿಗ್ವಿಜಯ ಸುಧಾಕರ ಖಾಂಬೆ ಅನು: ಡಾ. ಸಿದ್ರಾಮ ಕಾರಣಿಕ	₹ 50
27.	*ಗೋಹತ್ಯೆ ನಿಷೇಧ ಸುತ್ತಲಿನ ರಾಜಕೀಯ: ಬಿ. ಗಂಗಾಧರ ಮೂರ್ತಿ	₹ 30
28.	*ಯಾರೂ ನೆಡದ ಮರ: (ಕಾವ್ಯ) ಗಣೇಶ ಹೊಸ್ಮನೆ (ಕಣವಿ ಕಾವ್ಯ ಪ್ರಶಸ್ತಿ, ಪುತ್ತೂರು ಕನ್ನಡ ಸಂಘದ ಪ್ರಶಸ್ತಿ ಪುರಸ್ಕೃತ ಕೃತಿ)	₹ 40

29. ಜೀವ ಮಿಡಿತದ ಸದ್ದು: ವಿಭಾ ₹ 80
(ಡಿ.ಎಸ್. ಕರ್ಕಿ, ಕಸಾಪ ಮಲ್ಲಿಕಾ ದತ್ತಿನಿಧಿ, ಕರ್ನಾಟಕ ವಿದ್ಯಾವರ್ಧಕ ಸಂಘದ ರತ್ನಮ್ಮ, ಹೆಗ್ಗಡೆ, ಹರಿಹರ ಶ್ರೀ ಪ್ರಶಸ್ತಿ ಪುರಸ್ಕೃತ ಕೃತಿ)
30. *ಮನುಷ್ಯರನ್ನು ಹುಡುಕುತ್ತಾ: ಗಾಯಕವಾಡ (ಕಥೆ) ಅನು: ವಿಜಯ ಕಾಂಬಳೆ ₹ 50
31. *ತೆರೆದರಷ್ಟೆ ಬಾಗಿಲು: (ಕಾವ್ಯ) ಡಿ.ಎಸ್. ರಾಮಸ್ವಾಮಿ ₹ 40
(2010ರ ವಿಭಾ ಸಾಹಿತ್ಯ ಪ್ರಶಸ್ತಿ ಪುರಸ್ಕೃತ ಕೃತಿ)
32. *ದಲಿತತ್ವ: ಅಕ್ಷರವಾಗದ ಆತ್ಮಕಥಾನಕ: ಡಾ. ಕಾಂ.ವೆಂ.ಶ್ರೀನಿವಾಸಮೂರ್ತಿ ₹ 70
(ಕಸಾಪದ ಎಲ್. ಬಸವರಾಜು ದತ್ತಿನಿಧಿ, ದಸಾಪ ಪ್ರಶಸ್ತಿ ಪುರಸ್ಕೃತ)
33. *ಸಾಹಿತ್ಯ ಸಂಗತಿ: ಡಾ. ಪ್ರಕಾಶ ಗ. ಖಾಡೆ ₹ 50
34. *ಅಸಮಾನ ಭಾರತ: ಸಂ. ಡಾ. ಅನುಪಮಾ, ಡಾ. ಕೃಷ್ಣ, ಐಜೂರ್ ₹ 150
35. ಅಮೆರಿಕಾ ಆ ಮುಖ: ಡಾ. ಸಿ.ಎಸ್. ದ್ವಾರಕಾನಾಥ್ ₹ 80
(ದಸಾಪ ಪ್ರಶಸ್ತಿ ಪುರಸ್ಕೃತ)
36. ಇಲ್ಲಿ ಯಾರೂ ಮುಖ್ಯರಲ್ಲ: ಡಾ. ರಹಮತ್ ತರೀಕೆರೆ ₹ 160
37. ಖಲೀಲ್ ಗಿಬ್ರಾನ್ ಪ್ರೇಮಪತ್ರಗಳು: ಕನ್ನಡಕ್ಕೆ: ಕಸ್ತೂರಿ ಬಾಯರಿ ₹ 120
38. ರಾಮದುರ್ಗ ಸಂಸ್ಥಾನ: ವಿಮೋಚನಾ ಹೋರಾಟ ಲೇ: ಡಾ. ಎ.ಬಿ. ವಗ್ಗರ, ಜರಕುಂಟೆ ₹ 80
39. ದೇವರ ರಾಜಕೀಯ ತತ್ವ: ಬ್ರಾಹ್ಮಣ್ಯಕ್ಕೆ ಬುದ್ಧನ ತಿರುಗುಬಾಣ
ಕಂಚ ಐಲಯ್ಯ, ಅನು: ಜಾಜಿ ದೇವೇಂದ್ರಪ್ಪ ₹ 180
(ಬೇಂದ್ರೆ ಸಾಹಿತ್ಯ ಪುರಸ್ಕಾರ, ಗುಲಬುರ್ಗಾ ವಿವಿ ಪುರಸ್ಕಾರ ಪಡೆದ ಕೃತಿ)
40. ಹಿಂಸಾಕಾರಣ: ಡಾ. ಐ.ಜೆ. ಮ್ಯಾಗೇರಿ ₹ 60
41. ದೇವದಾಸಿ ಮತ್ತು ಬೆತ್ತಲೆಸೇವೆ: ಉತ್ತಮ ಕಾಂಬಳೆ, ಅನು: ಡಾ. ಸಿದ್ರಾಮ ಕಾರಣಿಕ ₹ 100
42. ಜ್ಯೋತಿಬಾ ಫುಲೆ ಮತ್ತು ರೈತ ಚಳುವಳಿ: ಡಾ. ಅಶೋಕ ಚೌಸಾಳಕರ,
ಅನು: ಡಾ. ಜೆ. ಪಿ. ದೊಡಮನಿ ₹ 60
43. ನಾಗವಂಶ: ದಲಿತ ಅಸ್ಮಿತೆ – ಶ್ರೀನಿವಾಸ ಭಾಲೇರಾವ್, ಅನು: ಡಾ. ಸಿದ್ರಾಮ ಕಾರಣಿಕ ₹ 40
44. ಮಹಿಳಾ ಮೀಸಲಾತಿ ಮತ್ತು ಲಿಂಗರಾಜಕಾರಣ: ಡಾ. ಎನ್. ಗಾಯತ್ರಿ ₹ 80
45. *ನೂರು ಬಣ್ಣದ ಕಣ್ಣು: (ಕಾವ್ಯ) ವಿಜಯಕಾಂತ ಪಾಟೀಲ ₹ 50
46. ಕಷ್ಟಕುಲದ ಕಥೆ: ದಲಿತರ ಸಬಲೀಕರಣ ಅಧ್ಯಯನ: ಡಾ.ಟಿ.ಆರ್.ಚಂದ್ರಶೇಖರ್ ₹ 80
47. ಬೇಯುವ ಉಸಿರಿನ ಗುರುತು (ಕಥೆ) ಎ.ಆರ್. ಪಂಪಣ್ಣ ₹ 90
48. ಚೆ: ಕ್ರಾಂತಿಯ ಸಹಜೀವನ – ಫಿಡಲ್ ಕ್ಯಾಸ್ಟ್ರೋ ನೆನಪುಗಳಿಂದ ಅನು: ನಾ. ದಿವಾಕರ ₹ 160
49. ಲೋಹಿಯಾ: ವ್ಯಕ್ತಿ ಮತ್ತು ವಿಚಾರ ಒಂದು ವಿಭಿನ್ನ ವಿಮರ್ಶೆ: ಬಾಪು ಹೆದ್ದೂರಶೆಟ್ಟಿ ₹ 200
50. ಭಾರತದ ಬೌದ್ಧಿಕ ದಾರಿದ್ರ್ಯ: ವಿ. ಆರ್. ನಾರ್ಲಾ ಅನು: ಪ್ರೊ. ಬಿ. ಗಂಗಾಧರಮೂರ್ತಿ ₹ 60
51. ದಲಿತರು: ಭೂತ–ಭವಿಷ್ಯ: ಡಾ. ಆನಂದ ತೇಲ್ತುಂಬ್ಡೆ ಸಂ: ಬಸೂ, ಅನುಪಮಾ ₹ 150
52. ಜಾತಿ ವ್ಯವಸ್ಥೆ: ಸಮಸ್ಯೆ–ಸವಾಲುಗಳು: ಬಾಬು ಜಗಜೀವನ್‌ರಾಮ್ ಅನು: ರಾಹು ₹ 120
53. ಭಾರತೀಯ ಮಹಿಳಾ ವಿಮೋಚನೆಯ ಆಂದೋಲನ ಮೂಲ: ಕನಕ ಮುಖರ್ಜಿ
ಅನು: ರಾಹು ₹ 150
54. ಜಾಗತೀಕರಣ ಮತ್ತು ದಲಿತರು: ಡಾ. ಆನಂದ ತೇಲ್ತುಂಬ್ಡೆ ಅನು: ನಾ. ದಿವಾಕರ ₹ 60
55. ಹರಿದ ಪತ್ರ: (ಕಥೆ) ಅನಸೂಯಾ ಕಾಂಬಳೆ ₹ 90
56. ಇಬ್ಬನಿಯ ಕಾವು: ಬಾನು ಮುಷ್ತಾಕ್ ₹ 90

57. ಅಂಬೇಡ್ಕರ್ ಮತ್ತು ಮುಸ್ಲಿಮರು: ಡಾ. ಆನಂದ ತೇಲ್ತುಂಬ್ಡೆ
ಅನು: ಪ್ರೊ. ಬಿ. ಗಂಗಾಧರಮೂರ್ತಿ ₹ 80
58. ಮಹಿಳೆ: ಇಂದಿನ ಸವಾಲುಗಳು: ಡಾ. ಸಬಿಹಾ ಭೂಮಿಗೌಡ ₹ 120
59. ಪುರುಷ ಅಹಂಕಾರಕ್ಕೆ ಸವಾಲು: ತಾರಾಬಾಯಿ ಶಿಂಧೆ, ಅನು: ಸುಜ್ಞಾನ ಮೂರ್ತಿ ₹ 80
60. ನವಿಲುಗರಿ: ಸಂ. ಡಾ. ಸಬಿಹಾ ಭೂಮಿಗೌಡ ₹ 50
61. ನನ್ನ ಪ್ರೀತಿಯ ಅಪ್ಪ: ಶಬಾನಾ ಅಜ್ಮಿ ಅನು: ರಾಹು, ವಿಭಾ ₹ 40
62. ಅಸಮಾನತೆಯ ಜಾಗತೀಕರಣ: ಪಿ.ಸಾಯಿನಾಥ ಅನು: ಸಿಂಚನ ತಂಡ ₹ 40
63. ಭಗವದ್ಗೀತೆ ವರ್ಸಸ್ ಬೌದ್ಧತತ್ವ: ಡಾ. ಬಿ. ಆರ್. ಅಂಬೇಡ್ಕರ್ ₹ 30
64. ಭಗವದ್ಗೀತೆ: ಸಾಮಾಜಿಕ, ಆರ್ಥಿಕ ಸಂಗತಿಗಳ ಒಳನೋಟ: ಡಿ. ಡಿ. ಕೋಸಾಂಬಿ,
ಅನು: ಟಿ. ಎಸ್. ವೇಣುಗೋಪಾಲ, ಶೈಲಜಾ. ₹ 40
65. *ಬಾಡು ತಿಂದ ಬ್ರಾಹ್ಮಣರು: ಡಾ. ಬಿ. ಆರ್. ಅಂಬೇಡ್ಕರ್ ಅನು: ಮಹಾದೇವ ಶಂಕನಪುರ ₹ 05
66. ಹರಿದು ಕೂಡುವ ಕಡಲು: ಗಜಲ್‌ಗಳು – ಗಣೇಶ ಹೊಸ್ಮನೆ ₹ 60
67. ಕೋಮುಹಿಂಸಾ ನಿಯಂತ್ರಣಾ ಮಸೂದೆ 2011: ಫಕೀರ ಮುಹಮ್ಮದ್ ಕಟ್ಪಾಡಿ ₹ 40
68. ಭೂಮಿ ತಿರುಗುವ ಶಬ್ದ: (ಕಾವ್ಯ) ಚನ್ನಪ್ಪ ಅಂಗಡಿ ₹ 60
(ವಿಭಾ ಸಾಹಿತ್ಯ ಪ್ರಶಸ್ತಿ – 2011 ಪುರಸ್ಕೃತ ಕೃತಿ)
69. ವಿದ್ಯುತ್‌ಕ್ಷೇತ್ರದ ರಾಜಕಾರಣ: ಅರುಂಧತಿ ರಾಯ್ ಅನು: ಪ್ರೊ. ಬಿ. ಗಂಗಾಧರಮೂರ್ತಿ ₹ 30
70. ಮಹಿಳೆ: ದಲಿತತ್ವ ಮತ್ತು ರಾಜಕೀಯ ಪ್ರಜ್ಞೆ: ಡಾ. ಎಚ್. ಎಸ್. ಅನುಪಮಾ ₹ 120
(ಕನ್ನಡ ಸಾಹಿತ್ಯ ಪರಿಷತ್ತಿನ ಲಕ್ಷ್ಮೀದೇವಿ ಶಾಂತರಸ ಹೆಂಬೆರಾಳ ಪ್ರಶಸ್ತಿ ಪುರಸ್ಕೃತ ಕೃತಿ)
71. ಭೀಮಯಾನ: ಡಾ. ಬಿ.ಆರ್. ಅಂಬೇಡ್ಕರ್ ಚಿಂತನೆಗಳು:
ಡಾ. ಎಚ್. ಎಸ್. ಅನುಪಮಾ, ಬಸೂ ₹ 80
72. ಉರಿವ ಒಲೆಯ ಮುಂದೆ: (ಕಾವ್ಯ) ಬಿ. ಶ್ರೀನಿವಾಸ ₹ 60
73. ಉರಿಯ ಪದವು (ಕಾವ್ಯ) ಮರಾಠಿ: ನಾಮದೇವ್ ಢಸಾಳ್
ಅನು: ಡಾ. ಎಚ್. ಎಸ್. ಅನುಪಮಾ ₹ 150
(ಶಿವಮೊಗ್ಗದ ಕರ್ನಾಟಕ ಸಂಘ, ದಸಾಪ ಪ್ರಶಸ್ತಿ ಪುರಸ್ಕೃತ ಕೃತಿ)
74. ಅಂಬೇಡ್ಕರ್ ಮತ್ತು ಕಾರ್ಟೂನ್ ವಿವಾದ: ಸಂ: ಬಸೂ, ಎಚ್. ಎಸ್. ಅನುಪಮಾ ₹ 100
75. ಉರಿವ ಏಕಾಂತ ದೀಪ (ಕಾವ್ಯ) ಲಕ್ಕೂರು ಸಿ. ಆನಂದ
(ವಿಭಾ ಸಾಹಿತ್ಯ ಪ್ರಶಸ್ತಿ – 2012 ಪುರಸ್ಕೃತ ಕೃತಿ) ₹ 60
76. ಹಾದಿ ಜಂಗಮ (ಕಾವ್ಯ) – ಬಸವರಾಜ ಹೂಗಾರ, ₹ 60
(ಕಸಾಪ ದತ್ತಿನಿಧಿ ಪ್ರಶಸ್ತಿ ಪುರಸ್ಕೃತ ಕೃತಿ)
77. ಬೀದಿ ಬೆಳಕಿನ ಕಂದೀಲು (ಲೇಖನಗಳು) – ಬಸವರಾಜ ಹೂಗಾರ, ₹ 60
78. ಬಾಡೂಟದ ಜೊತೆಗೆ ಗಾಂಧಿ ಜಯಂತಿ!
ಮತ್ತು ಇತರ ಲೇಖನಗಳು – ಬಿ. ಎಂ. ಬಶೀರ್ ₹ 120
79. ಮರಗುದುರೆ – ನಗ್ನಮುನಿ ಮಾತು–ಕವಿತೆ
ಅನು: ಡಾ. ಎಚ್. ಎಸ್. ಅನುಪಮಾ, ₹ 40
80. ಅಂಬೇಡ್ಕರ್‌ವಾದಿಗಳ ಬಿಕ್ಕಟ್ಟು ಮತ್ತು ಭವಿಷ್ಯದ ಸವಾಲುಗಳು:
ಡಾ. ಆನಂದ ತೇಲ್ತುಂಬ್ಡೆ ಕನ್ನಡಕ್ಕೆ: ಡಾ. ಎಚ್. ಎಸ್. ಅನುಪಮಾ, ₹ 60
81. ಅಭಿವ್ಯಕ್ತಿ ಸ್ವಾತಂತ್ರ್ಯ: ವಿವಿಧ ಆಯಾಮಗಳು – ಸಂ: ಬಸೂ, ಎಚ್.ಎಸ್. ಅನುಪಮಾ ₹ 120


82. ನನ್ನ ಶಬ್ದ ನಿನ್ನಲಿ ಬಂದು (ಕಾವ್ಯ) – ಕೆ.ಪಿ. ಮೃತ್ಯುಂಜಯ ₹ 100
(ವಿಭಾ ಸಾಹಿತ್ಯ ಪ್ರಶಸ್ತಿ – 2013 ಪುರಸ್ಕೃತ ಕೃತಿ)
83. ನೆನಪಿನ ಹಕ್ಕಿ (ದಲಿತ ಆತ್ಮಕತೆ) ಮರಾಠಿ ಮೂಲ: ಪ್ರ. ಈ. ಸೋನಕಾಂಬಳೆ
ಅನು: ಚಂದ್ರಕಾಂತ ಪೋಕಳೆ ₹ 140
84. ಹೆಣ್ಣು: ಸಂಕರ ಕಾಲದ ಆತ್ಮಪ್ರಜ್ಞೆ – ಡಾ. ಎಚ್. ಎಸ್. ಅನುಪಮಾ, ₹ 130
(ರಮಾಬಾಯಿ ಅಂಬೇಡ್ಕರ್ ಪುಸ್ತಕ ಬಹುಮಾನ ಪುರಸ್ಕೃತ ಕೃತಿ)
85. ಅಂಡಮಾನ್: ಕಂಡ ಹಾಗೆ – (ಪ್ರವಾಸ) ಡಾ. ಎಚ್. ಎಸ್. ಅನುಪಮಾ, ₹ ೪0
(ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೃತಿ)
86. ಹುಲಿಯ ನೆರಳಿನೊಳಗೆ ಅಂಬೇಡ್ಕರ್‌ವಾದಿಯ ಆತ್ಮಕಥೆ – ನಾಮದೇವ ನಿಮ್ಗಾಡೆ ₹ 90
87. ಸೂಫಿ ಕಥಾ ಲೋಕ – ಕನ್ನಡಕ್ಕೆ : ಪ್ರೊ. ಬಿ. ಗಂಗಾಧರಮೂರ್ತಿ ₹ 250
88. ಮೌಢ್ಯ ವಿರೋಧಿ ಹೋರಾಟಗಾರ ಎಚ್ಚೆನ್: ಡಾ. ಎಚ್. ನರಸಿಂಹಯ್ಯನವರ
ಸಂಕ್ಷಿಪ್ತ ಜೀವನ ಚಿತ್ರಣ – ಪ್ರೊ. ಬಿ.ಗಂಗಾಧರಮೂರ್ತಿ ₹ 90
89. ಮೋಟಾರ್ ಸೈಕಲ್ ಡೈರಿ: ಪ್ರವಾಸಿಯ ಟಿಪ್ಪಣಿಗಳು. ಚೆ.
ಅನು: ಡಾ ಎಚ್ ಎಸ್ ಅನುಪಮಾ ₹ 150
90 ಒಳ ಮೀಸಲಾತಿ: ಮುಟ್ಟಲಾರದವನ ಒಡಲಾಳ – ಮರಡ್ಡಿ,
ವೆಂಕಟೇಶ ಬೇವಿನಬೆಂಚಿ, ಗುಂಜಳ್ಳಿ, ರಮೇಶ ಅರೋಲಿ ₹ 100
91. ಛತ್ರಪತಿ ಶಾಹೂ: ಜನರ ನೋವಿಗೆ ಮಿಡಿದ ಪ್ರಾಣಮಿತ್ರ – ಡಾ ಎಚ್. ಎಸ್. ಅನುಪಮಾ ₹ 110
92. ಮುಳ್ಳ ಮೇಲಿನ ಸೆರಗು–ಅತ್ಯಾಚಾರ ಮತ್ತು ಕಾನೂನು: ಇಣುಕು ನೋಟ:
ಡಾ ಎಚ್. ಎಸ್. ಅನುಪಮಾ ₹ 60
93. ದಲಿತ ಸಮಾಜ: ಇಂದಿನ ಸವಾಲುಗಳು – ಜಿಯಾಲಾಲ ಆರ್ಯ, ಅನು: ಆರ್. ಪಿ. ಹೆಗಡೆ ₹ 80
94. ದಲಿತ ಸಾಹಿತ್ಯದ ಸೌಂದರ್ಯ ಶಾಸ್ತ್ರ: ಓಂ ಪ್ರಕಾಶ ವಾಲ್ಮೀಕಿ, ಅನು: ಆರ್. ಪಿ. ಹೆಗಡೆ ₹ 100
(ಕನ್ನಡ ಪುಸ್ತಕ ಪ್ರಾಧಿಕಾರದ ಪುಸ್ತಕ ಸೊಗಸು ಪುರಸ್ಕಾರ ಪಡೆದ ಕೃತಿ)
95. ಆರೆಸ್ಸೆಸ್ ಮತ್ತು ಬಿಜೆಪಿ: ಒಂದೇ ಹಾದಿ:ಭಿನ್ನ ಶ್ರಮ –
ಎ. ಜಿ. ನೂರಾನಿ, ಕನ್ನಡಕ್ಕೆ: ಸುರೇಶ ಭಟ್, ಬಾಕ್ರಬೈಲು. ₹ 150
96. ಕ್ರಾಂತಿ ಜ್ಯೋತಿ ಸಾವಿತ್ರಿಬಾಯಿ ಫುಲೆ: ಡಾ ಎಚ್. ಎಸ್. ಅನುಪಮಾ ₹ 60
97. ಪುರೋಹಿತಶಾಹಿ ಮತ್ತು ಗುಲಾಮಗಿರಿ: ಜ್ಯೋತಿಬಾ ಫುಲೆ ಅನು: ಬಿ ಶ್ರೀನಿವಾಸ ₹ 100
98. ಸಾಕಾರದತ್ತ ಸಮಾನತೆಯ ಕನಸು: ಸಂ: ಪ್ರೀತಿ ಶುಭಚಂದ್ರ ಮತ್ತು ಎಂ. ಎನ್. ಸುಮನಾ, ₹ 120
99. ಮಂದಿರ ಅಪವಿತ್ರೀಕರಣ ಮತ್ತು ಇಂಡೊ–ಮುಸ್ಲಿಂ ಸಾಮ್ರಾಜ್ಯಗಳು–
ರಿಚರ್ಡ್ ಎಂ. ಈಟನ್ ಅನು: ಸುರೇಶ ಭಟ್, ಬಾಕ್ರಬೈಲ್ ₹ 60
100. ಭಗತ್‌ಸಿಂಗ್ ಜೈಲಿನ ಡೈರಿ ಸಂ. ಚಮನ್‌ಲಾಲ ಅನು: ಡಾ. ಎಚ್. ಎಸ್. ಅನುಪಮಾ ₹ 170
101. ಕತ್ತೆ ಪುರಾಣ: (ನಾಟಕ) ಬ್ರಿಜೇಶ್ ಶರ್ಮಾ ಮತ್ತು ಕಲಾವಿದರ ತಂಡ
ಅನು: ಪ್ರೊ. ಬಿ. ಗಂಗಾಧರಮೂರ್ತಿ ₹ 40
102. ಚಿತ್ತ ಭಿತ್ತಿ (ಕವನ) ರೂಪಶ್ರೀ ಕಲ್ಲಿಗನೂರ ₹ 90
(2014 ರ ವಿಭಾ ಸಾಹಿತ್ಯ ಪ್ರಶಸ್ತಿ ಪುರಸ್ಕೃತ ಕೃತಿ)
103. ಮನು v/s ಅಂಬೇಡ್ಕರ್: ಜಿ. ಕೆ. ಗೋವಿಂದರಾವ್ ₹ 30
104. ವೀಸಾದ ನಿರೀಕ್ಷೆಯಲ್ಲಿ ನೆನಪುಗಳು – ಡಾ ಬಿ.ಆರ್.ಅಂಬೇಡ್ಕರ್
ಅನು : ಸದಾಶಿವ ಮರ್ಜಿ ₹ 90

105. ಡಾ. ಬಿ. ಆರ್. ಅಂಬೇಡ್ಕರ್ – ವರ್ತಮಾನದೊಂದಿಗೆ ಮುಖಾಮುಖಿ ಸಂ ಬಿ ಯು ಸುಮಾ ₹ 150
106. ಸಂತೆಯೊಳಗೊಂದು ಮನೆ : ಬಿ ಯು ಸುಮಾ ₹ 140
107. ಬಸವಣ್ಣ ಮತ್ತು ಅಂಬೇಡ್ಕರ್‌ಹಾಗೂ ಇತರ ಲೇಖನಗಳು: ಡಾ ರಂಜಾನ್ ದರ್ಗಾ ₹ 130
108. ಪಾಕಿಸ್ತಾನದ ನೆಲದಲ್ಲಿ ಸಂಬಂಧಗಳ ಹುಡುಕಾಟ : ಶೂದ್ರ ಶ್ರೀನಿವಾಸ ₹ 60
109. ಯು. ಆರ್. ಎಂಬ ನೀವು – ಒಂದು ನೋಟ : ಶೂದ್ರ ಶ್ರೀನಿವಾಸ ₹ 80
110. ಅವಳ ನಡೆದಂತೆ– ಗಜಲ್‌ಗಳು : ಶೂದ್ರ ಶ್ರೀನಿವಾಸ ₹ 80
111. ಕಳಸಾ–ಬಂಡೂರಿ: ನೀರಿಗಾಗಿ ಹಾಹಾಕಾರ ಮತ್ತು ನೀಚ ರಾಜಕಾರಣ :
ಸಿರಿಮನೆ ನಾಗರಾಜ್ ₹ 25
112. ಮೊಳಕೆಯೊಡೆಯದ ಬೀಜ(ಕಾವ್ಯ): ವಸು ಮಳಲಿ ₹ 90
113. ಉರಿವ ಕುಡಿಯ ನಟ್ಟ ನಡುವೆ : ರೂಮಿ ಕವಿತೆಗಳು ಅನು: ಡಾ ಅನುಪಮಾ ₹ 120
114. ಕಾಲನ ಕಾಲಂದುಗೆ (ಕಾವ್ಯ) : ಪ್ರಜ್ಞಾ ಮತ್ತಿಹಳ್ಳಿ ₹ 70
(2015ರ ವಿಭಾ ಸಾಹಿತ್ಯ ಪ್ರಶಸ್ತಿ ಪುರಸ್ಕೃತ ಕೃತಿ)
115. ಗೀತೆ: ಒಳಗಿನ ಸತ್ಯ ಏನು? ಡಾ. ವಿ.ಆರ್. ನಾರ್ಲಾ ಅನು: ಪ್ರೊ. ಬಿ ಗಂಗಾಧರಮೂರ್ತಿ ₹ 330
116. ದಲಿತ ಸಂವೇದನೆ : ಡಾ. ಅಪ್ಪಗೆರೆ ಸೋಮಶೇಖರ್ ₹ 150
117. ಸಾರಾ ಶಗುಫ್ತಾ : ಜೀವನ ಮತ್ತು ಕವಿತೆ–ಅಮೃತಾ ಪ್ರೀತಂ
ಅನು: ಹಸನ್ ನಯೀಂ ಸುರಕೋಡ ₹ 150
118. ಬ್ರಾಹ್ಮಣವಾದಿ ಭಾರತ v/s ದಲಿತ ಭಾರತ – ಸನತಕುಮಾರ ಬೆಳಗಲಿ ₹ 160
119. ಓದಿನ ಜಾಡು– ಸಾಹಿತ್ಯ ಸಾಂಸ್ಕೃತಿಕ ಲೇಖನಗಳು : ಡಾ ರಂಗನಾಥ ಕಂಟನಕುಂಟೆ ₹ 160
120. ಮಾಂಸದಂಗಡಿಯ ನವಿಲು : ಎನ್ಕೆ ಕವಿತೆಗಳು ₹ 140
121. ಜಾತಿ : ಸಾಮಾಜಿಕ ಪ್ರತ್ಯೇಕತೆ ಮತ್ತು ಬಡತನ : ಸುಖದೇವ ಥೋರಟ್
ಅನು: ಬಿ. ಶ್ರೀಪಾದ ₹ 40
122. ತಿಗುರಿ ತಿರುಗಿಸು ನೇಗಿಲು ಉಳು: ಶ್ರಮ ಗೌರವ ಪಾಠಗಳು
–ಕಂಚ ಐಲಯ್ಯ ಅನು: ಸುಜ್ಞಾನಮೂರ್ತಿ ₹ 120
123. ದಲಿತ ರಾಜಕೀಯ–ರಾಂ ಪುನಿಯಾನಿ ಅನು: ಸುಜ್ಞಾನಮೂರ್ತಿ ₹ 120
124. ಮನುಸ್ಮೃತಿ: ಅಪರಾಧ–ಶಿಕ್ಷೆ–ಕೆ. ಬಾಲಗೋಪಾಲ್ ಅನು: ಸುಜ್ಞಾನಮೂರ್ತಿ ₹ 80
125. ಎಸ್ಸಿ/ಎಸ್ಟಿ ಅನುದಾನ: ಹಂಚಿಕೆ–ವಾಪಸಾತಿ– ಅನು: ಸುಜ್ಞಾನಮೂರ್ತಿ ₹ 70
126. ಭಾರತದ ಚರಿತ್ರೆಯಲ್ಲಿ ರೈತ–ಇರ್ಫಾನ್ ಹಬೀಬ್– ಅನು: ಸುಜ್ಞಾನ ಮೂರ್ತಿ ₹ 60
127. ಅಸ್ಪೃಶ್ಯತೆ: ವೈಕಂ ಹೋರಾಟ ಚರಿತ್ರೆ–ಪೆರಿಯಾರ್– ಅನು: ಸುಜ್ಞಾನ ಮೂರ್ತಿ ₹ 60
128. ಅಸಮರ್ಥನ ಜೀವನಯಾತ್ರೆ(ಕಾದಂಬರಿ)–ತ್ರಿಪುರನೇನಿ
ಗೋಪೀಚಂದ್– ಅನು: ಸುಜ್ಞಾನಮೂರ್ತಿ ₹ 100
129. ಸ್ವಾಭಿಮಾನದ ಮದುವೆಗಳು– ಅನು: ಸುಜ್ಞಾನಮೂರ್ತಿ ₹ 70
130. ಆಕಾಶ ದೇವರು– ನಗ್ನಮುನಿ ಅನು ಅನು: ಸುಜ್ಞಾನಮೂರ್ತಿ ₹ 80
131. ನೀಲಿಬಾನಿನ ಕೆಂಪು ಸೂರ್ಯ : ಜೆಎನ್ಯೂನ –
ಆಜಾದಿ ಭಾಷಣಗಳು ಅನು: ಚೇತನಾ ತೀರ್ಥಹಳ್ಳಿ ₹ 100
132. ಬಹುಜನ ಸಂಸ್ಕೃತಿವಾದ ಮತ್ತು ಲೇಖಕ– ಜಯಂತ ಪವಾರ
ಅನು: ಚಂದ್ರಕಾಂತ ಪೋಕಳೆ ₹ 40
133. ದೇವರ ಜನ್ಮ ರಹಸ್ಯ : ಗೋರಾ ಅನು : ಸಿದ್ರಾಮರೆಡ್ಡಿ ಇಟಗಿ ₹ 50
134. ಬಿ.ಟಿ. ಹತ್ತಿ; ರೈತರ ಕೊರಳ ಕುಣಿಕೆ ಬಿಗಿಗೊಳಿಸಿದ ಬೆಳೆ –ಕೆ.ಪಿ. ಸುರೇಶ್ ಮತ್ತು ತಂಡ ₹ 30
135. ನಾನು ಕಲಬುರ್ಗಿ, ಡಾ. ರಾಜೇಂದ್ರ ಚೆನ್ನಿ, ಡಾ. ರಹಮತ್ ತರೀಕೆರೆ, ಡಾ. ಮೀನಾಕ್ಷಿ ಬಾಳಿ ₹ 120

136	ಎಲ್ಲ್ಯಾದರೂ ಬದುಕಿರು ಗೆಳೆಯಾ (ಕಥೆ) ಮಾಲತಿ ಪಟ್ಟಣಶೆಟ್ಟಿ	₹ 80
137.	ಚಿವುಟಿದಷ್ಟೂ ಚಿಗುರು (ಕಥೆ) ಡಾ. ಎಚ್. ಎಸ್. ಅನುಪಮಾ	₹ 150
138.	ಜೀವಕೋಶ (ಆರೋಗ್ಯ ಲೇಖನಗಳು) ಡಾ. ಎಚ್. ಎಸ್. ಅನುಪಮಾ	₹ 150
139.	ನೈಲ್ ನದಿಯಗುಂಟ (ಪ್ರವಾಸ ಕಥನ) ಡಾ. ಎಚ್. ಎಸ್. ಅನುಪಮಾ	₹ 120
140.	ಹಿಂದೂತ್ವ ಮತು ದಲಿತರು (ಸಂ) ಆನಂದ ತೇಲ್ತುಂಬ್ಡೆ ಅನು ಸಂ : ಪ್ರೊ. ಬಿ. ಗಂಗಾಧರಮೂರ್ತಿ	₹ 160
141.	ದಲಿತ ಪ್ರಜ್ಞೆಯ ದನಿ ಜ್ಯೋತಿಬಾ ಫುಲೆ : ಡಾ. ಎಚ್. ಎಸ್. ಅನುಪಮಾ	₹ 80
142.	ನಾನೇಕೆ ಹಿಂದೂ ಅಲ್ಲ : ಕಂಚ ಐಲಯ್ಯ ಅನು: ಮಂಗಳೂರು ವಿಜಯ	₹ 140
143.	ಭಾರತೀಯ ಸಂಸ್ಕೃತಿಯ ಜಾತಿ ಲಕ್ಷಣ : ವಿ.ಆರ್. ನಾರ್ಲ್ಹಾ, ಅನು : ಪ್ರೊ. ಗಂಗಾಧರ ಮೂರ್ತಿ	₹ 80
144.	ಅಸ್ಪೃಶ್ಯತೆ ಎಂಬ ವಿಷಕೂಸಿನ ಸುತ್ತ : ಡಾ.ಎಸ್.ಬಿ. ಜೋಗೂರು	₹ 90
145.	ಬುದ್ಧಚರಿತೆ, ಖಂಡಕಾವ್ಯ, ಡಾ.ಎಚ್.ಎಸ್. ಅನುಪಮಾ	₹ 90
146.	ಹೊಲಗೇರಿಯ ರಾಜಕುಮಾರ, ಡಾ. ಶಿವರುದ್ರ ಕೆ. ಕಲ್ಲೋಳಿಕರ	₹ 110
147.	ಭಾರತೀಯ ಭಾಷಾ ಸಾಹಿತ್ಯಗಳ ವರ್ಗಸೆಲೆ, ಸಂ. ಪ್ರೊ. ಬಿ. ಗಂಗಾಧರ್‌ಮೂರ್ತಿ	₹ 110
148.	ನಾಗಸಂದ್ರ ಭೂ ಆಕ್ರಮಣ ಚಳವಳಿ, ಪ್ರೊ. ಬಿ. ಗಂಗಾಧರ್‌ಮೂರ್ತಿ	₹ 100
149.	ನೆನಪುಗಳು, ಪಾಬ್ಲೋ ನೆರೂಡನ ಆತ್ಮಕಥೆ, ಅನು: ಓ.ಎಲ್. ನಾಗಭೂಷಣ ಸ್ವಾಮಿ	₹ 300
150.	ಹಿಂದೂ ಧರ್ಮದ ತತ್ತ್ವ, ಡಾ. ಬಿ.ಆರ್. ಅಂಬೇಡ್ಕರ್, ಅನು: ಸುರೇಶ ಭಟ್, ಬಾಕ್ರಬೈಲ್	₹ 80
151.	ಅಸ್ಮಿತೆ, ರಾಜಕಾರಣ ಮತ್ತು ಮೂಲಭೂತವಾದ ಕೆಲವು ಚಿಂತನೆಗಳು ಮುಜಾಫರ್ ಅಸ್ಸಾದಿ	₹ 130
152.	ಒಡೆದ ಬಣ್ಣದ ಚಿತ್ರಗಳು, (ಕಾವ್ಯ) ಮಹಾಂತೇಶ್ ಪಾಟೀಲ	₹ 80
153.	ಸಾಂಸ್ಕೃತಿಕ ರಾಜಕಾರಣದ ನೆಲೆಗಳು, ರಾಜೇಂದ್ರ ಚೆನ್ನಿ	₹ 100
154.	ಬಸವಣ್ಣ ಏಕೆ ಬೇಕು? ರಂಜಾನ್ ದರ್ಗಾ	₹ 60
155.	ನಾನು ಹಿಂದೂ ಆಗಿ ಸಾಯಲಾರೆ, ಸದಾಶಿವ ಮರ್ಜಿ	₹ 60
156.	ಕತ್ತಲ ನಕ್ಷತ್ರ, ತೆಲುಗಿನಲ್ಲಿ ವಿರಸಂ, ಕನ್ನಡಕ್ಕೆ : ಸುಜ್ಞಾನಮೂರ್ತಿ ಬಿ.	₹ 120

* ಪ್ರತಿಗಳು ಮುಗಿದಿವೆ.

ಬಸವಣ್ಣ ಏಕೆ ಬೇಕು?



ಸಮತಾ ಸಿಂಧು

ಬಸವ ಅಣ್ಣ
ತೆರೆಸಿದ ಕಣ್ಣ.

ಬಸವ ತಂದೆ
ನಿನ್ನೆಡೆ ಬಂದೆ.

ಬಸವ ಶರಣ
ಜಗದ ಹರಣ.

ಬಸವ ಭಕ್ತ
ಬಲು ಸಶಕ್ತ.

ಬಸವ ದೇವ
ಮಧುರಭಾವ.

ಬಸವ ಬಿಂದು
ಸಮತಾಸಿಂಧು.

ಬಸವಜ್ಯೋತಿ
ಜಗದ ಪ್ರೀತಿ.

ಬಸವ ಪ್ರಜ್ಞೆ
ನ್ಯಾಯ ಸಂಜ್ಞೆ.

ಬಸವ ಭಾಗ್ಯ
ಲೋಕಯೋಗ್ಯ.

ಬಸವಚೇತನ
ನಿತ್ಯ ನೂತನ.

-ರಂಜಾನ್ ದರ್ಗಾ

ಲಡಾಯಿ ಪ್ರಕಾಶನ
ಗದಗ

ಬೆಲೆ : ರೂ. 60/-